
ಗುರುವಾರ, ಜೂನ್ 30, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 180 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಮುಂದಿನ ದಿನಗಳಲ್ಲಿ ನಡೆಯಲಿರುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ 'ಸಾಮಾನ್ಯಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳು ಇಲ್ಲಿವೆ...



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
53,027 ▼	15,799 ▼	₹ 52,700 (ಬೆಂಗಳೂರು) ▼	₹63,100 (ಬೆಂಗಳೂರು) ▲	79.03 ▼

ಯುಎಪಿಎ ಪ್ರಕರಣ ದಾಖಲು • ಹಂತಕರಿಗೆ ಪಾಕ್ ಉಗ್ರರ ನಂಟು

ಟೈಲರ್ ಹತ್ಯೆ: ಎನ್‌ಐಎ ತನಿಖೆ

ನವದೆಹಲಿ (ಪಿಟಿಐ): ರಾಜಸ್ಥಾನದ ಉದಯಪುರದಲ್ಲಿ ಟೈಲರ್ ಕನ್ಹಯ್ಯ ಲಾಲ್ ಅವರನ್ನು ಕತ್ತು ಸೀಳಿ ಹತ್ಯೆ ಮಾಡಿರುವ ಇಬ್ಬರು ಆರೋಪಿಗಳು, ಈ ಹತ್ಯೆಯ ಮೂಲಕ ದೇಶದಾದ್ಯಂತ ಜನಸಮೂಹಕ್ಕೆ ಭೀತಿ ಮೂಡಿಸುವ ಯೋಜನೆ ಹೊಂದಿದ್ದರು ಎಂದು ಪ್ರಕರಣದ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬುಧವಾರ ಹೇಳಿದೆ.

ಹಂತಕರಿಗೆ ಪಾಕ್ ಮೂಲದ ಉಗ್ರ ಸಂಘಟನೆಗಳ ಜತೆಗೆ ನಂಟು ಇದ್ದು, ಹತ್ಯೆಗೂ ಮೊದಲು ಪಾಕ್‌ಗೆ ಹಲವು ಬಾರಿ ಫೋನ್ ಕರೆ ಮಾಡಿರುವುದು ಮತ್ತು ಐಸಿಸ್ ಉಗ್ರರ ವಿಡಿಯೊಗಳನ್ನು ವೀಕ್ಷಿಸಿರುವುದು ತನಿಖೆಯಲ್ಲಿ ಕಂಡು ಬಂದಿದೆ ಎಂದು ರಾಜಸ್ಥಾನದ ಎಸ್‌ಐಟಿ ಮೂಲಗಳು ಹೇಳಿವೆ.



ರಾಜಸ್ಥಾನದ ಉದಯಪುರದಲ್ಲಿ ಹತ್ಯೆಗೊಳಗಾದ ಕನ್ಹಯ್ಯ ಲಾಲ್ ಅವರ ಅಂತಿಮ ಮೆರವಣಿಗೆಯಲ್ಲಿ ಬುಧವಾರ ಸಾವಿರಾರು ಮಂದಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಪ್ರಕರಣ ಸಂಬಂಧ ಇನ್ನೂ ಐವರನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

ಪ್ರವಾದಿ ಮಹಮ್ಮದ್ ಅವರ ಅವಹೇಳನ ಮಾಡಿದ ಆರೋಪ ಎದುರಿಸುತ್ತಿರುವ ಬಿಜೆಪಿ ವಕ್ತಾರೆ ಯಾಗಿದ್ದ ನೂಪುರ್ ಶರ್ಮಾ ಅವರನ್ನು ಬೆಂಬಲಿಸಿ ಸಾಮಾಜಿಕ ಮಾಧ್ಯಮದಲ್ಲಿ ವಿವಾದಾತ್ಮಕ ಪೋಸ್ಟ್ ಹಂಚಿಕೊಂಡಿದ್ದರು ಎನ್ನುವ ಕಾರಣಕ್ಕೆ ಟೈಲರ್ ಕನ್ಹಯ್ಯ ಅವರ ಶಿರಚ್ಛೇದ ಮಾಡಿದ ರಿಯಾಜ್ ಅನ್ಸಾರಿ ಮತ್ತು ಗೌಸ್ ಮಹ್ಮದ್ ಎಂಬುವವರನ್ನು ರಾಜಸ್ಥಾನ ಪೊಲೀಸರು ಬಂಧಿಸಿದ್ದು, ಎನ್‌ಐಎ ಇವರ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಮತ್ತು ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿ, ವಿಚಾರಣೆ ನಡೆಸುತ್ತಿದೆ.

'ಆರೋಪಿಗಳು ಹರಿತ ಆಯುಧ ಗಳಿಂದ ಕನ್ಹಯ್ಯ ಅವರ ದೇಹದ ಮೇಲೆ 26 ಕಡೆ ಇರಿದಿದ್ದಾರೆ. ಈ ಭೀಕರ ಹತ್ಯೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡು, ಈ ವಿಡಿಯೊವನ್ನು ದೇಶದಾದ್ಯಂತ ಜನರಲ್ಲಿ ಆತಂಕ ಮೂಡಿಸಲು ಮತ್ತು ಭಯೋತ್ಪಾದನೆ ಬಿತ್ತುವ ಉದ್ದೇಶದಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಟ್ಟಿದ್ದಾರೆ. ಇದೊಂದು ಯೋಜಿತ ಕೃತ್ಯ' ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

3E ನೇ ಪುಟ ನೋಡಿ

ಉದ್ಧವ್ ರಾಜೀನಾಮೆ

ಸರ್ಕಾರ ರಚನೆಗೆ ದೇವೇಂದ್ರ ಫಡಣವೀಸ್ ಹಕ್ಕು ಮಂಡಿಸುವ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ತಮ್ಮ ಸ್ಥಾನಕ್ಕೆ ಬುಧವಾರ ರಾತ್ರಿ ರಾಜೀನಾಮೆ ಸಲ್ಲಿಸಿದ್ದಾರೆ.

ಶಿವಸೇನಾ ಮುಖಂಡ ಹಾಗೂ ಸಚಿವ ಏಕನಾಥ ಶಿಂಧೆ ಅವರ ನೇತೃತ್ವದಲ್ಲಿ 39 ಶಾಸಕರು ಮಹಾ ವಿಕಾಸ್ ಆಘಾಡಿ ಸರ್ಕಾರದ ವಿರುದ್ಧ ಬಂಡಾಯವೆದ್ದ 9 ದಿನಗಳ ಬಳಿಕ ಠಾಕ್ರೆ ನೇತೃತ್ವದ ಸರ್ಕಾರ ಬಿದ್ದಿದೆ.

ವಿಶ್ವಾಸಮತ ಸಾಬೀತುಪಡಿಸ ಬೇಕು ಎಂಬ ರಾಜ್ಯಪಾಲರ ಆದೇಶಕ್ಕೆ ತಡೆ ಕೋರಿ ಶಿವಸೇನಾ ಸಲ್ಲಿಸಿದ ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಗುರು ವಾರವೇ ವಿಶ್ವಾಸಮತ ಯಾಚಿಸಬೇಕು ಎಂದು ಹೇಳಿತು. ಇದರ ಬೆನ್ನಲ್ಲೇ, ಠಾಕ್ರೆ ಅವರು ಸ್ವತಃ ತಮ್ಮ ಕಾರನ್ನು ರಾಜಭವನಕ್ಕೆ ಚಲಾಯಿಸಿಕೊಂಡು ಬಂದು ರಾಜ್ಯಪಾಲರಿಗೆ ರಾಜೀನಾಮೆ ಸಲ್ಲಿಸಿದರು.

ಇದರೊಂದಿಗೆ ಕಳೆದ ಎರಡೂವರೆ ವರ್ಷಗಳಿಂದ ಮಹಾರಾಷ್ಟ್ರದಲ್ಲಿದ್ದ ಶಿವಸೇನಾ-ಎನ್‌ಸಿಪಿ ಹಾಗೂ ಕಾಂಗ್ರೆಸ್ ಮೈತ್ರಿಯ ಮಹಾವಿಕಾಸ್ ಆಘಾಡಿ ಸರ್ಕಾರವು ಪತನವಾಗಿದೆ.



ಮುಂಬೈನಲ್ಲಿ ಬುಧವಾರ ರಾತ್ರಿ ಶಿವಸೇನಾದ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಛತ್ರಪತಿ ಶಿವಾಜಿ ಮಹಾರಾಜ ಅವರ ಭಾವಚಿತ್ರಕ್ಕೆ ನಮಿಸಿದರು –ಪಿಟಿಐ ಚಿತ್ರ

ಶಿವಸೇನಾ ಮುಖ್ಯಸ್ಥ ಠಾಕ್ರೆ ಅವರು ಮಹಾರಾಷ್ಟ್ರದ ವಿಧಾನ ಪರಿಷತ್‌ನ ಸದಸ್ಯತ್ವಕ್ಕೂ ರಾಜೀನಾಮೆ ಸಲ್ಲಿಸಿದ್ದಾರೆ.

'ನನ್ನ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ. ನನಗೆ ಯಾವುದೇ ವಿಷಾದ ಇಲ್ಲ. ಆದರೆ, ಬಂಡಾಯ ಸಾರಿದವರಿಂದ ನೋವಾಗಿದೆ' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಇದರ ಬೆನ್ನಲ್ಲೇ, ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರು ಮುಂದಿನ ಸರ್ಕಾರ ರಚನೆಯ ಪ್ರಕ್ರಿಯೆಯನ್ನು ಸದ್ದಿಲ್ಲದೆ ಆರಂಭಿಸಿದ್ದಾರೆ ಎನ್ನಲಾಗಿದೆ.

3E ನೇ ಪುಟ ನೋಡಿ

ವಿಶ್ವಾಸಮತ ಸಾಬೀತಿಗೆ 'ಸುಪ್ರೀಂ' ಸೂಚನೆ

ನವದೆಹಲಿ: ಏಕನಾಥ ಶಿಂಧೆ ಮತ್ತು ಇತರ 48 ಶಾಸಕರ ಬಂಡಾಯದ ನಂತರ ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ್ ಅಘಾಡಿ ಸರ್ಕಾರಕ್ಕೆ ಗುರುವಾರ ಬೆಳಿಗ್ಗೆ 11 ಗಂಟೆಗೆ ವಿಧಾನಸಭೆಯಲ್ಲಿ ವಿಶ್ವಾಸಮತ ಯಾಚಿಸುವಂತೆ ಮಹಾರಾಷ್ಟ್ರ ರಾಜ್ಯಪಾಲರು ನೀಡಿರುವ ನಿರ್ದೇಶನಕ್ಕೆ ತಡೆನೀಡಲು ಬುಧವಾರ ಸುಪ್ರೀಂಕೋರ್ಟ್ ನಿರಾಕರಿಸಿದೆ.

3E ನೇ ಪುಟ ನೋಡಿ

> ಸುಪ್ರೀಂ ಕೋರ್ಟ್‌ನ ಈ ಆದೇಶವನ್ನು ಗೌರವಿಸುತ್ತೇವೆ. ಪ್ರಜಾಪ್ರಭುತ್ವವನ್ನು ಎಲ್ಲರೂ ಅನುಸರಿಸಬೇಕು
> **ಉದ್ಧವ್ ಠಾಕ್ರೆ,** ಶಿವಸೇನಾ ಅಧ್ಯಕ್ಷ

ಪಿಯುಸಿ: ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯಿತಿ

ಬೆಂಗಳೂರು: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾಗುವ ವಿದ್ಯಾರ್ಥಿನಿಯರಿಗೆ ಈ ಶೈಕ್ಷಣಿಕ ಸಾಲಿನಿಂದ (2022–23) ಶಾಶ್ವತವಾಗಿ ಸಂಪೂರ್ಣ ಶುಲ್ಕ (₹ 456) ವಿನಾಯಿತಿ ನೀಡಿ ಪದವಿಪೂರ್ವ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಎಸಿಬಿಯೇ ಕಲೆಕ್ಷನ್ ಸೆಂಟರ್

ಎಡಿಜಿಪಿಯೇ ಕಳಂಕಿತ ಅಧಿಕಾರಿ • ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಭ್ರಷ್ಟಾಚಾರವೇ ದಂಧೆಯಾಗಿ ಪರಿಣಮಿಸಿದೆ. ಸ್ವಯಂ ಎಸಿಬಿಯೇ ಅತಿ ದೊಡ್ಡ ಭ್ರಷ್ಟರ ಕೂಪವಾಗಿದೆ. ಇದರ ಮುಖ್ಯಸ್ಥ ಎಡಿಜಿಪಿಯೇ ಕಳಂಕಿತ ಅಧಿಕಾರಿ, ಎಸಿಬಿ ಕಚೇರಿಗಳೆಲ್ಲಾ ಕಲೆಕ್ಷನ್ ಸೆಂಟರ್‌ಗಳಾಗಿವೆ, ದೊಡ್ಡ ದೊಡ್ಡ ಐಎಎಸ್, ಐಪಿಎಸ್ ಅಧಿಕಾರಿಗಳನ್ನ ಹಿಡಿಯೋದು ಬಿಟ್ಟು ಬಾಲಂಗೋಚಿಗಳನ್ನು ಹಿಡಿದುಕೊಂಡು ಕೋರ್ಟ್‌ಗೆ ಬರುತ್ತೀರಿ...

ಲಂಚ ಪ್ರಕರಣದಲ್ಲಿ ಆರೋಪಿ ಯಾಗಿರುವ ಬೆಂಗಳೂರು ನಗರ ಜಿಲ್ಲಾಧಿ ಕಾರಿ ಕಚೇರಿಯ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಸಲ್ಲಿಸಿರುವ ಜಾಮೀನು ಅರ್ಜಿ ಯನ್ನು ಬುಧವಾರ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಎಚ್.ಪಿ.ಸಂದೇಶ್, ಎಸಿಬಿ ವಿರುದ್ಧ ಕೆಂಡಕಾರಿದ ಪರಿಯಿದು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಎ.ಎಸ್. ಪೊನ್ನಣ್ಣ ಅವರು ಪ್ರಕರಣದ ವಿವರಣೆ ನೀಡಲು ಮುಂದಾಗುತ್ತಿದ್ದಂತೆಯೇ, ಎಸಿಬಿ ಪರ ವಕೀಲ ಪಿ.ಎನ್. ಮನ ಮೋಹನ್ ಅವರು, 'ಈ ಪ್ರಕರಣ ದಲ್ಲಿ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರನ್ನೂ ಆರೋಪಿಯನ್ನಾಗಿ ಮಾಡಲಾಗಿದೆ. ಪ್ರಕರಣ ರದ್ದು ಕೋರಿದ್ದ ಮಂಜುನಾಥ್ ಅವರ ಅರ್ಜಿಯಲ್ಲಿ ನಿನ್ನೆಯಷ್ಟೇ ಹೈಕೋರ್ಟ್ ಮಧ್ಯಂತರ ಆದೇಶ ನೀಡಲು ನಿರಾಕರಿಸಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಈ ಮಾತಿಗೆ ನ್ಯಾಯಮೂರ್ತಿಗಳು, 'ಎಸಿಬಿ ಏಕೆ ರಚನೆಯಾಗಿದೆ ನಿಮಗೆ ಗೊತ್ತಾ, ಇವತ್ತು ಎಸಿಬಿಯೇ ಭ್ರಷ್ಟಾಚಾರದ ದಂಧೆ ನಡೆಸುತ್ತಿದೆ. ಸರ್ಕಾರ ಉದ್ದೇಶಪೂರ್ವಕವಾಗಿ ಕಳಂಕಿತರನ್ನು ಇಲ್ಲಿಗೆ ಹಾಕುತ್ತಿದೆ. ನೀವು ಕೇವಲ ಗುಮಾಸ್ತರ ವಿರುದ್ಧ ಕೇಸು ಬುಕ್ ಮಾಡುವುದಲ್ಲ' ಎಂದು ಕಟು ಮಾತಿನಲ್ಲಿ ತರಾಟೆಗೆ ತೆಗೆದುಕೊಂಡರು.

'ಕಂದಾಯ ಅಧಿಕಾರಿಗಳ ಬಳಿ ಹೋಗಿ ಅಲ್ಲಿ ಏನೇನೆಲ್ಲಾ ಆಗುತ್ತದೆ ಎಂದು ನಿಮಗೆ ತಿಳಿಯುತ್ತದೆ. ಸಮಾಜಕ್ಕೆ ಅಂಟಿರುವ ಭ್ರಷ್ಟಾಚಾರದ ಈ ಕ್ಯಾನ್ಸರ್‌ನಲ್ಲಿ ಮೇಲ್ಮಟ್ಟದ ಅಧಿಕಾರಿಗಳನ್ನು ಆರೋಪಿಗಳನ್ನಾಗಿ ಮಾಡದೇ ಕೆಳ ಹಂತದ ಅಧಿಕಾರಿಗಳನ್ನು ಮಾತ್ರ ಆರೋಪಿಗಳನ್ನಾಗಿ ಮಾಡಲಾಗುತ್ತಿದೆ.

5 ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅಪಘಾತ: ನಟ ಅವಿನಾಶ್ ಅಪಾಯದಿಂದ ಪಾರು

ಬೆಂಗಳೂರು: ನಗರದ ಎಂ.ಜಿ. ರಸ್ತೆಯ ಅನಿಲ್‌ಕುಂಬ್ಳೆ ವೃತ್ತದ ಬಳಿ ಬುಧವಾರ ಬೆಳಿಗ್ಗೆ ಕಾರು ಹಾಗೂ ಕಂಟೇನರ್ ಮಧ್ಯೆ ಅಪಘಾತ ಸಂಭವಿಸಿದ್ದು, ಕೆಜಿಎಫ್ 2 ಚಿತ್ರದ ನಟ ಬಿ.ಎಸ್. ಅವಿನಾಶ್ ಅಪಾಯದಿಂದ ಪಾರಾಗಿದ್ದಾರೆ.

ಅವರು ಜಯನಗರದಿಂದ ತಮ್ಮ ಕಾರಿನಲ್ಲಿ ಎಚ್‌ಆರ್‌ಆರ್ ಲೇಔಟ್‌ಗೆ ತೆರಳುತ್ತಿದ್ದರು. ಎಂ.ಜಿ. ರಸ್ತೆಯಲ್ಲಿ ಎದುರಿನಿಂದ ಬರುತ್ತಿದ್ದ ಕಂಟೇನರ್ ಇವರ ಕಾರಿಗೆ ಡಿಕ್ಕಿ ಹೊಡೆದಿದೆ. ಕಾರಿನ ಮುಂಭಾಗ ನಜ್ಜುಗುಜ್ಜಾಗಿದೆ. ಕಂಟೇನರ್ ಚಾಲಕ ಶಿವಗೌಡನನ್ನು ವಶಕ್ಕೆ ಪಡೆದು, ವಾಹನ ಜಪ್ತಿ ಮಾಡಲಾಗಿದೆ ಎಂದು ಕಬ್ಬನ್‌ಪಾರ್ಕ್ ಸಂಚಾರ ಪೊಲೀಸರು ತಿಳಿಸಿದ್ದಾರೆ.

‘ಪೌರಕಾರ್ಮಿಕರ ಮುಷ್ಕರಕ್ಕೆ ಬೆಂಬಲವಿಲ್ಲ’


ಬೆಂಗಳೂರು: ಜುಲೈ 1ರಿಂದ ಆರಂಭವಾಗಲಿರುವ ಪೌರಕಾರ್ಮಿಕರ ಮುಷ್ಕರಕ್ಕೆ ಬೆಂಬಲವಿಲ್ಲ ಎಂದು ಕರ್ನಾಟಕ ರಾಜ್ಯ ಪೌರಕಾರ್ಮಿಕ ಮತ್ತು ಸಫಾಯಿ ಕರ್ಮಚಾರಿ ವರ್ಕರ್ಸ್ ಯೂನಿಯನ್ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯೂನಿಯನ್ ಗೌರವ ಅಧ್ಯಕ್ಷ ಹೆಣ್ಣೂರು ಶ್ರೀನಿವಾಸ್, ಪೌರಕಾರ್ಮಿಕರನ್ನು ಕಾಯಂಗೊಳಿಸುವಂತೆ ಆಗ್ರಹಿಸಿ ಮುಷ್ಕರದ ನೇತೃತ್ವ ವಹಿಸಿರುವ ಸಂಘಟನೆ ರಾಜಕೀಯ ಪಕ್ಷದ ಮುಖವಾಡದಂತೆ ಕಾರ್ಯನಿರ್ವಹಿಸುತ್ತಿದೆ ಎಂದು ಆರೋಪಿಸಿದರು.

ಐಪಿಡಿ ಸಾಲಪ್ಪ ಅಧ್ಯಕ್ಷತೆಯಲ್ಲಿ ರಚನೆಯಾದ ‘ಸ್ವೀಪರ್ಸ್ ಮತ್ತು ಸ್ಕ್ಯಾವೆಂಜರ್‌ಗಳ ಜೀವನ ಹಾಗೂ ಸೇವಾ ಸುಧಾರಣಾ ಸಮಿತಿ’ ನೀಡಿದ್ದ 310 ಪುಟ 17 ಅಂಶಗಳ 96 ಶಿಫಾರಸುಗಳಲ್ಲಿ ಸರ್ಕಾರ ಅಂಗೀಕರಿಸಿರುವ 36 ಅಂಶಗಳನ್ನು ಕೂಡಲೇ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ನೇರ ಪಾವತಿ ಮತ್ತು ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, ಸಹಾಯಕ ಲೋಡರ್ಸ್, ಚಾಲಕರು ಮತ್ತು ಒಳಚರಂಡಿ ಕಾರ್ಮಿಕರನ್ನು ಕಾಯಂಗೊಳಿಸಲು ಐಪಿಡಿ ಸಾಲಪ್ಪ ವರದಿಯನ್ನು ಜಾರಿಗೊಳಿಸಬೇಕು ಎಂದು ಅವರು ಒತ್ತಾಯಿಸಿದರು.

ರಾಜ್ಯದ ಅನೇಕ ಸಂಘ–ಸಂಸ್ಥೆಗಳ ಹೋರಾಟದ ಫಲವಾಗಿ 2017ರಲ್ಲಿ ಪೌರಕಾರ್ಮಿಕರ ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಲಾಯಿತು. ಆದರೆ ಸರ್ಕಾರ ಇಲಾಖೆಗಳ ನೇರ ವೇತನ ಪಾವತಿ ಜಾರಿಗೊಳಿಸಿ, ಬೀದಿ ಗುಡಿಸುವ ಕಾರ್ಮಿಕರಿಗೆ ಮಾತ್ರ ಸ್ಥಳೀಯ ಸಂಸ್ಥೆಗಳ ಮೂಲಕ ವೇತನ ನೀಡಲು ಪ್ರಾರಂಭಿಸಿತು ಎಂದು ತಿಳಿಸಿದರು.



ಕರ್ನಾಟಕ ಬ್ಯಾಂಕಿನ ಎಂ.ಡಿ ಹಾಗೂ ಸಿಇಒ ಮಹಾಬಲೇಶ್ವರ ಎಂ.ಎಸ್. ಅವರಿಗೆ ಶಂಕರಪುರದ ಶೃಂಗೇರಿ ಶಂಕರ ಮಠದಲ್ಲಿ ನಡೆದ ಸಮಾರಂಭದಲ್ಲಿ ವಿಧುಶೇಖರ ಭಾರತೀ ಸ್ವಾಮೀಜಿಯವರು ‘ಶ್ರೀ ಶೃಂಗೇರಿ ಜಗದ್ಗುರು ಭಾರತೀ ತೀರ್ಥ’ ಪುರಸ್ಕಾರ ನೀಡಿ ಗೌರವಿಸಿದರು.

ಕರ್ಣಾಟಕ ಬ್ಯಾಂಕ್ ಎಂ.ಡಿಗೆ ಶೃಂಗೇರಿ ಶ್ರೀ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ಣಾಟಕ ಬ್ಯಾಂಕಿನ ಎಂ.ಡಿ ಹಾಗೂ ಸಿಇಒ ಮಹಾಬಲೇಶ್ವರ ಎಂ.ಎಸ್. ಅವರಿಗೆ ಜೂನ್ 25ರಂದು ನಗರದ ಶಂಕರಪುರದ ಶೃಂಗೇರಿ ಶಂಕರ ಮಠದಲ್ಲಿ ನಡೆದ ಸಮಾರಂಭದಲ್ಲಿ ಭಾರತೀ ತೀರ್ಥ ಸ್ವಾಮೀಜಿಯವರ ಎಪ್ಪತ್ತನೆಯ ವರ್ಧಂತಿಯ ಸವಿನೆನಪಿಗಾಗಿ ಶೃಂಗೇರಿ ವಿಧುಶೇಖರ ಭಾರತೀ ಸ್ವಾಮೀಜಿಯವರು ’ಶ್ರೀ ಶೃಂಗೇರಿ ಜಗದ್ಗುರು ಭಾರತೀ ತೀರ್ಥ’ ಪುರಸ್ಕಾರ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಶ್ರೀಮಠದ ಆಡಳಿತಾಧಿಕಾರಿ ಗೌರಿಶಂಕರ್ ಅವರೂ ಇದ್ದರು.

ಮಹಾಬಲೇಶ್ವರ ಎಂ.ಎಸ್. ತಮ್ಮ ಕೃತಜ್ಞತೆ ವ್ಯಕ್ತಪಡಿಸುತ್ತಾ, ’ವಿಧುಶೇಖರ ಭಾರತೀ ಸ್ವಾಮೀಜಿಯವರ ದಿವ್ಯಹಸ್ತದಿಂದ ಪುರಸ್ಕಾರ ದೊರೆತಿರುವುದು ಅವಿಸ್ಮರಣೀಯ ಹಾಗೂ ಧನ್ಯತೆಯ ಕ್ಷಣವಾಗಿದೆ. ಸ್ವಾಮೀಜಿಗಳಿಗೆ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತೇನೆ. ಈ ಪ್ರಶಸ್ತಿಯು ನನ್ನ ಹಾಗೂ ನಮ್ಮ ಕರ್ಣಾಟಕ ಬ್ಯಾಂಕಿನ ಸಮಾಜಮುಖಿ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ’ ಎಂದು ಅವರು ಹೇಳಿದರು.



ಮುಂಬೈನಲ್ಲಿ ನಮ್ಮ ಹೋಮಿಯೊಪಥಿ ಸಂಸ್ಥೆ 5 ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ‘ಹ್ಯಾಪಿ ಪೇಷೆಂಟ್ಸ್’ ಮತ್ತು ‘ಹ್ಯಾಪಿ ಡಾಕ್ಟರ್ಸ್’ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಗೋವಿಂದ, ಮರಾಠಿ ನಟ ಸ್ವಪ್ನಿಲ್ ಜೋಶಿ ಮತ್ತು ಸಂಸ್ಥೆಯ ಅಧ್ಯಕ್ಷ ಡಾ. ಮೋರ್ ರಘು ಪ್ರಸಾದ್ ಉಪಸ್ಥಿತರಿದ್ದರು

‘ಪಠ್ಯಪುಸ್ತಕ ಪರಿಷ್ಕರಣೆ ಕೈಬಿಡಿ’

ಬೆಂಗಳೂರು: ರೋಹಿತ್ ಚಕ್ರತೀರ್ಥ ಸಮಿತಿ ಮಾಡಿರುವ ಪಠ್ಯಪುಸ್ತಕ ಮರು ಪರಿಷ್ಕಣೆಯನ್ನು ಕೈಬಿಟ್ಟು ಬರಗೂರು ರಾಮಚಂದ್ರಪ್ಪನವರ ಪರಿಷ್ಕರಿಸಿದ ಪಠ್ಯಪುಸ್ತಕಗಳನ್ನೇ ಮುಂದುವರೆಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹಿಸಿದ್ದಾರೆ.

ಪಠ್ಯ ಪರಿಷ್ಕರಣೆ ಲೋಪ ತಿದ್ದುಪಡಿ ಮಾಡಲು ಆದೇಶಿಸಿರುವ ರಾಜ್ಯ ಸರ್ಕಾರದ ಕಣ್ಣೊರೆಸುವ ತಂತ್ರಕ್ಕೆ ಮೊರೆಹೋಗಿದೆ ಎಂದು ಹೇಳಿದ್ದಾರೆ.

ಜಿಲ್ಲಾ ಪಂಚಾಯತ್ ಕೋಲಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ–563101 ದೂರವಾಣಿ: 08152–222570, ಇ–ಮೇಲ್: eepredkolar1@gmail.com

ಅಲ್ಪಾವಧಿ ದ್ವಿ–ಲಕೋಟೆ ಟೆಂಡರ್ ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆ: 06/ 2022–23 ದಿನಾಂಕ: 23.06.2022
ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-IIIರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ದ್ವಿ–ಲಕೋಟೆ ಪದ್ಧತಿಯಲ್ಲಿ (Two Cover System) ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ **ಕೋಲಾರ ಜಿಲ್ಲೆಯ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಒಟ್ಟು 05 ಸಂಖ್ಯೆ ಕಾಮಗಾರಿಗಳಿಗೆ** ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದು, **ಟೆಂಡರ್‌ಗಿಟ್ಟ ಮೊತ್ತ ಸರಾಸರಿ ರೂ: 49.00 ರಿಂದ 88.50 ಲಕ್ಷಗಳು ಆಗಿರುತ್ತದೆ.** ಟೆಂಡರನ್ನು ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ **https://eproc.karnataka.gov.in** ಮುಖಾಂತರ ಇ–ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಹಾಗೂ ಇಲಾಖೆಯಿಂದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ **ದಿನಾಂಕ: 28.06.2022 ರಿಂದ 13.07.2022ರ ಸಂಜೆ: 16.00 ರವರೆಗೆ** ಗುತ್ತಿಗೆದಾರರು ಟೆಂಡರುಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. (2) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 14.07.2022 ರಂದು 16.30 ಗಂಟೆಗೆಂದು** ನಿಗದಿ ಪಡಿಸಲಾಗಿದೆ. (3) ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಗುತ್ತಿಗೆದಾರರಿಗೆ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕವನ್ನು ಪ್ರತ್ಯೇಕವಾಗಿ ದೂರವಾಣಿ ಮುಖಾಂತರ ತಿಳಿಸಲಾಗುವುದು. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಪ್ರೋಟಾಲ್ **(Viz.,https://eproc.karnataka.gov.in)** ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: + 91 8046010000 & +91 8022631200, 080–22230960 & 22234115 ಅನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 167/ಎಂ.ಸಿ.ಎ/2022–23.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/02/2022–23 ದಿನಾಂಕ: 28–06–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 69(2), 69(3) ಮತ್ತು 69(4) ರಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **“ಉದ್ಯಾನವನ ಮತ್ತು ಬಯಲು ಪ್ರದೇಶ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ನಿಗದಿ ಪಡಿಸಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ನಿಗದಿ ಪಡಿಸುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ನಿಗದಿ ಪಡಿಸುವ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಸೌಭಾಗ್ಯ. ಆರ್. ಬಿನ್ ಬಿ. ರಾಮಸ್ವಾಮಿ ಗೌಡ	ನೆಲಮಂಗಲ	ಕಸಬಾ	ವಾಜರಹಳ್ಳಿ	72/6	00–26	ಉದ್ಯಾನವನ ಮತ್ತು ಬಯಲು ಪ್ರದೇಶ	ವಸತಿ
2					72/7	00–28		
					ಒಟ್ಟು	01-14		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನುಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದು, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಸುಸಜ್ಜಿತವಾದ ವಸತಿ ಬಡಾವಣೆಯನ್ನು ನಿರ್ಮಿಸಿ, ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿ ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **“ಉದ್ಯಾನವನ ಮತ್ತು ಬಯಲು ಪ್ರದೇಶ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪಡಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/1118/ಅಡ್ವರ್ಟೋರ್/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

CONNECT ಕ್ಲಾಸಿಫೈಡ್ಸ್

ADMISSION CORNER

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATIONAL

Correspondence Courses

DIRECT FINAL PUC B.Com BA BBA BCA MBA B.Ed Diploma BE D.Pharm PhD: 9739077186/ 8618506480

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

General

LOOKING FOR Interested People To Purchase My Restaurant Aata Uuta Maathu In JP Nagar - Please Call Me (Uday) On 9880577550, If Interested

Business to Business

Business

Timac AGRO Notice for the Sale of 100% Water Soluble mixture of Fertilizers.
Please refer to the order requirement S.O. 2900(E) dated 24th October 2015 in FCO 1985
We are pleased to inform the general public that with reference to S.O. 2900 (E) dated 24/10/2015 issued by the Ministry of Agriculture and Farmers Welfare and Amendment thereafter, TIMAC AGRO India Pvt. Ltd. (TAIPL) will commence the sale of 100% Water Soluble mixture of Fertilizers KSC- I (NPK 14:40:5) and KSC-III (NPK 15:5:35) in the state of Karnataka.
TIMAC AGRO INDIA PRIVATE LIMITED (TAIPL)
36, WeWork Prestige Central, Infantry Road, Bengaluru - 560 001, Karnataka.
Regd. Office: 8/2, Sterling Road 3rd Cross St., Nungambakkam, Chennai - 600034, Tamil Nadu

JOB OPPORTUNITIES

Call Centre

REQUIRED, TEAMLEADER, Telecaller, Field Executive For Bank loan collection (salary 20,000). Direct Recruitment. 9620206756, 9620200756.

General

REQUIRED CIVIL Engineer 5Year Experience In Plot Development Projects at Chikkaballapur. 9900289858 Mail: gaurav@charigangroup.com

Multiple Vacancy

WANTED FIELD EXECUTIVES, OPERATION MANAGER and GENERAL MANAGER to work in Poojyaya Security Services, Contact @ 080- 23536744, 9845996744 raghu_sgr@yahoo.co.in / poojyaya2005@gmail.com

Tailors

WANTED A Lady Tailor with knowing Working English staying around Mathikere, Yeshwanthpur. Contact 9886784714, No. 116, 5th Main Road, Mathikere, Bengaluru-560054

Hotel

REQUIRED IMMEDIATELY for The Odyssey Retreat resort at KanakapuraRoad STORE/PURCHASE ASSISTANT, FRONT OFFICE EXECUTIVES, CAPTAIN, STEWARDS, SALES EXECUTIVES mail your resume to vikas@odysseyretreat.in. Call:9880470004

Teachers/ Professors

REQUIRED SOCIAL, ENGLISH TEACHER for High School,Head Mistress. Royal Public School.Jnanabharathi. Call: 8867569333/ 9035033560

REAL ESTATE SELLING

Sites

Jayanagar

JAYANAGAR 9TH BLOCK BDA 30X50 Site for Sale East Facing EAST END B MAIN ROAD, 9TH BLOCK Contact- 9902726006

PUBLIC NOTICE

BEFORE THE HON'BLE XXV TH ADDITIONAL CITY CIVIL AND SESSIONS JUDGE AT BENGALURU
(CCH-23)P & S C No. 231/2022
BETWEEN:
Smt. Shruthi. M. W/o Late K P Prashanth, Aged about 36 years, R/at Flat No.101, 1st Floor, D S Max Santrupthi Apartments, Gidadakonehalli, Vishveshwaraya Layout, 8th Block, Bengaluru-91
PETITIONER
AND:-
NIL- RESPONDENTS
Whereas, the above named has made petition to this court under section 372 of Indian Succession Act, for the grant of Succession Certificate in favour of the petitioner, in respect of the schedule mentioned below. The below mentioned schedule has held by Late K P Prashanth, the husband of the petitioner herein who expired on 08-08-2020.
Interested parties are hereby called to appear in this court CCH-23 in person or by pleader duly instructed on 16-07-2022 at 11 A. M. inform to show cause against the petitioners failing wherein the appearance will be heard and declared as ex parte.
SCHEDULE
Rs. 5, 35, 897/- (Rs. Five Lakhs Thirty Five Thousand Eight Hundred and Ninety Seven Only) lying with M/s S S C Accounts Payables, L&T Construction, head office TCTC Building 2nd Floor, Post Box No. 979, Mount Poonamalle Road, Manapakkam. Chennai-600089.
Given under my hand & seal of the court on this 29th day of June 2022
Sd/-By the order of the court
Assistant Registrar
City Civil CourtBangalore.
Address for Service:
Naveen Chandra. N. Advocate
#07, 2nd Floor, 1st Main Road, 2nd stage(Club Road), Vijayanagar, Bangalore- 560040, M:9886257390.

manipalhospitals LIFE'S ON
Manipal Hospital Yeshwanthpur notifies our patrons that, medical records (hard copies) pertaining to our patients from 1st Jan-2017 to 31st Dec-2017 will be destroyed on or before 31st July-2022.
If any patient or their legal heir (under the written authorisation of the patient) wishes to obtain a copy of the medical record, they may apply for the same with a written request to the Chief of Medical Services on or before 31st July 2022.
Please be informed that we have also maintained the medical records electronically / electronic medium which is retrievable.
Sd/-
Hospital Director
For, Manipal Hospital Yeshwanthpur

PERSONAL

Change of Name

I AKSHAY SHANKARRAO DHABEKAR residing at Apartment No.1003, D Block Tower 15, Sandeep Vihar, AWHO Whitefield, Kadugodi-Hoskote road, Bangalore-560067, have changed my name to AKSHAY SHANKAR DHABEKAR vide affidavit dated 27-06-2022 before notary Yankoba Bangalore.

I, SHADHIK Basha Noorulla, S/o Noorulla aged about 19 years , Resident of #1351 Nyamath bi Mohalla Kolar Have changed my name to Shadhik Basha vide affidavit dated 28.04.2022 before Notary M Ramalinge Gowda Kolar Henceforth I Shall be called as Shadhik Basha only

CHANGE OF NAME
I, N.L. MAMATHA, D/o. H.N. Lakshminarayanaswamy & W/o. B.S. Sudarshan, aged about: 43 years, R/at: No. 1328, 6th Cross, 11th Main, H.A.L. 3rd Stage, Bengaluru - 560 008, have changed my name to N.L. EACCHUDHA, vide affidavit dated: 23.06.2022 before Advocate & Notary Mahesha J.J. Bangalore. Henceforth I shall be called as N.L. EACCHUDHA only.

I, POOJA HARIHAR D/o, DHRUVA KUMAR HARIHAR, Declare that POOJA (In birth certificate), POOJA DHRUVAKUMAR HARIHAR (In Passport) & POOJA HARIHAR (Reflected in all Academic, School records, Aadhar card etc) all these are one and the same and belonged to me only, I further state that in future will be using & signing my name as POOJA HARIHAR only, vide affidavit dated 28-06-2022 before Notary S.N. Madhu, Bangalore.

I VINAY GOWDA R/@ 106, 2nd Block, Laa Moonstone Apartment Gollahalli Electronic City Bengaluru-100, have changed my name to VINAY GOPAL GOWDA vide affidavit dated 29/06/2022 before notary K.V. Mani

I, GEETHA R. W/o Ravikumar T R/a #824/29 Giddanahalli Main Road, Arkavathinagar Seegehalli Gate, Magadi Main Road, Tavarekere- 562130 Declared That My Daughter's Correct Name THRISHA. R But Some Documents Entered as THRISHAA R/ THRISHA R/ ABHILASHA R. vide Affidavit Dated 29-06-2022 Before Notary MK.Devaki Bangalore

Lost

DOCUMENTS LOST
I, Manjunath Sharam, Residing at Shampura, have lost Original Allotment Letter and Document No./ Identification: Site No.102, Gavipuram, House Building Co Opperative Socity. In this regard, I have lodged a missing complaint with the lost article report reference No. 0254729/2022 dated; 27.06.2022
Finders Please Contact : 9845013090

ಸಂಕ್ಷಿಪ್ತ ಸುದ್ದಿ

ಕೆಂಪೇಗೌಡ ವಿಮಾನ ನಿಲ್ದಾಣ: 25 ಕೋಟಿ ಜನ ಪಯಣ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾರಂಭವಾದಾಗಿನಿಂದ ಇದೇ ಜೂನ್ ಕೊನೆಯವರೆಗೆ 25 ಕೋಟಿ ಜನರು ಪ್ರಯಾಣಿಸಿದ್ದು, ದಕ್ಷಿಣ ಭಾರತದ ಮಟ್ಟಿಗೆ ಇದೊಂದು ಅಪರೂಪದ ಮೈಲಿಗಲ್ಲು.

2008ರಲ್ಲಿ ಆರಂಭವಾದ ವಿಮಾನ ನಿಲ್ದಾಣ ಈವರೆಗೆ 20 ಲಕ್ಷ ವಾಯು ಸಂಚಾರಗಳನ್ನು ಕಂಡಿದೆ. ದಕ್ಷಿಣ ಭಾರತದಲ್ಲಿ ಈ ಮೈಲುಗಲ್ಲು ಮುಟ್ಟಿದ ಪ್ರಥಮ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ವಿಮಾನ ನಿಲ್ದಾಣ ಇದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಕಥಾಸಂಕಲನ, ಕಾದಂಬರಿ ಆಹ್ವಾನ

ಬೆಂಗಳೂರು: ಡಾ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್ 'ಮಾಸ್ತಿ ಕಥಾ ಪುರಸ್ಕಾರ' ಹಾಗೂ 'ಮಾಸ್ತಿ ಕಾದಂಬರಿ ಪುರಸ್ಕಾರ'ಕ್ಕೆ ಕಥಾಸಂಕಲನ ಹಾಗೂ ಕಾದಂಬರಿಗಳನ್ನು ಆಹ್ವಾನಿಸಿದೆ.

ಮಾಸ್ತಿ ಅವರ 131ನೇ ವರ್ಷದ ಜನ್ಮದಿನದ ಸಂಸ್ಮರಣೆ ಪ್ರಯುಕ್ತ ಈ ಸ್ಪರ್ಧೆ ಹಮ್ಮಿಕೊಂಡಿದೆ. 2021ರ ಜ.1ರಿಂದ ಡಿ.31ರ ಅವಧಿಯಲ್ಲಿ ಪ್ರಕಟಗೊಂಡ ಕೃತಿಗಳನ್ನು ಮಾತ್ರ ಪರಿಗಣಿಸಲಾಗುತ್ತದೆ. ಪ್ರಶಸ್ತಿ ಪಡೆದ ಕಥಾ ಸಂಕಲನ ಹಾಗೂ ಕಾದಂಬರಿ ಪುರಸ್ಕೃತ ಲೇಖಕರಿಗೆ ತಲಾ ₹ 25 ಸಾವಿರ ನಗದು ಮತ್ತು ಪ್ರಕಾಶಕರಿಗೆ ₹ 10 ಸಾವಿರ ನಗದು, ಫಲಕ ನೀಡಲಾಗುತ್ತದೆ.

ಕೃತಿಯ ನಾಲ್ಕು ಪ್ರತಿಗಳನ್ನು ಜುಲೈ 31ರೊಳಗೆ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್, ನಂ.21, ಎಲ್ಲಪ್ಪ ಗಾರ್ಡನ್, 10ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು–560 003 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಟ್ರಸ್ಟ್ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ತಿಳಿಸಿದ್ದಾರೆ. ಸಂಪರ್ಕ: 080–23363347

ವೃದ್ಧೆಯ ಕೈಕಾಲು ಕಟ್ಟಿ ಚಿನ್ನಾಭರಣ ಕಳವು

ಬೆಂಗಳೂರು: ನಗರದ ಜೀವನ್ ಬಿಮಾ ನಗರದ ಎಲ್‌ಐಸಿ ಕಾಲೊನಿಯಲ್ಲಿ ಮನೆ ಕೆಲಸಕ್ಕಿದ್ದ ದಂಪತಿಯೇ ವೃದ್ಧೆಯ ಕೈಕಾಲು ಕಟ್ಟಿಹಾಕಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ.

ಕೇಂದ್ರೀಯ ವಿದ್ಯಾಲಯ ರಸ್ತೆಯ ನಿವಾಸಿ ಗಿರಿಯಪ್ಪ ಅವರ ಮನೆಯಲ್ಲಿದ್ದ ₹ 10 ಲಕ್ಷ, 100 ಗ್ರಾಂ ಚಿನ್ನಾಭರಣ ದೋಚಲಾಗಿದೆ. ಕೆಲಸಕ್ಕಿದ್ದ ಸಂಗೀತಾ ಮತ್ತು ಆಕೆಯ ಪತಿ ಪ್ರತಾಪ್ ಈ ಕೃತ್ಯ ಎಸಗಿದ್ದಾರೆ ಎಂದು ದೂರಲಾಗಿದೆ.

ವಿದ್ಯುತ್ ಚಾಲಿತ ವಾಹನಗಳ ಬಳಕೆಗೆ ಜಾಗೃತಿ ಮೂಡಿಸುವ ಪ್ರಯತ್ನ

ಜುಲೈ 1ರಿಂದ 'ಇವಿ' ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಚಾಲಿತ ವಾಹನಗಳ ಬಳಕೆ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಜುಲೈ 1ರಿಂದ 6 ರವರೆಗೆ 'ಇವಿ' ಅಭಿಯಾನ ಹಮ್ಮಿಕೊಂಡಿದೆ.

ಈ ಅಭಿಯಾನದ ಭಾಗವಾಗಿ ಬೆಸ್ಕಾಂ ಜುಲೈ 1ರಿಂದ ಜುಲೈ 3ರವರೆಗೆ ಅರಮನೆ ಮೈದಾನದ ಚಾಮರ ವಜ್ರ ಸಭಾಂಗಣದಲ್ಲಿ ಇವಿ ಎಕ್ಸ್‌ಪೋ ಆಯೋಜಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 'ಇವಿ ಅಭಿಯಾನ ಮತ್ತು ಇವಿ ಎಕ್ಸ್‌ಪೋ' ಉದ್ಘಾಟಿಸಲಿದ್ದಾರೆ. ಇಂಧನ ಸಚಿವ ವಿ. ಸುನಿಲ್ ಕುಮಾರ್, ಕೇಂದ್ರ ಸಚಿವರಾದ ರಾಜೀವ್ ಚಂದ್ರಶೇಖರ್ ಮತ್ತು ಭಗವಂತ ಖೂಬಾ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

250ಕ್ಕೂ ಹೆಚ್ಚು ಚಾರ್ಜಿಂಗ್ ಕೇಂದ್ರಗಳ ಆರಂಭಕ್ಕೆ ಮುಖ್ಯಮಂತ್ರಿ ಅವರು ಚಾಲನೆ ನೀಡಲಿದ್ದಾರೆ. ಬೆಸ್ಕಾಂನ 'ಇವಿ' ಮಿತ್ರ ಆ್ಯಪ್, ಚಾರ್ಜಿಂಗ್ ಸ್ಟೇಷನ್ ಮತ್ತು ವಿದ್ಯುತ್ ಪೂರೈಕೆಗೆ ಸಂಬಂಧಿಸಿದಂತೆ ಏಕ ಗವಾಕ್ಷಿಯಲ್ಲಿ ಅನುಮತಿ ಪಡೆದ ಯೋಜನೆಗಳನ್ನು ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಉದ್ಘಾಟಿಸಲಿದ್ದಾರೆ.

'ಇವಿ' ಅಭಿಯಾನದ ಅಂಗವಾಗಿ ಜುಲೈ 2ರಂದು ಬೆಳಿಗ್ಗೆ 6 ರಿಂದ 9 ಗಂಟೆಯವರೆಗೆ ವಿದ್ಯುತ್ ವಾಹನಗಳ ರ‍್ಯಾಲಿ ಆಯೋಜಿಸಲಾಗಿದೆ. ವಿಧಾನಸೌಧದಿಂದ ಅರಮನೆ ಮೈದಾನದವರೆಗೆ ವಿದ್ಯುತ್ ವಾಹನಗಳ ರ‍್ಯಾಲಿ ಸಾಗಲಿವೆ.

ವಿದ್ಯುತ್ ಚಾಲಿತ ವಾಹನಗಳ ಉತ್ಪಾದಕರು, ಪೂರೈಕೆದಾರರು ಮತ್ತು ಬಳಕೆದಾರರನ್ನು ಒಂದೇ ಸೂರಿನಡಿಯಲ್ಲಿ ಸೇರಿಸಿ ಪರಸ್ಪರ ಸಮನ್ವಯ ಸಾಧಿಸಲು ಇವಿ ಎಕ್ಸ್‌ಪೋ ನೆರವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇವಿ ಎಕ್ಸ್‌ಪೋ ವಿವರ: ಉತ್ಪಾದಕರು, ಪೂರೈಕೆದಾರರು ಮತ್ತು ಬಳಕೆದಾರರಿಗೆ ಸಮಗ್ರ ಮಾಹಿತಿ ನೀಡುವ ಸಲುವಾಗಿ 'ಇವಿ ಎಕ್ಸ್‌ಪೋ' ಹಮ್ಮಿಕೊಳ್ಳಲಾಗಿದೆ. ಎಲೆಕ್ಟ್ರಿಕಲ್ ವಾಹನಗಳ ಉತ್ತೇಜನಕ್ಕೆ ಸರಕಾರ ಕೈಗೊಂಡಿರುವ ಕ್ರಮಗಳು ಮತ್ತು ನೀತಿಗಳ ಕುರಿತು ಮಾಹಿತಿ ಒದಗಿಸುವುದು ಸಹ ಈ 'ಎಕ್ಸ್‌ಪೋ' ಮುಖ್ಯ ಉದ್ದೇಶವಾಗಿದೆ.

'ಇವಿ ಎಕ್ಸ್‌ಪೋ'ಗೆ ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ.

ಇವಿ ಅಭಿಯಾನ ಮುಖ್ಯಾಂಶಗಳು

- ರಾಜ್ಯದಾದ್ಯಂತ 'ಇವಿ' ಅಭಿಯಾನವನ್ನು ಎಲ್ಲ ಎಸ್ಕಾಂಗಳ ವ್ಯಾಪ್ತಿಗಳಲ್ಲಿ ಆಯೋಜಿಸಲಾಗಿದೆ.
- 'ಇವಿ' ಅಭಿಯಾನದಲ್ಲಿ ಸಂಘ-ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಮತ್ತು ಕಾಲೇಜುಗಳ ಜತೆ ಇವಿ ಚಾರ್ಜಿಂಗ್ ಸ್ಟೇಷನ್‌ಗಳ ಸ್ಥಾಪನೆಗೆ ಸಂಬಂಧಿಸಿದಂತೆ ಒಡಂಬಡಿಕೆ ಮಾಡಿಕೊಳ್ಳಲಾಗುವುದು.



ಬೆಂಗಳೂರಿನ ಬೆಸ್ಕಾಂನ ಕೇಂದ್ರ ಕಚೇರಿಯ ಕಟ್ಟಡದ ಆವರಣದಲ್ಲಿ ತೆರೆಯಲಾಗಿರುವ ಎಲೆಕ್ಟ್ರಾನಿಕ್ ಚಾರ್ಗಿಂಗ್ ಸೆಂಟರ್‌ನ ಒಂದು ನೋಟ ಪ್ರಜಾವಾಣಿ ಚಿತ್ರ/ ರಂಜು ಪಿ

'ಇವಿ ಎಕ್ಸ್‌ಪೋ' ಉದ್ದೇಶಗಳು

- ಬೆಸ್ಕಾಂ 'ಇವಿ ಚಾರ್ಜಿಂಗ್ ಸ್ಟೇಷನ್'ಗಳ ಕುರಿತು ಸಾರ್ವಜನಿಕರಿಗೆ ಸಂಪೂರ್ಣ ಮಾಹಿತಿ
- ವಿದ್ಯುತ್ ಚಾಲಿತ ವಾಹನ ಕ್ಷೇತ್ರದಲ್ಲಿ ಇತ್ತೀಚಿನ ತಂತ್ರಜ್ಞಾನ ಅಭಿವೃದ್ಧಿ, ಮಾರುಕಟ್ಟೆ ಪ್ರಗತಿ ಮತ್ತು ಸರ್ಕಾರದ ಬೆಂಬಲ ಕುರಿತು ಸಾರ್ವಜನಿಕರಿಗೆ ಮಾಹಿತಿ ಒದಗಿಸುವುದು.
- ವಿವಿಧ ಖಾಸಗಿ ಮತ್ತು ಸರ್ಕಾರಿ ಕಂಪನಿಗಳ 140ಕ್ಕೂ ಅಧಿಕ ಮಳಿಗೆಗಳು
- ಹೊಸ ವಿದ್ಯುತ್ ಚಾಲಿತ ವಾಹನಗಳನ್ನು ಮಾರುಕಟ್ಟೆಗೆ ಪರಿಚಯಿಸುವುದು.
- ಬೆಸ್ಕಾಂನ 289 ಹೊಸ ಚಾರ್ಜಿಂಗ್ ಸ್ಟೇಷನ್‌ಗಳ ಲೋಕಾರ್ಪಣೆ
- ವಿದ್ಯುತ್ ವಾಹನಗಳ ಸಂಬಂಧ ಕೆಲವು ಖಾಸಗಿ ಕಂಪನಿಗಳ ಜತೆ ಬೆಸ್ಕಾಂ ಒಡಂಬಡಿಕೆಗೆ ಸಹಿ

ಜುಲೈ 1ರಿಂದ ನೈಸ್ ಟೋಲ್ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ಕಂಪನಿ ರಸ್ತೆ ಬಳಕೆ ಶುಲ್ಕವನ್ನು (ಟೋಲ್) ಜುಲೈ 1ರಿಂದ ಜಾರಿಗೆ ಬರುವಂತೆ ಹೆಚ್ಚಿಸಿದೆ.

ಹೊಸೂರಿನಿಂದ ಕನಕಪುರ ರಸ್ತೆವರೆಗೆ ₹70 ಇದ್ದ ಟೋಲ್ ಕಾರ್‌ಗೆ ₹80 ಆಗಿದೆ. ಬಸ್ ₹225 ನೀಡಬೇಕಿದೆ. ಮೈಸೂರು ರಸ್ತೆ ತುಮಕೂರು ರಸ್ತೆವರೆಗೆ ₹75 ಇದ್ದ ಟೋಲ್ ಕಾರ್‌ಗೆ ₹85 ಆಗಿದೆ. ಬಸ್ ₹145 ನೀಡಬೇಕಿದೆ.

ಒಪ್ಪಂದದಂತೆ ಪ್ರತಿ ವರ್ಷವೂ ಟೋಲ್ ಹೆಚ್ಚಿಸಬೇಕು. ಆದರೆ ಐದು ವರ್ಷಗಳ ನಂತರ ಟೋಲ್ ಹೆಚ್ಚಿಸಲಾಗಿದೆ. ಹೀಗಾಗಿ ವಾಸ್ತವವಾಗಿ ಹೆಚ್ಚಿಸಬೇಕಾದ ಟೋಲ್‌ಗಿಂತ ಇದು ಕಡಿಮೆಯಾಗಿದೆ ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.

ನೈಸ್ ರಸ್ತೆ ಟೋಲ್ (ಜುಲೈ 1ರಿಂದ ಜಾರಿಗೆ)

ಮಾರ್ಗ	ಕಾರು	ಬಸ್	ಟ್ರಕ್	ಎಲ್‌ಸಿವಿ	ಎಂಎವಿ	ದ್ವಿಚಕ್ರ ವಾಹನ
	₹ಗಳಲ್ಲಿ					
ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ	45	125	85	45	90	20
ಬನ್ನೇರುಘಟ್ಟದಿಂದ ಕನಕಪುರ ರಸ್ತೆ	35	100	65	35	70	12
ಕನಕಪುರ ರಸ್ತೆಯಿಂದ ಕ್ಲೋವರ್ ಲೀಫ್	25	65	40	25	40	8
ಕ್ಲೋವರ್ ಲೀಫ್‌ನಿಂದ ಮೈಸೂರು ರಸ್ತೆ	20	55	35	25	40	8
ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ	45	135	90	55	95	20
ಮಾಗಡಿ ರಸ್ತೆಯಿಂದ ತುಮಕೂರು ರಸ್ತೆ	40	105	70	40	75	12

ಹೆಬ್ಬಾಳ, ಕೆ.ಆರ್.ಪುರ ಸಂಚಾರ ದಟ್ಟಣೆಗೆ ಪಾರಿಹಾರ ಮಾರ್ಗ

ಪ್ರಜಾವಾಣಿ ವಾರ್ತೆ



ತುಷಾರ್ ಗಿರಿನಾಥ್

ಬೆಂಗಳೂರು: ಹೆಬ್ಬಾಳ, ಕೆ.ಆರ್. ಪುರ ಮತ್ತು ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಬಿಬಿಎಂಪಿ, ಬಿಡಿಎ, ಬೆಸ್ಕಾಂ, ಜಲ ಮಂಡಳಿ ಅಧಿಕಾರಿಗಳು ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದರು.

ಮಂಗಳವಾರ ತಡರಾತ್ರಿ ಸ್ಥಳ ತಪಾಸಣೆ ನಡೆಸಿದ ಅಧಿಕಾರಿಗಳ ತಂಡ, ತಾತ್ಕಾಲಿಕ ಮತ್ತು ದೀರ್ಘಾವಧಿಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿತು.

'ತುಮಕೂರು ರಸ್ತೆಯಿಂದ ಬಳ್ಳಾರಿ ರಸ್ತೆ ಕಡೆಗೆ ಹೋಗುವ ಸರ್ವೀಸ್ ರಸ್ತೆ ವಿಸ್ತರಣೆ ಮಾಡುವುದು, ಎಸ್ಟೀಮ್ ಮಾಲ್ ಮುಂಭಾಗ ರಸ್ತೆಯಲ್ಲಿ ಬಸ್‌ಗಳು ನಿಲ್ಲುವುದನ್ನು ತಪ್ಪಿಸುವುದು. ಬಳ್ಳಾರಿ ರಸ್ತೆ(ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಯಿಂದ) ಮೇಲ್ಸೇತುವೆಯಿಂದ ಬರುವ ವಾಹನಗಳನ್ನು ನೇರವಾಗಿ ಹೆಬ್ಬಾಳದ ಮೇಲುಸೇತುವೆ ಮೂಲಕ ಹಾದು ಹೋಗುವಂತೆ ಮಾಡುವುದರಿಂದ ದಟ್ಟನೆ ಕಡಿಮೆ ಆಗಲಿದೆ' ಎಂದು ಸ್ಥಳ ವೀಕ್ಷಣೆ ಬಳಿಕ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ಕೆಳಗಿನ ರಸ್ತೆಗಳಿಂದ ಬರುವ ವಾಹನಗಳು ಮೇಲ್ಸೇತುವೆಗೆ ಹೋಗಲು ಬಿಡದಂತೆ ರಸ್ತೆ ವಿಭಜಕಗಳನ್ನು ಅಳವಡಿಸುವುದು. ಮೇಲ್ಸೇತುವೆ ಕೆಳಗೆ ಕೆ.ಆರ್.ಪುರದ ಕಡೆಗೆ ಹೋಗುವ ಬಸ್‌ಗಳು ನಿಲ್ಲುವುದರಿಂದ ತೊಂದರೆ ಆಗುತ್ತಿದೆ. ಅದನ್ನು ತಪ್ಪಿಸಲು ಫಲಕಗಳನ್ನು ಅಳವಡಿಸಲಾಗುವುದು' ಎಂದರು.

ರೈಲ್ವೆ ಹಳಿ ದಾಟಲು ಪಾದಚಾರಿ ಕೆಳಸೇತುವೆ, ಬಿಡಿಎ ವತಿಯಿಂದ ಹೆಚ್ಚುವರಿ ಮೇಲ್ಸೇತುವೆ ನಿರ್ಮಾಣಕ್ಕೂ ಯೋಜನೆ ರೂಪಿಸಲಾಗಿದೆ ಎಂದು ತುಷಾರ್ ಗಿರಿನಾಥ್ ಸ್ಪಷ್ಟಪಡಿಸಿದರು.

ಕೆ.ಆರ್.ಪುರ(ಟಿನ್ ಫ್ಯಾಕ್ಟರಿ) ಜಂಕ್ಷನ್ ಬಳಿ ಬಸ್‌ಗಳು ರಸ್ತೆಯಲ್ಲೇ ನಿಲ್ಲುವುದನ್ನು ತಪ್ಪಿಸಲು ಪಕ್ಕದ ಜಾಗದಲ್ಲಿ ಬಸ್ ನಿಲುಗಡೆ ತಾಣ ನಿರ್ಮಿಸಲಾಗುವುದು. ಮೆಟ್ರೊ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಬಿಎಂಆರ್‌ಸಿಎಲ್ ಅಧಿಕಾರಿಗಳಿಗೂ ತಿಳಿಸಲಾಗಿದೆ ಎಂದರು.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಜಲಮಂಡಳಿ ಅಧ್ಯಕ್ಷ ಎನ್. ಜಯರಾಮ್, ಬಿಡಿಎ ಆಯುಕ್ತ ರಾಜೇಶ್‌ಗೌಡ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ, ಸಂಚಾರ ಪೊಲೀಸ್ ಜಂಟಿ ಆಯುಕ್ತ ರವಿಕಾಂತೇಗೌಡ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಇದ್ದರು.

ನಾಯಿ ದಾಳಿ: ಮೃತ ಬಾಲಕನ ಪೋಷಕರಿಗೆ ₹10 ಲಕ್ಷ ಪರಿಹಾರ

ಬೀದಿನಾಯಿ ಹಾವಳಿ: ನಿಯಂತ್ರಣಕ್ಕೆ ಹೈಕೋರ್ಟ್ ಮಹತ್ವದ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೀದಿ ನಾಯಿಗಳ ದಾಳಿಯಿಂದ ನಾಗರಿಕರು ಗಾಯಗೊಂಡರೆ ಅಥವಾ ಸಾವಿಗೀಡಾದರೆ ಸ್ಥಳೀಯ ಪೌರಾಡಳಿತ ಸಂಸ್ಥೆಗಳೇ ಹೊಣೆಯಾಗುತ್ತವೆ' ಎಂದು ಆದೇಶಿಸಿರುವ ಹೈಕೋರ್ಟ್, ಬೀದಿ ನಾಯಿಗಳ ದಾಳಿಯಿಂದ ಬಾಲಕನೊಬ್ಬ ಸಾವನ್ನಪ್ಪಿದ ಪ್ರಕರಣದಲ್ಲಿ ₹ 10 ಲಕ್ಷ ಪರಿಹಾರ ನೀಡುವಂತೆ ಬೆಳಗಾವಿ ಜಿಲ್ಲಾಡಳಿತಕ್ಕೆ ಆದೇಶಿಸಿದೆ.

ಬೀದಿ ನಾಯಿಗಳ ದಾಳಿಗೆ ಸಿಲುಕಿ ಸಾವನ್ನಪ್ಪಿದ್ದ ಎರಡು ವರ್ಷದ ಗಂಡು ಮಗುವಿನ ತಂದೆ ಬೆಳಗಾವಿಯ ಬಾಳೆಕುಂದ್ರಿ ನಿವಾಸಿ ಯೂಸುಬ್ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಈ ಕುರಿತಂತೆ ಧಾರವಾಡ ಪೀಠದಲ್ಲಿ ಆದೇಶ ಮಾಡಿದ್ದಾರೆ.

'ಬೀದಿ ನಾಯಿಗಳ ದಾಳಿಯಿಂದ ಸಾರ್ವಜನಿಕರನ್ನು ರಕ್ಷಿಸುವುದು ಪೌರಾಡಳಿತ ಸಂಸ್ಥೆಗಳ ಆದ್ಯ ಕರ್ತವ್ಯ ಹಾಗೂ ಹೊಣೆಯಾಗಿದೆ. ಮನುಷ್ಯರಂತೆ ನಾಯಿಗಳಿಗೂ ಬದುಕುವ ಹಕ್ಕಿದೆ. ಹಾಗಾಗಿ, ಜನರು ನಾಯಿಗಳ ಮೇಲೆ ಕಲ್ಲು ಎಸೆದು ದಾಳಿ ನಡೆಸುವುದನ್ನು ನಿಲ್ಲಿಸಬೇಕು. ಮಕ್ಕಳು ಬೀದಿ ನಾಯಿಗಳ ಬಳಿ ಹೋಗದಂತೆ, ಆಟವಾಡದಂತೆ ಮತ್ತು ತಿನಿಸು ಕೊಡದಂತೆ ಹಿರಿಯರು ಗಮನ ಹರಿಸಬೇಕು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ನಿರ್ದೇಶನಗಳು:

- ಬೀದಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸಬೇಕು. ಪ್ರಾಣಿ ಜನನ ನಿಯಂತ್ರಣ ನಿಯಮಗಳಡಿ ಬೀದಿ ನಾಯಿಗಳಿಗೆ ಸಂತಾನ ಹರಣ ಮತ್ತು ವ್ಯಾಕ್ಸಿನೇಷನ್ ಅನ್ನು ಪ್ರಾಣಿ ಕಲ್ಯಾಣ ಸಂಸ್ಥೆಗಳು ಮತ್ತು ಮೇಲ್ವಿಚಾರಣಾ ಸಮಿತಿಗಳು ಖಾತರಿಪಡಿಸಬೇಕು. ವಿಶೇಷವಾಗಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಈ ಕೆಲಸ ನಡೆಯಬೇಕು. ಇದಕ್ಕಾಗಿ ಎನ್‌ಜಿಒ ಮತ್ತು ಇತರೆ ಸಂಸ್ಥೆಗಳನ್ನು ಬಳಸಿಕೊಳ್ಳಬೇಕು. ಈ ಸಂಬಂಧ ಕೈಗೊಂಡ ಕ್ರಮಗಳ ಕುರಿತು ಜಿಲ್ಲಾಧಿಕಾರಿ ಕಚೇರಿಗೆ ವರದಿ ಸಲ್ಲಿಸಬೇಕು.
- ಪ್ರಾಣಿಗಳ ಜನನ ನಿಯಂತ್ರಣ ಕಾಯ್ದೆಯ ನಿಯಮ 9ರ ಪ್ರಕಾರ ವಾಸಿಯಾಗದ ಕಾಯಿಲೆ ಅಥವಾ ಮಾರಣಾಂತಿಕ ಗಾಯಗಳಿಂದ ನರಳುತ್ತಿರುವ ಬೀದಿ ನಾಯಿಗಳಿಗೆ ತಜ್ಞ ಪಶು ವೈದ್ಯರಿಂದ ದಯಾ ಮರಣ ಕಲ್ಪಿಸಬೇಕು.
- ಆಕ್ರಮಣಕಾರಿ ಮತ್ತು ರೇಬಿಸ್ ರೋಗದಿಂದ ನರಳುತ್ತಿರುವ ನಾಯಿಗಳ ಕುರಿತು ದೂರುಗಳು ಬಂದರೆ ಸ್ಥಳೀಯ ಪೌರಾಡಳಿತ ಸಂಸ್ಥೆಯ ಶ್ವಾನ ದಳವು ಪರಿಶೀಲನೆ ನಡೆಸಬೇಕು. ನಾಯಿಗೆ ರೇಬಿಸ್ ಇದ್ದರೆ ಸಹಜ ಸಾವು ಬರುವವರೆಗೂ ಅದನ್ನು ಐಸೋಲೇಷನ್‌ನಲ್ಲಿ ಇರಿಸಬೇಕು.
- ಬೀದಿ ನಾಯಿಗಳ ಕುರಿತು ನಾಗರಿಕರು ದೂರು ಸಲ್ಲಿಸಲು ದೂರು ಘಟಕ ಸ್ಥಾಪಿಸಬೇಕು.
- ಜನವಸತಿ ಪ್ರದೇಶದಲ್ಲಿ ನಾಯಿಗಳ ಹಾವಳಿ ಹೆಚ್ಚಾಗದಂತೆ ಸಮರ್ಪಕವಾಗಿ ಕಸ ಸಂಗ್ರಹಣೆ ಮಾಡಿ ವಿಲೇವಾರಿ ಮಾಡಬೇಕು.
- ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳು ನಾಯಿ ದಾಳಿಗೆ ತುತ್ತಾದವರಿಗೆ ಪರಿಹಾರ ಕಲ್ಪಿಸಲು ಸೂಕ್ತ ಮಾರ್ಗಸೂಚಿ ರಚನೆ ಮಾಡಬೇಕು.
- 'ಈ ಆದೇಶದ ಅನುಪಾಲನಾ ವರದಿಯನ್ನು ನಾಲ್ಕು ತಿಂಗಳಲ್ಲಿ ಸಲ್ಲಿಸಬೇಕು' ಎಂದು ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿದೆ.

ಪ್ರಾಣಿ ವಧೆ: ವರದಿ ಸಲ್ಲಿಸಲು ನಿರ್ದೇಶನ

ಬೆಂಗಳೂರು: 'ಮಂಡ್ಯ, ಹಾಸನ, ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಅಕ್ರಮವಾಗಿ ಪ್ರಾಣಿ ಸಾಗಣೆ ಹಾಗೂ ವಧೆ ಎಗ್ಗಿಲ್ಲದೆ ನಡೆಯುತ್ತಿದೆ' ಎಂಬ ಅರ್ಜಿದಾರರ ಆಕ್ಷೇಪಣೆಗೆ ಸಂಬಂಧಿಸಿದಂತೆ ಹೈಕೋರ್ಟ್, ಈ ಹಿಂದಿನ ಆದೇಶದ ಅನುಪಾಲನಾ ವರದಿ ಸಲ್ಲಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಿದೆ.

ಕಸಾಯಿಖಾನೆಗಳ ಅಕ್ರಮ ಕಾರ್ಯನಿರ್ವಹಣೆ ವಿಚಾರಕ್ಕೆ ಸಂಬಂಧಿಸಿದಂತೆ 'ಗೋ ಗ್ಯಾನ್ ಫೌಂಡೇಷನ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ, '2021ರ ಡಿಸೆಂಬರ್ 1ರಂದು ಹೊರಡಿಸಿರುವ ಆದೇಶದ ಅನುಪಾಲನಾ ವರದಿ ಸಲ್ಲಿಸಿ' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಕಾನೂನುಬಾಹಿರವಾಗಿ ಪ್ರಾಣಿಗಳ ವಧೆ ನಡೆಯದಂತೆ ತುರ್ತಾಗಿ ಕ್ರಮ ಕೈಗೊಳ್ಳಬೇಕು. ಅಕ್ರಮ ಪ್ರಾಣಿವಧೆ ನಡೆಸುತ್ತಿರುವುದು ಪತ್ತೆಯಾದರೆ ಸಂಬಂಧಿಸಿದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. ಅಕ್ರಮ ಪ್ರಾಣಿವಧೆಯಲ್ಲಿ ತೊಡಗಿರುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವುದೂ ಸೇರಿದಂತೆ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು 2021ರ ಡಿಸೆಂಬರ್ 1ರಂದು ಹೈಕೋರ್ಟ್ ಆದೇಶಿಸಿ ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಿದೆ.

ಸಂಕ್ಷಿಪ್ತ ಸುದ್ದಿ

ಕೋವಿಡ್: ಸಾವಿರದ ಗಡಿ ದಾಟಿದ ಪ್ರಕರಣ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, ಬೆಂಗಳೂರಿನಲ್ಲಿ 1,109 ಸೇರಿದಂತೆ ರಾಜ್ಯದಲ್ಲಿ 1,249 ಮಂದಿ ಸೋಂಕಿತರಾಗಿರುವುದು ಬುಧವಾರ ದೃಢಪಟ್ಟಿದೆ.

ಇವು ನಾಲ್ಕು ತಿಂಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಹೊಸ ಪ್ರಕರಣಗಳಾಗಿವೆ. ಒಂದು ದಿನದ ಅವಧಿಯಲ್ಲಿ 25,753 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 4.84ರಷ್ಟಿದೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರು ಹಾಗೂ ಚಿಕ್ಕಮಗಳೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದ್ದು, 5,707 ಮಂದಿ ಸೋಂಕಿತರಿದ್ದಾರೆ.

ರಾಷ್ಟ್ರಪತಿ ಚುನಾವಣೆ: 115 ನಾಮಪತ್ರ ಸಲ್ಲಿಕೆ

ನವದೆಹಲಿ (ಪಿಟಿಐ): ರಾಷ್ಟ್ರಪತಿ ಚುನಾವಣೆಗೆ ನಾಮಪತ್ರ ಸಲ್ಲಿಸಲು ಬುಧವಾರ ಕೊನೆಯ ದಿನವಾಗಿದ್ದು, ಈವರೆಗೆ ಒಟ್ಟು 115 ನಾಮಪತ್ರಗಳು ಸಲ್ಲಿಕೆಯಾಗಿವೆ. ಈ ಪೈಕಿ 87 ನಾಮಪತ್ರಗಳು ಪರಿಶೀಲನೆಗೆ ಒಳಪಟ್ಟಿವೆ ಎಂದು ರಾಜ್ಯಸಭಾ ಸಿಬ್ಬಂದಿ ಸಚಿವಾಲಯ ತಿಳಿಸಿದೆ.

ಒಟ್ಟು ನಾಮಪತ್ರಗಳ ಪೈಕಿ 28 ನಾಮಪತ್ರಗಳು ತಿರಸ್ಕೃತವಾಗಿವೆ. ಜುಲೈ 18ರಂದು ಚುನಾವಣೆ ನಡೆಯಲಿದೆ.

ಕೊತ್ತೂರು, ಎಂ.ಸಿ. ಸುಧಾಕರ್ ಕಾಂಗ್ರೆಸ್‌ಗೆ

ನವದೆಹಲಿ: ಕೋಲಾರ ಜಿಲ್ಲೆಯ ಮುಳಬಾಗಿಲಿನ ಮಾಜಿ ಶಾಸಕ ಕೊತ್ತೂರು ಮಂಜುನಾಥ್ ಹಾಗೂ ಚಿಂತಾಮಣಿಯ ಮಾಜಿ ಶಾಸಕ ಡಾ.ಎಂ.ಸಿ.ಸುಧಾಕರ್ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಮ್ಮುಖದಲ್ಲಿ ಬುಧವಾರ ಕಾಂಗ್ರೆಸ್ ಸೇರ್ಪಡೆಯಾದರು.

ಜೆಡಿಎಸ್‌ನ ಕೋಲಾರದ ಶಾಸಕ ಕೆ.ಶ್ರೀನಿವಾಸ ಗೌಡ ಅವರು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ರಾಜ್ಯಸಭಾ ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಮತ ಚಲಾಯಿಸಿದ್ದರು. ಪಕ್ಷದ ವಿಪ್ ಉಲ್ಲಂಘಿಸಿ, ಅಡ್ಡ ಮತದಾನ ಮಾಡಿದ ಆರೋಪದ ಮೇಲೆ ಶಾಸಕರಾದ ಎಸ್. ಆರ್. ಶ್ರೀನಿವಾಸ್ (ಗುಬ್ಬಿ) ಮತ್ತು ಕೆ. ಶ್ರೀನಿವಾಸ ಗೌಡ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲು ಜೆಡಿಎಸ್ ಕರ್ನಾಟಕ ಘಟಕದ ಪ್ರಮುಖರ ಸಭೆ ಶಿಫಾರಸು ಮಾಡಿದೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, 'ವಿಧಾನ ಪರಿಷತ್ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಅನಿಲ್ ಕುಮಾರ್ ಗೆಲುವಿಗಾಗಿ ಕೊತ್ತೂರು ಮಂಜುನಾಥ್ ಹಾಗೂ ಎಂ.ಸಿ. ಸುಧಾಕರ್ ಕೆಲಸ ಮಾಡಿದ್ದರು. ಈಗ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆ' ಎಂದರು.

ನೇಪಾಳದ ಯುವಕನ ಕೊಲೆ: ಬಂಧನ

ಬೆಂಗಳೂರು: ನೇಪಾಳದ ಯುವಕ ಸುಶೀಲ್ (25) ಕೊಲೆ ಪ್ರಕರಣದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ನೇಪಾಳದ ಸಾಗರ್ ಹಾಗೂ ಕಾನೂನು ಸಂಘರ್ಷಕ್ಕೆ ಒಳಪಟ್ಟಿರುವ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಜೀವನ್ ಬಿಮಾ ನಗರದಲ್ಲಿ ಸುಶೀಲ್ ಅವರ ಮೃತದೇಹ ಪತ್ತೆಯಾಗಿತ್ತು. ಮೃತದೇಹದ ಮೇಲೆ ರಕ್ತದ ಕಲೆಗಳು ಕಂಡುಬಂದಿದ್ದರಿಂದ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಿದ್ದರು.

ಸರ್ಕಾರಕ್ಕೆ ನಗರ ಪೊಲೀಸರ ವರದಿ; ಹೋಟೆಲ್ ಸಂಘದಿಂದ ವಿರೋಧ

ಆಯ್ದ ಸ್ಥಳಗಳಲ್ಲಿ 24 ಗಂಟೆ ಹೋಟೆಲ್ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆಯ್ದ ಸ್ಥಳಗಳಲ್ಲಿ 24 ಗಂಟೆಯೂ ಹೋಟೆಲ್ ತೆರೆಯಲು ನಗರ ಪೊಲೀಸರು ಗ್ರೀನ್ ಸಿಗ್ನಲ್ ನೀಡಿದ್ದು, ಈ ಸಂಬಂಧ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ.

'ನಗರದ ಪ್ರಮುಖ ಬಸ್ ಹಾಗೂ ರೈಲು ನಿಲ್ದಾಣ ಸೇರಿದಂತೆ ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರ ದಿನದ 24 ಗಂಟೆಗಳ ಕಾಲ ಹೋಟೆಲ್ ತೆರೆಯಲು ಅನುಮತಿ ನೀಡಬಹುದಾಗಿದೆ. ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆ ಇರುವುದರಿಂದ ನಗರದ ಎಲ್ಲೆಡೆ ಹೋಟೆಲ್, ರೆಸ್ಟೋರೆಂಟ್ ತೆರೆಯಲು ಅನುಮತಿ ನೀಡಲು ಕಷ್ಟವಾಗಲಿದೆ. ಜನಸಂದಣಿಯಿಲ್ಲದ ಪ್ರದೇಶಗಳಲ್ಲಿ ಹೋಟೆಲ್ ವಹಿವಾಟಿಗೆ ಅವಕಾಶ ಕೊಟ್ಟರೆ, ಕಾನೂನು ಸುವ್ಯವಸ್ಥೆಗೆ ಸಮಸ್ಯೆಯಾಗಲಿದೆ. ಸಿಬ್ಬಂದಿ ಇಲ್ಲದಿರುವುದು ಎಲ್ಲೆಡೆ ಅನುಮತಿ ನಿರಾಕರಿಸಲು ಮತ್ತೊಂದು ಕಾರಣ. ಹೀಗಾಗಿ ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರ ಹೋಟೆಲ್ ನಡೆಸಲು ಅನುಮತಿ ನೀಡಬಹುದಾಗಿದೆ' ಎಂದು ಸರ್ಕಾರಕ್ಕೆ ನಗರ ಪೊಲೀಸರು ವರದಿ ಸಲ್ಲಿಸಿದ್ದಾರೆ.

'ಮೆಜೆಸ್ಟಿಕ್, ರೈಲು ನಿಲ್ದಾಣ ಹಾಗೂ ಕೆಲವು ಕಡೆಗಳಲ್ಲಿ ಈಗಾಗಲೇ 24 ಗಂಟೆಯೂ ಹೋಟೆಲ್‌ಗಳು ತೆರೆದಿರುತ್ತವೆ. ಅವುಗಳಿಗೆ ಅನುಮತಿ ಇದೆ. ಇದನ್ನು ಹೊರತುಪಡಿಸಿದಂತೆ ಜನರಿಗೆ ಅಗತ್ಯವಿರುವ ಪ್ರದೇಶಗಳಲ್ಲಿ ಎಲ್ಲ ಸಮಯದಲ್ಲೂ ಹೋಟೆಲ್ ತೆರೆಯಲು ನಾವು ಮನವಿ ಮಾಡಿಕೊಂಡಿದ್ದೆವು. ಅದಕ್ಕೆ ಮುಖ್ಯಮಂತ್ರಿಯವರೂ ಒಪ್ಪಿದ್ದರು. ಆದರೆ ಈಗ ಪೊಲೀಸರು ಅನುಮತಿ ನೀಡದಿದ್ದರೆ ನಾವು ಮತ್ತೊಮ್ಮೆ ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇವೆ' ಎಂದರು.

'ನೆರೆಯ ತಮಿಳುನಾಡು, ಆಂಧ್ರ ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ 24 ಗಂಟೆ ಹೋಟೆಲ್ ತೆರೆಯಲು ಅಲ್ಲಿನ ಸರ್ಕಾರಗಳು ಅನುಮತಿ ನೀಡಿವೆ. ಅದೇ ಮಾದರಿಯಲ್ಲಿ ಬೆಂಗಳೂರಿನಲ್ಲಿಯೂ ಅನುಮತಿ ನೀಡಬೇಕು. ಇದರಿಂದ ಅಗತ್ಯ ಇರುವವರಿಗೆ ಅನುಕೂಲವಾಗುತ್ತದೆ. ಅಲ್ಲದೆ ಉದ್ಯೋಗ ಅವಕಾಶಗಳೂ ಹೆಚ್ಚಾಗಲಿವೆ' ಎಂದರು.

ಎಲ್ಲೆಡೆ ಊಟ ಸಿಗಲಿ

'ರಾತ್ರಿಯೆಲ್ಲ ಆಟೊ ಓಡಿಸುತ್ತೇವೆ. ಒಂದೊಂದು ಬಾರಿ ಹಸಿವಾಗುತ್ತದೆ. ಆಗ ಊಟ ಸಿಗುವುದಿಲ್ಲ. ಕೆಲವೇ ಸ್ಥಳಗಳಿಗೆ ಹುಡುಕಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಎಲ್ಲ ಸಮಯದಲ್ಲೂ ಎಲ್ಲೆಡೆ ಊಟ ಅಥವಾ ತಿಂಡಿ ಸಿಕ್ಕರೆ ಒಳ್ಳೆಯದು' ಎಂದು ಆಟೊ ಚಾಲಕ ರಮೇಶ್‌ಕುಮಾರ್ ಅಭಿಪ್ರಾಯಪಟ್ಟರು.

ಹೋಟೆಲ್ ಮಾಲೀಕರ ವಿರೋಧ

'ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರ ಹೋಟೆಲ್ ತೆರೆಯಲು ಪೊಲೀಸರು ಅನುಮತಿ ನೀಡಿದ್ದರೆ ಅದಕ್ಕೆ ಹೋಟೆಲ್ ಮಾಲೀಕರ ಸಂಘ ವಿರೋಧವಿದೆ' ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್ ಹೇಳಿದರು.

ಸುದ್ದಿ 2 ನಿಮಿಷ

ಒಳಚರಂಡಿ ಕಾಮಗಾರಿಗೆ ₹54 ಕೋಟಿ ಬಿಡುಗಡೆ

ಬೆಂಗಳೂರು: ಬನಶಂಕರಿ 6ನೇ ಹಂತದ ಬಡಾವಣೆಗಳಲ್ಲಿ ಒಳಚರಂಡಿ ಕಾಮಗಾರಿ ಕೈಗೊಳ್ಳಲು ಜಲಮಂಡಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ₹ 54.67 ಕೋಟಿ ಬಿಡುಗಡೆ ಮಾಡಿದೆ.

ಇಲ್ಲಿನ ಬಡಾವಣೆಗಳಲ್ಲಿ ಈಗಾಗಲೇ ರಸ್ತೆ, ಚರಂಡಿ, ವಿದ್ಯುತ್ ಸಂಪರ್ಕ ವ್ಯವಸ್ಥೆ ಕಲ್ಪಿಸಲಾಗಿದೆ. ಕಾವೇರಿ ಕುಡಿಯುವ ನೀರು ಪೂರೈಕೆ ಕಾಮಗಾರಿ ಕೈಗೊಳ್ಳಲು ₹ 42 ಕೋಟಿ ಬಿಡುಗಡೆ ಈಗಾಗಲೇ ಮಾಡಲಾಗಿದೆ. ಇದೀಗ ಒಳಚರಂಡಿ ಕೊಳವೆ ಅಳವಡಿಸಲು ಮೊದಲ ಹಂತದ ಹಣ ಬಿಡುಗಡೆ ಮಾಡಲಾಗಿದೆ.

ಬಡಾವಣೆಗಳಲ್ಲಿ ಮೂಲಸೌಕರ್ಯ ಕೊರತೆ ಬಗ್ಗೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರ ಗಮನಕ್ಕೆ ತಂದಿದ್ದರು. ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ ಸಚಿವರು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ಶೀಘ್ರದಲ್ಲೇ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದರು.

'ಜನರ ಸಮಸ್ಯೆಗಳಿಗೆ ಮುಖ್ಯಮಂತ್ರಿ ಮತ್ತು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಸ್ಪಂದಿಸಿದ್ದಾರೆ. ಜಲ ಮಂಡಳಿ ಶೀಘ್ರದಲ್ಲೇ ಕಾಮಗಾರಿ ಆರಂಭಿಸಲಿದೆ' ಎಂದು ಸಚಿವರು ತಿಳಿಸಿದ್ದಾರೆ.

ತಾಂತ್ರಿಕ ಸಂಶೋಧನೆಯ ಪ್ರದರ್ಶನ



ಕೆ.ಆರ್.ಪುರ: ಸಮೀಪದ ಬಿದರಹಳ್ಳಿಯ ಈಸ್ಟ್ ಪಾಯಿಂಟ್ ಸಮೂಹ ಸಂಸ್ಥೆ ವತಿಯಿಂದ ಈಸ್ಟ್ ಪಾಯಿಂಟ್ ತಾಂತ್ರಿಕ ವಿದ್ಯಾಲಯದಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು ನಡೆಸಿರುವ ವಿವಿಧ ಪ್ರಯೋಗಗಳ ತಾಂತ್ರಿಕ ಸಂಶೋಧನೆಯ ವೈಬ್ರೇಷನ್ -2022 ಪ್ರದರ್ಶನ ನಡೆಯಿತು.

ತಾಂತ್ರಿಕ ಪ್ರಾಜೆಕ್ಟ್ ಪ್ರದರ್ಶನವನ್ನು ಕ್ಯಾಡೆಮ್ ಟೆಕ್ನಾಲಜಿ ಸಂಸ್ಥೆಯ ನಿರ್ದೇಶಕ ಜಿ.ವಿ.ದಶರಥಿ ಉದ್ಘಾಟಿಸಿದರು.

ನಂತರ ಮಾತನಾಡಿ, 'ಈಸ್ಟ್ ಪಾಯಿಂಟ್ ಎಂಜಿನಿಯರಿಂಗ್ ಹಾಗೂ ತಾಂತ್ರಿಕ ಶಿಕ್ಷಣ ವಿದ್ಯಾರ್ಥಿಗಳು ತಯಾರಿಸಿರುವ 100ಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳ ಪ್ರದರ್ಶನ ಮಾಡಲಾಗಿದೆ. ವಿವಿಧ ಯೋಜನೆಗಳನ್ನು ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್, ಮಾಹಿತಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ, ಮೆಕಾನಿಕಲ್, ಸಿವಿಲ್ ಎಂಜಿನಿಯರ್ ಕ್ಷೇತ್ರದ್ದು ಆಗಿದೆ. ಪ್ರತಿಯೊಂದು ಯೋಜನೆಯು ಹೊಸತನ, ನಾವೀನ್ಯ ಮತ್ತು ಸೃಜನಶೀಲತೆಯ ಪ್ರಯತ್ನ ಹೊಂದಿರುವುದು ಖುಷಿ ನೀಡಿದೆ' ಎಂದು ಸಂತಸ ವ್ಯಕ್ತಪಡಿಸಿದರು.

ಸಂಶೋಧನಾ ವಿದ್ಯಾರ್ಥಿ ಸಂತೋಷ್ ಮಾತನಾಡಿ, 'ಕಲಿಕೆಯನ್ನು ಉತ್ತಮವಾಗಿಸಲು ಇಂತಹ ಯೋಜನೆಗಳು ಅವಶ್ಯ. ನಾಲ್ಕರಿಂದ ಐವರು ವಿದ್ಯಾರ್ಥಿಗಳು ಸೇರಿ ಯೋಜನೆಗಳನ್ನು ಸಿದ್ಧಪಡಿಸಿದ್ದೇವೆ. ಮನೆಯಲ್ಲಿ ಕಸ ಗುಡಿಸುವ ಹಾಗೂ ಹಸಿ ನೆಲವನ್ನು ಒರೆಸುವ ಯಂತ್ರದ ಯೋಜನೆ ತಯಾರಿಸಿದ್ದೇವೆ' ಎಂದು ಹೇಳಿದರು.

ಈಸ್ಟ್ ಪಾಯಿಂಟ್ ಸಮೂಹ ಸಂಸ್ಥೆಯ ಅಧ್ಯಕ್ಷೆ ಬಿ.ಎಲ್.ರಮದೇವಿ ವೆಂಕಟಪತಿ, ಸಿಇಒ ಎಸ್.ವಿ.ಪ್ರಮೋದ್‌ಗೌಡ, ಎಸ್.ವಿ.ರಾಜೀವ್‌ಗೌಡ, ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಸ್.ಆರ್.ಶಂಕರ್ ಪಾಲ್, ಪ್ರಾಂಶುಪಾಲ ಟಿ.ಕೆ.ಸತೀಶ್ ಇದ್ದರು.

ಕೋವಿಡ್: ಖಾಸಗಿ ಆಸ್ಪತ್ರೆಗಳಿಗೆ ₹779 ಕೋಟಿ

ಬೆಂಗಳೂರು: ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ ಯೋಜನೆಯಡಿ ಖಾಸಗಿ ಆಸ್ಪತ್ರೆಗಳು ಈವರೆಗೆ 2.39 ಲಕ್ಷ ಕೋವಿಡ್ ಪೀಡಿತರಿಗೆ ಚಿಕಿತ್ಸೆ ಒದಗಿಸಿವೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಚಿಕಿತ್ಸೆ ನೀಡಿದ ಆಸ್ಪತ್ರೆಗಳಿಗೆ ₹ 779.83 ಕೋಟಿ ಪಾವತಿಸಲಾಗಿದೆ.

ಕೋವಿಡ್ ಮೊದಲ ಅಲೆಯಲ್ಲಿ (2020ರ ಮಾರ್ಚ್‌ನಿಂದ 2021ರ ಮಾರ್ಚ್‌ವರೆಗೆ) ಯೋಜನೆಯಡಿ ಖಾಸಗಿ ಆಸ್ಪತ್ರೆಗಳಲ್ಲಿ 1,17,930 ಕೋವಿಡ್ ಪೀಡಿತರಿಗೆ ಚಿಕಿತ್ಸೆ ನೀಡಲಾಗಿದೆ. ಟ್ರಸ್ಟ್ ಮೂಲಕ ₹ 391.26 ಕೋಟಿ ಚಿಕಿತ್ಸಾ ವೆಚ್ಚ ಭರಿಸಲಾಗಿತ್ತು. ಎರಡನೇ ಅಲೆಯಲ್ಲಿ (2021ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ) 1,14,690 ಮಂದಿಗೆ ಚಿಕಿತ್ಸೆ ಒದಗಿಸಲಾಗಿದ್ದು, ₹ 376.76 ಕೋಟಿ ಪಾವತಿಸಲಾಗಿದೆ.

ಈ ವರ್ಷದ ಏಪ್ರಿಲ್ ಬಳಿಕ 653 ಕೋವಿಡ್ ಪೀಡಿತರಿಗೆ ಚಿಕಿತ್ಸೆ ಒದಗಿಸಲಾಗಿದೆ. ಚಿಕಿತ್ಸಾ ವೆಚ್ಚ ₹ 2.83 ಕೋಟಿ ಪಾವತಿಸಲಾಗಿದೆ. 'ಸಾಂಕ್ರಾಮಿಕ ರೋಗ ಕಾಣಿಸಿಕೊಂಡ ಈ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ ತ್ವರಿತ ಹಾಗೂ ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸುವುದು ನಮ್ಮ ಆದ್ಯತೆಯಾಗಿತ್ತು. ಹೀಗಾಗಿ, ಖಾಸಗಿ ವ್ಯವಸ್ಥೆಯಡಿಯೂ ಹೆಚ್ಚಿನವರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲಾಗಿದೆ. ಇದು ನಮ್ಮ ಬದ್ಧತೆಗೆ ಸಾಕ್ಷಿ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.



ಪುಸ್ತಕ ವಿತರಣೆ

ಬೆಂಗಳೂರಿನ ಜಯನಗರದ ಚಂದ್ರಗುಪ್ತ ಮೌರ್ಯ(ಶಾಲಿನಿ) ಆಟದ ಮೈದಾನದಲ್ಲಿ, ರಕ್ಷಾ ಫೌಂಡೇಷನ್ ಆಯೋಜಿಸಿದ 1ಲಕ್ಷ ಉಚಿತ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮದಲ್ಲಿ ಅದಮ್ಯ ಚೇತನದ ತೇಜಸ್ವಿನಿ ಅನಂತಕುಮಾರ್, ಕಂದಾಯ ಸಚಿವ ಆರ್. ಅಶೋಕ ಸಂಸದ ತೇಜಸ್ವಿ ಸೂರ್ಯ, ರಕ್ಷಾ ಫೌಂಡೇಷನ್ ಅಧ್ಯಕ್ಷ ಸಿ.ಕೆ. ರಾಮಮೂರ್ತಿ, ಮಂಗಳವಾರ ವಿವಿಧ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ವಿತರಿಸಿದರು — ಪ್ರಜಾವಾಣಿ ಚಿತ್ರ

ಮಿದುಳಿನ ಕಾಯಿಲೆ: ಮುನ್ಸೂಚನೆಯ ಜಿಪಿಯು

ತರ್ಕಬದ್ಧ ಅರ್ಥೈಸುವಿಕೆ, ದತ್ತಾಂಶ ವಿಶ್ಲೇಷಣೆಗೆ ಮೆಷಿನ್ ಲರ್ನಿಂಗ್ ಅಲ್ಗಾರಿದಮ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಎಂಆರ್‌ಐನಲ್ಲಿ ಕ್ರಾಂತಿಕಾರಿ ಅಲ್ಗಾರಿದಮ್ ಅಭಿವೃದ್ಧಿ
- ಮಿದುಳಿನ ವರ್ತನೆಯಿಂದ ಮೊದಲೇ ಕಾಯಿಲೆ ಪತ್ತೆ
- 200 ವ್ಯಕ್ತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ

ಬೆಂಗಳೂರು: ವ್ಯಕ್ತಿಗೆ ವಯಸ್ಸಾದಂತೆ ಆತನ ಮಿದುಳೂ ಸುಕ್ಕುಗಟ್ಟಿ, ಮುದುಡುತ್ತಾ ಹೋಗುತ್ತದೆ. ಮಿದುಳಿನ ನರಗಳ ಜಾಲ ವ್ಯವಸ್ಥೆಯೂ ಶಿಥಿಲಗೊಳ್ಳುತ್ತವೆ. ಇದರ ಪರಿಣಾಮ ಅಲ್ಜಮೇರ್, ಪಾರ್ಕಿನ್ಸನ್ ಸೇರಿದಂತೆ ಹಲವು ಬಗೆಯ ಮಿದುಳು ಸಂಬಂಧಿ ಕಾಯಿಲೆಗಳಿಗೆ ತುತ್ತಾಗುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚು. ಈ ಕಾಯಿಲೆಗೆ ತುತ್ತಾಗುವುದನ್ನು ಮೊದಲೇ ತಿಳಿದುಕೊಳ್ಳಲು ಸಾಧ್ಯವೇ?

ಇಂತಹ ಕಾಯಿಲೆಗಳಿಂದ ಬಾಧಿತರಾಗಿರುವ ಕುಟುಂಬಗಳ ಸದಸ್ಯರಲ್ಲಿ ಈ ಪ್ರಶ್ನೆ ಕಾಡುವುದು ಸಹಜ. ಏಕೆಂದರೆ ಈ ಕಾಯಿಲೆಗಳಿಗೆ ತುತ್ತಾದವರ ಬದುಕೂ ಅತ್ಯಂತ ಯಾತನಾಮಯವಾಗಿರುತ್ತವೆ. ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸೆಂಟರ್ ಫಾರ್ ನ್ಯೂರೋ ಸೈನ್ಸ್ ವಿಭಾಗದ ಸಂಶೋಧಕರು ಹೊಸದಾಗಿ ಅಭಿವೃದ್ಧಿಪಡಿಸಿರುವ ಜಿಪಿಯು (ಗ್ರಾಫಿಕ್ ಪ್ರೊಸೆಸಿಂಗ್ ಯುನಿಟ್) ಆಧಾರಿತ 'ಮೆಷಿನ್ ಲರ್ನಿಂಗ್ ಅಲ್ಗಾರಿದಮ್' ಈ ನಿಟ್ಟಿನಲ್ಲಿ ಆಶಾ ಕಿರಣವಾಗಿದೆ.

ಇದರಿಂದ ವಿಜ್ಞಾನಿಗಳು ಮಿದುಳಿನ ವಿವಿಧ ಭಾಗಗಳ ನಡುವಿನ ಸಂಪರ್ಕಗಳನ್ನು ಹೆಚ್ಚು ತರ್ಕಬದ್ಧವಾಗಿ ಅರ್ಥೈಸಿಕೊಳ್ಳುವುದರ ಜತೆ ಮುಂದೇನಾಗಬಹುದು ಎಂಬುದನ್ನು ಊಹಿಸಲೂ ಅಥವಾ ಭವಿಷ್ಯವನ್ನು ನುಡಿಯಲು ಸಾಧ್ಯವಾಗುತ್ತದೆ. ಈ ಅಧ್ಯಯನ 'ನೇಚರ್ ಕಂಪ್ಯೂಟೇಷನಲ್ ಸೈನ್ಸ್ ಜರ್ನಲ್'ನಲ್ಲಿ ಪ್ರಕಟವಾಗಿದೆ.

ಮಿದುಳಿನಲ್ಲಿ ಪ್ರತಿ ಸೆಕೆಂಡಿಗೆ ಕೋಟಿಗಟ್ಟಲೆ ನರಕೋಶಗಳು ಮಿಂಚಿನಂತೆ ಬೆಳಕನ್ನು ಹೊಮ್ಮಿಸುತ್ತವೆ. ಇದರಿಂದಾಗಿಯೇ ನರಕೋಶಗಳಲ್ಲಿ ವಿದ್ಯುತ್ ಸಂಚಲನವಾಗುತ್ತದೆ. ಮಿದುಳಿನ ಒಂದು ತುದಿಯಿಂದ ಮತ್ತೊಂದು ತುದಿಗೆ ನಿರಂತರವಾಗಿ ವಿದ್ಯುತ್ ಪ್ರವಾಹ ಸಾಗುತ್ತಲೇ ಇರಬೇಕು. 'ಆಕ್ಸಾನ್' ಎಂದು ಕರೆಯಲಾಗುವ ಸಂಪರ್ಕದ ಕೇಬಲ್‌ಗಳ ಮೂಲಕವೇ ವಿದ್ಯುತ್ ಪ್ರವಹಿಸುತ್ತದೆ. ಮಿದುಳಿನ ಕಾರ್ಯನಿರ್ವಹಣೆಯ ಲೆಕ್ಕ (ಕಂಪ್ಯೂಟೇಷನ್) ಹಾಕಲು ಈ ಸಂಪರ್ಕ ಅತ್ಯಗತ್ಯ. ಮಿದುಳಿನ ವರ್ತನೆಯನ್ನು ಅನಾವರಣಗೊಳಿಸಲು, ಅರ್ಥೈಸಲು ಈ ಲೆಕ್ಕಾಚಾರ ಅಗತ್ಯ ಎನ್ನುತ್ತಾರೆ ಸೆಂಟರ್ ಫಾರ್ ನ್ಯೂರೋಸೈನ್ಸ್ ವಿಭಾಗದ ಪಿಎಚ್‌ಡಿ ವಿದ್ಯಾರ್ಥಿನಿ ವರ್ಷಾ ಶ್ರೀನಿವಾಸನ್.

'ಕನೆಕ್ಟೋಮ್' ಅಂದರೆ, ಮಿದುಳಿನಲ್ಲಿ ನರಗಳ ಸಂಪರ್ಕ ಜಾಲದ ವಿಸ್ತೃತ ನಕಾಶೆ ಅಥವಾ ವೈರಿಂಗ್ ಚಿತ್ರ ಎನ್ನಬಹುದು. ಪ್ರತಿಯೊಂದು ನರವೂ ಪರಸ್ಪರ ಸಂವಹನ ನಡೆಸುತ್ತವೆ. ಕನೆಕ್ಟೋಮ್ ಬಳಸಿ ಅಲ್ಜಮೇರ್ ರೋಗಿಯ ವರ್ತನೆ ಸ್ಪಷ್ಟವಾಗಿ ಗೋಚರಿಸುವುದಕ್ಕೂ ಮೊದಲೇ ಮಿದುಳಿನ ನರವ್ಯೂಹ ಕ್ಷೀಣಿಸುವುದು ಅಥವಾ ಮುದುಡುವುದರ ಲಕ್ಷಣಗಳನ್ನು ಗುರುತಿಸಬಹುದು ಎಂದು ಸೆಂಟರ್ ಫಾರ್ ನ್ಯೂರೋಸೈನ್ಸ್‌ನ ಸಹಾಯಕ ಪ್ರಾಧ್ಯಾಪಕ ದೇವರಾಜನ್ ಶ್ರೀಧರನ್ ಹೇಳಿದ್ದಾರೆ.

ಸಂಸ್ಥೆಯು ಅಭಿವೃದ್ಧಿಪಡಿಸಿರುವ ಅಲ್ಗಾರಿದಮ್ ವ್ಯವಸ್ಥೆಯು (ರೆಗ್ಯುಲರೈಸ್ಡ್, ಆಕ್ಸಲರೇಟೆಡ್, ಲೀನಿಯರ್ ಫಾಸಿಕಲ್ ಇವಾಲ್ಯುವೇಷನ್ ಅಥವಾ ರಿಯಲ್ ಲೈಫ್) ಡಿಫ್ಯೂಷನ್ ಮ್ಯಾಗ್ನೆಟಿಕ್ ರೆಸೊನಾನ್ಸ್ ಇಮೇಜಿಂಗ್‌ನಿಂದ (ಡಿ ಎಂಆರ್‌ಐ) ಮಾನವ ಮಿದುಳನ್ನು ಸ್ಕ್ಯಾನ್ ಮಾಡಿ ಸೃಷ್ಟಿಸುವ ಅಗಾಧ ಪ್ರಮಾಣದ ದತ್ತಾಂಶವನ್ನು ಅತಿ ವೇಗದಲ್ಲಿ ವಿಶ್ಲೇಷಣೆ ಮಾಡುತ್ತದೆ. ಈಗ ಚಾಲ್ತಿಯಲ್ಲಿರುವ ಅಲ್ಗಾರಿದಮ್‌ಗಿಂತ 150 ಪಟ್ಟು ವೇಗದಲ್ಲಿ ದತ್ತಾಂಶವನ್ನು ಮೌಲ್ಯ ಮಾಪನ ಮಾಡುವ ಸಾಮರ್ಥ್ಯ ಹೊಂದಿದೆ.

ಅಷ್ಟೇ ಅಲ್ಲ ಹಳೇ ವ್ಯವಸ್ಥೆಯಲ್ಲಿ ದತ್ತಾಂಶವನ್ನು ವಿಶ್ಲೇಷಿಸಿ ಮಾಹಿತಿ ಸಂಗ್ರಹಿಸಲು ಹಲವು ಗಂಟೆ ಅಥವಾ ಒಂದು ದಿನವೇ ಬೇಕಾಗುತ್ತಿತ್ತು. ಆ ಕೆಲಸವನ್ನು ಒಂದು ಸೆಕೆಂಡಿನಲ್ಲಿ ಮಾಡಬಹುದಾಗಿದೆ ಎಂದು ದೇವರಾಜನ್ ಶ್ರೀಧರನ್ ಹೇಳಿದ್ದಾರೆ.

ನೈಜೀರಿಯಾ ಆರೋಪಿ ಬಂಧನ

ಬೆಂಗಳೂರು: ಮಾದಕ ವಸ್ತು ಎಂ.ಡಿ.ಎಂ.ಎ ಕ್ರಿಸ್ಟಲ್ ಮಾರಾಟ ಮಾಡುತ್ತಿದ್ದ ನೈಜೀರಿಯಾ ದೇಶದ ಆರೋಪಿ ನಾಜಿ ಇಮ್ಯಾನ್ಯುವೆಲ್ ಅವರನ್ನು ಪುಲಿಕೇಶಿ ನಗರದ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ಮಾದಕ ವಸ್ತು ಎಂಡಿಎಂಎ ಕ್ರಿಸ್ಟಲ್ 20 ಗ್ರಾಂ, ₹ 2 ಸಾವಿರ ನಗದು, ಹುಂಡೈ ಕಾರು ವಶಕ್ಕೆ ಪಡೆಯಲಾಗಿದೆ. ಇವುಗಳ ಒಟ್ಟು ಮೌಲ್ಯ ₹ 1.20 ಲಕ್ಷ ಎಂದು ಪೊಲೀಸರು ತಿಳಿಸಿದ್ದಾರೆ.

ಉದ್ಧವ್ ಠಾಕ್ರೆ ರಾಜೀನಾಮೆ

ಒಂದನೇ ಪುಟದಿಂದ...

ಶಿವಸೇನಾದ ಬಂಡಾಯ ನಾಯಕ ಏಕನಾಥ ಶಿಂಧೆ ಅವರು ಶಿವಸೇನಾದ 39 ಶಾಸಕರು ಮತ್ತು ಪಕ್ಷೇತರ ಮತ್ತು ಸಣ್ಣ ಪಕ್ಷಗಳ 10 ಶಾಸಕರನ್ನು ಒಟ್ಟುಗೂಡಿಸಿಕೊಂಡು, ಆಘಾಡಿ ಸರ್ಕಾರದ ವಿರುದ್ಧ ಬಂಡಾಯ ಸಾರಿದ್ದರು.

ಪಕ್ಷವನ್ನು ಮತ್ತೆ ಕಟ್ಟುವೆ: ಉದ್ಧವ್

'ಪ್ರಜಾಪ್ರಭುತ್ವದಲ್ಲಿ ಸಂಖ್ಯೆಗಳಿಗಾಗಿ ತಲೆಗಳನ್ನು ಎಣಿಸಲಾಗುತ್ತದೆ. ಆದರೆ, ಅದರಲ್ಲಿ ನನಗೆ ಆಸಕ್ತಿ ಇಲ್ಲ. ಇಂಥ ಆಟಗಳನ್ನು ಆಡುವುದು ನನಗೆ ಬೇಕಾಗಿಲ್ಲ. ನಾಳೆ(ಭವಿಷ್ಯದಲ್ಲಿ) ಶಿವಸೇನಾ ಮುಖ್ಯಸ್ಥ ಬಾಳಾಸಾಹೇಬ್ ಠಾಕ್ರೆ ಅವರ ಮಗನ ಸರ್ಕಾರವನ್ನು ಉರುಳಿಸಿದೆವು ಎಂದು ಹೇಳುತ್ತಾರೆ. ಶಿವಸೇನೆಯು ಒಂದು ಕುಟುಂಬ. ನಾನು ಎಲ್ಲಿಗೂ ಓಡಿ ಹೋಗುವುದಿಲ್ಲ. ನಾನು ನಮ್ಮ ಎಲ್ಲ ಬೆಂಬಲಿಗರನ್ನು ಒಟ್ಟುಗೂಡಿಸಿ ಪಕ್ಷವನ್ನು ಮತ್ತೆ ಕಟ್ಟುತ್ತೇನೆ' ಎಂದು ಹೇಳಿದರು.

ಇದಕ್ಕೂ ಮುನ್ನ ಅವರು ಸರ್ಕಾರ ರಚನೆಗೆ ನೆರವಾದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರಿಗೆ ಧನ್ಯವಾದ ತಿಳಿಸಿದ್ದರು.

- ಮುಂದೆ ಏನು ಮಾಡಬೇಕು ಎಂಬುದು ಫಡಣವೀಸ್ ಮತ್ತು ಶಿವಸೇನಾ ಬಂಡಾಯ ನಾಯಕ ಏಕನಾಥ್ ಶಿಂಧೆ ನಿರ್ಧರಿಸುತ್ತಾರೆ: ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್
- ಬಿಜೆಪಿ ಕಾರ್ಯಕರ್ತರು ಸದ್ಯಕ್ಕೆ ಜಯ ಆಚರಣೆಯಲ್ಲಿ ತೊಡಗಬಾರದು: ಪಕ್ಷ ಸೂಚನೆ
- ಸರ್ಕಾರ ರಚನೆ ಕುರಿತು ನಮ್ಮ ಪಕ್ಷದ ನಿಲುವು ಏನು ಎಂಬುದನ್ನು ಗುರುವಾರ ತಿಳಿಸುತ್ತೇವೆ: ದೇವೇಂದ್ರ ಫಡಣವೀಸ್
- ಫಡಣವೀಸ್ ಮುಖ್ಯಮಂತ್ರಿ, ಸದ್ಯಕ್ಕೆ ಮಂತ್ರಿಯಾಗಿರುವ ಶಿಂಧೆ ಅವರು ಉಪ ಮುಖ್ಯಮಂತ್ರಿಯಾಗುವ ನಿರೀಕ್ಷೆ
- ವಾರಾಂತ್ಯದಲ್ಲಿ ಫಡಣವೀಸ್ ನೇತೃತ್ವದಲ್ಲಿ ಹೊಸ ಸರ್ಕಾರ ರಚನೆಯಾಗಲಿದೆ ಎಂಬ ನಿರೀಕ್ಷೆಯಿದೆ.
- ಶಿವಸೇನಾದ ಬಂಡಾಯ ಶಾಸಕರ ನಿವಾಸಗಳಿಗೆ ನೀಡಲಾಗಿದ್ದ ಪೊಲೀಸ್ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಜೊತೆಗೆ, ಎಲ್ಲಾ ಪ್ರಮುಖ ಸ್ಥಳಗಳಲ್ಲಿ ಮಹಾರಾಷ್ಟ್ರ ರಾಜ್ಯ ಮೀಸಲು ಪೊಲೀಸ್ ಪಡೆ (ಎಸ್‌ಆರ್‌ಪಿಎಫ್) ನಿಯೋಜಿಸಲಾಗಿದೆ. ಬಂಡಾಯ ಶಾಸಕರು ಖಾಸಗಿ ವಿಮಾನದಲ್ಲಿ ಗುರುವಾರ ಬೆಳಗ್ಗೆ ಮುಂಬೈಗೆ ಬರುವ ನಿರೀಕ್ಷೆ ಇದೆ.

ವಿಶ್ವಾಸಮತ ಸಾಬೀತಿಗೆ 'ಸುಪ್ರೀಂ' ಸೂಚನೆ

ಒಂದನೇ ಪುಟದಿಂದ...

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ. ಪರ್ದಿವಾಲಾ ನೇತೃತ್ವದ ನ್ಯಾಯಪೀಠವು, 'ಜೂನ್ 30ರಂದು ಬೆಳಿಗ್ಗೆ 11ಗಂಟೆಗೆ ವಿಶ್ವಾಸಮತದ ಏಕೈಕ ಕಾರ್ಯಸೂಚಿಯೊಂದಿಗೆ ಮಹಾರಾಷ್ಟ್ರ ವಿಧಾನಸಭೆಯ ವಿಶೇಷ ಅಧಿವೇಶನವನ್ನು ಕರೆಯುವುದನ್ನು ನಿಲ್ಲಿಸಲು ನಮಗೆ ಯಾವುದೇ ಆಧಾರವಿಲ್ಲ. ಪ್ರಜಾಪ್ರಭುತ್ವದ ಸಮಸ್ಯೆಗಳನ್ನು ಇತ್ಯರ್ಥಪಡಿಸಲು ಸದನವೇ ಸೂಕ್ತಮಾರ್ಗ' ಎಂದು ಅಭಿಪ್ರಾಯಪಟ್ಟಿತು.

ಉಪಸ್ಪೀಕರ್ ಅವರು ತಮ್ಮ ವಿರುದ್ಧ ನೀಡಿರುವ ಅನರ್ಹತೆಯ ನೋಟಿಸ್‌ಗಳನ್ನು ಪ್ರಶ್ನಿಸಿ ಶಿಂಧೆ ಮತ್ತು ಇತರರು ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆಯನ್ನು ಜುಲೈ 11ರಂದು ನಡೆಸಲು ನಿರ್ಧರಿಸಲಾಗಿದೆ ಎಂದೂ ನ್ಯಾಯಪೀಠವು ತಿಳಿಸಿದೆ.

ಸುಮಾರು ಮೂರೂವರೆ ಗಂಟೆಗಳ ಕಾಲ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಸಂಕ್ಷಿಪ್ತವಾಗಿ ಆದೇಶ ನೀಡಿ, ರಾಜ್ಯಪಾಲರು ಬುಧವಾರ ಹೊರಡಿಸಿದ್ದ ಸೂಚನೆ ಪ್ರಕಾರ ವಿಧಾನಸಭೆಯ ಕಲಾಪಗಳನ್ನು ನಡೆಸಲು ಅವಕಾಶ ಮಾಡಿಕೊಟ್ಟಿತು.

ಶಿವಸೇನಾ ಪರ ವಾದ ಮಂಡಿಸಿದ ಹಿರಿಯ ವಕೀಲ ಎ.ಎಂ. ಸಿಂಘ್ವಿ, 'ರಾಜ್ಯಪಾಲರು ದೇವರಲ್ಲ. ಅವರೂ ಮನುಷ್ಯರು. ಅದಕ್ಕಾಗಿಯೇ ನಮಗೆ ಎಸ್. ಆರ್.ಬೊಮ್ಮಾಯಿ ಮತ್ತು ರಾಮೇಶ್ವರ್ ಪ್ರಸಾದ್ ಅವರಂಥ ತೀರ್ಪುಗಳಿವೆ. ರಾಜ್ಯಪಾಲರು ಮುಖ್ಯಮಂತ್ರಿಯನ್ನು ಮಾತುಕತೆಗೆ ಕರೆಯುವ ಬದಲು ವಿರೋಧಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರ ಸಲಹೆಯಿಂದ ನಡೆದುಕೊಳ್ಳುತ್ತಿದ್ದಾರೆ' ಎಂದು ಆರೋಪಿಸಿದರು.

'ರಾಜ್ಯಪಾಲರ ನಿರ್ಧಾರವು ಪ್ರಜಾಪ್ರಭುತ್ವದ ಮೂಲ ಆಶಯಗಳಿಗೆ ಪೆಟ್ಟು ನೀಡುತ್ತದೆ. ಉಪಸ್ಪೀಕರ್ ಅವರು ತೀರ್ಮಾನಿಸುವವರೆಗೂ ನ್ಯಾಯಾಲಯವು ವಿಶ್ವಾಸಮತಯಾಚನೆಗೆ ಅವಕಾಶ ನೀಡಬಾರದು' ಎಂದೂ ಪ್ರತಿಪಾದಿಸಿದರು.

ಶಿವಸೇನಾದ ಆರೋಪವನ್ನು ವಿರೋಧಿಸಿ ರಾಜ್ಯಪಾಲರ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ವಿಶ್ವಾಸಮತ ಯಾಚನೆಯನ್ನು ತಡೆಯಲು ಸಾಧ್ಯವಿಲ್ಲ' ಎಂದು ಹೇಳಿದರು. ಬಂಡಾಯ ಶಾಸಕರ ಪರ ವಾದ ಮಂಡಿಸಿದ ಹಿರಿಯ ವಕೀಲ ಎನ್.ಕೆ ಕೌಲ್ ಅವರು, 'ಉದ್ಧವ್ ಠಾಕ್ರೆ ನೇತೃತ್ವದ ಮಹಾವಿಕಾಸ ಅಘಾಡಿ ಸರ್ಕಾರವು ತಮ್ಮದೇ ಪಕ್ಷದ ಮತ್ತು ಸದನದಲ್ಲಿ ಬಹುಮತವನ್ನು ಕಳೆದುಕೊಂಡ ನಂತರವೂ ಅಧಿಕಾರಕ್ಕೆ ಅಂಟಿಕೊಂಡಿದೆ' ಎಂದು ಆರೋಪಿಸಿದರು.

ಚಿತ್ರಾವಳಿ



ರಾಜಸ್ಥಾನದ ಉದಯಪುರದಲ್ಲಿ ನಡೆದಿರುವ ಟೈಲರ್ ಕನ್ಹಯ್ಯ ಲಾಲ್ ಹತ್ಯೆ ಖಂಡಿಸಿ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಬೆಂಗಳೂರಿನ ಪುರಭವನದ ಎದುರು ಬುಧವಾರ ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ



ಬೈರಸಂದ್ರ ಮತ್ತು ತಿಲಕನಗರ ವಾರ್ಡ್‌ಗಳ ಅವೈಜ್ಞಾನಿಕ ವಿಂಗಡಣೆ ವಿರೋಧಿಸಿ ಕಾಂಗ್ರೆಸ್ ಮತ್ತು ಸ್ಥಳೀಯ ಸಂಘ–ಸಂಸ್ಥೆಗಳ ಕಾರ್ಯಕರ್ತರು ತಿಲಕನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ಶಾಸಕಿ ಸೌಮ್ಯಾ ರೆಡ್ಡಿ, ಕಾಂಗ್ರೆಸ್ ಮುಖಂಡ ಬಾಂಧವ ನಾಗರಾಜ್ ಇದ್ದರು

ಗ್ಯಾಸ್ ಡೀಲರ್‌ಶಿಪ್ ಕೊಡಿಸುವ ನೆಪದಲ್ಲಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಯಾಸ್ ಡೀಲರ್‌ಶಿಪ್ ಕೊಡಿಸುವ ನೆಪದಲ್ಲಿ ವಂಚನೆ ನಡೆದಿದ್ದು, ದಕ್ಷಿಣ ವಿಭಾಗದ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಉತ್ತರಹಳ್ಳಿಯ ವಸಂತಕುಮಾರ್ ಎಚ್.ಪಿ ಗ್ಯಾಸ್ ಡೀಲರ್‌ಶಿಪ್ ಪಡೆಯಲು ಗೂಗಲ್‌ನಲ್ಲಿ ಶೋಧಿಸಿದ್ದರು. ಅದಾದ ಮೇಲೆ ಡೀಲರ್‌ಶಿಪ್ ಅಧಿಕಾರಿಯೆಂದು ಹೇಳಿಕೊಂಡು ದಾಖಲೆ ಸಲ್ಲಿಸುವಂತೆ ಅನಾಮಧೇಯ ವ್ಯಕ್ತಿಯಿಂದ ಕರೆ ಬಂದಿತ್ತು. ಅದನ್ನೇ ನಂಬಿದ್ದ ವಸಂತಕುಮಾರ್ ಅಧಾರ್ ಕಾರ್ಡ್, ಪ್ಯಾನ್ ಕಾರ್ಡ್ ದಾಖಲೆ ನೀಡಿದ್ದರು. ಜೊತೆಗೆ ಮುಂಗಡವಾಗಿ ₹ 1.17 ಲಕ್ಷ ಪಾವತಿಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಹಣವೂ ಸಿಕ್ಕಿಲ್ಲ. ಗ್ಯಾಸ್ ಡೀಲರ್‌ಶಿಪ್ ಸಹ ಸಿಕ್ಕಿಲ್ಲ ಎಂದು ವಸಂತಕುಮಾರ್ ದೂರು ನೀಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಜೆ.ಪಿ ನಗರದ ಶುಭಂ ಶರ್ಮಾ ₹ 97 ಸಾವಿರ ಕಳೆದುಕೊಂಡಿದ್ದಾರೆ. ಅವರೂ ಆನ್‌ಲೈನ್ ಗ್ಯಾಸ್ ಡೀಲರ್‌ಶಿಪ್ ಸಂಬಂಧ ಮಾಹಿತಿ ಸಂಗ್ರಹಿಸಲು ಗೂಗಲ್ ಮಾಡಿದ್ದರು. ಶರ್ಮಾ ಅವರನ್ನು ಫೋನ್ ಮೂಲಕ ಸಂಪರ್ಕಿಸಿದ ಅನಾಮಧೇಯ ವ್ಯಕ್ತಿ ಸೇವಾ ಶುಲ್ಕ, ಮುಂಗಡ ಹಣದ ನೆಪದಲ್ಲಿ ವಂಚಿಸಿದ್ದಾರೆ. ಪೊಲೀಸರು ಎರಡೂ ಪ್ರಕರಣಗಳ ತನಿಖೆ ಆರಂಭಿಸಿದ್ದಾರೆ.

ಟೈಲರ್ ಹತ್ಯೆ: ಎನ್‌ಐಎ ತನಿಖೆ

ಒಂದನೇ ಪುಟದಿಂದ...

ಪ್ರಧಾನಿ ಮೋದಿಗೆ ಹತ್ಯೆ ಬೆದರಿಕೆ: ಆರೋಪಿಗಳು ಕನ್ಹಯ್ಯ ಹತ್ಯೆಯ ಹೊಣೆ ಹೊತ್ತುಕೊಂಡು, 'ಇದು ಇಸ್ಲಾಂಗೆ ಅವಮಾನ ಮಾಡಿದ್ದಕ್ಕೆ ಪ್ರತೀಕಾರ' ಎಂಬ ಹೇಳಿಕೆ ವಿಡಿಯೊ ತುಣುಕನ್ನು ಮಂಗಳವಾರ ಸಂಜೆ ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಿದ್ದರು. ಜತೆಗೆ 'ಏ ಮೋದಿ, ಇವನ ತಲೆ ಕತ್ತರಿಸಿದ್ದೇವೆ'. 'ಇದೇ ಕತ್ತಿ ನಿನ್ನ ಕುತ್ತಿಗೆಗೂ ಬರಲಿದೆ, ನಿನಗೂ ಇದೇ ಗತಿ' ಎಂದು ಹಂತಕ ಗಡ್ಡಧಾರಿ ಅಖ್ತಾರಿ ಕೊಲೆ ಬೆದರಿಕೆ ಹಾಕಿರುವ ಅಂಶ ವಿಡಿಯೊ ತುಣುಕಿನಲ್ಲಿದೆ. 'ನೀನು ಬೆಂಕಿ ಹತ್ತಿಸಿದ್ದೀಯಾ, ನಾವು ಅದನ್ನು ನಂದಿಸುತ್ತೇವೆ' ಎಂದು ಹೇಳಿರುವುದು ವಿಡಿಯೊ ತುಣುಕಿನಲ್ಲಿದೆ.

ಕೃತ್ಯಕ್ಕೂ ಮುನ್ನ ಪಾಕ್‌ಗೆ ಕರೆ

'ಕನ್ಹಯ್ಯ ಲಾಲ್ ಹತ್ಯೆಯ ಹಂತಕ ರಲ್ಲಿ ಒಬ್ಬನಾದ ಮಹಮ್ಮದ್ ರಿಯಾಜ್ ಅನ್ಸಾರಿ ಪಾಕ್ ಮೂಲದ ಭಯೋತ್ಪಾದಕ ಗುಂಪುಗಳ ಜತೆಗೆ ನಂಟು ಹೊಂದಿದ್ದ. ಇನ್ನೊಬ್ಬ ಆರೋಪಿ ಗೌಸ್ 2014ರಲ್ಲಿ ಕರಾಚಿಗೆ ಭೇಟಿ ನೀಡಿರುವುದು ಕಂಡುಬಂದಿದೆ' ಎಂದು ರಾಜಸ್ಥಾನ ಪೊಲೀಸ್ ಮಹಾನಿರ್ದೇಶಕ ಎಂ.ಎಲ್. ಲಾಥರ್ ಬುಧವಾರ ತಿಳಿಸಿದ್ದಾರೆ.

'ಅನ್ಸಾರಿಗೆ ಪಾಕ್ ಮೂಲದ ಉಗ್ರ ಸಂಘಟನೆ ದಾವಾತ್– ಎ –ಇಸ್ಲಾಂ ಮತ್ತು ಇನ್ನೂ ಕೆಲವು ಉಗ್ರ ಸಂಘಟನೆಗಳ ಸಂಪರ್ಕವಿದೆ' ಎಂದು ಲಾಥರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಅನ್ಸಾರಿ ಎರಡು ಬಾರಿನೇಪಾಳಕ್ಕೂ ಭೇಟಿ ನೀಡಿದ್ದ. ಈತನಿಗೆ ದುಬೈ ನಂಟೂ ಇದೆ. ಪಾಕಿಸ್ತಾನದ 10 ಮೊಬೈಲ್ ನಂಬ ರುಗಳು ಅನ್ಸಾರಿ ಮೊಬೈಲ್‌ನಲ್ಲಿ ಪತ್ತೆ ಯಾಗಿವೆ. ಪಾಕಿಸ್ತಾನಕ್ಕೆ ಹಲವು ಬಾರಿ ಫೋನ್ ಕರೆಗಳನ್ನು ಮಾಡಿದ್ದಾನೆ' ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

ನಗರದಲ್ಲಿ ಇಂದು

ಗುರುವಂದನಾ ಕಾರ್ಯಕ್ರಮ: ಸಾನ್ನಿಧ್ಯ: ವಿಧುಶೇಖರ ಭಾರತೀ ಸ್ವಾಮೀಜಿ, ಉಪಸ್ಥಿತಿ: ಡಾ.ಸಿ. ಎನ್. ಅಶ್ವತ್ಥನಾರಾಯಣ, ಡಾ.ವಿ. ಆರ್. ಗೌರಿಶಂಕರ್, ಆಯೋಜನೆ: ಮಲ್ಲೇಶ್ವರ ಬ್ರಾಹ್ಮಣ ಸಭಾ ಟ್ರಸ್ಟ್, ಡಾ.ಅಶ್ವತ್ಥನಾರಾಯಣ ಫೌಂಡೇಷನ್, ಸಮಯ ಮತ್ತು ಸ್ಥಳ: ಬೆಳಿಗ್ಗೆ 9ಕ್ಕೆ ಚೌಡಯ್ಯ ಸ್ಮಾರಕ ಭವನ, 11ಕ್ಕೆ ಶಂಕರಾಚಾರ್ಯ ಉದ್ಯಾನ, 11.15ಕ್ಕೆ ಶೃಂಗೇರಿ ಶಂಕರ ಮಠ 6ನೇ ಮುಖ್ಯರಸ್ತೆ, ಮಲ್ಲೇಶ್ವರ

ಸಾಲುಮರದ ತಿಮ್ಮಕ್ಕನವರ 111ನೇ ಜನ್ಮ ದಿನದ ಸಂಭ್ರಮ: ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಾನ್ನಿಧ್ಯ: ಭದ್ರರಾಜ್ ಸ್ವಾಮೀಜಿ, ಪ್ರಸನ್ನಾನಂದ ಸ್ವಾಮೀಜಿ, ರೋಜಾ ಶಣ್ಮುಗಂ ಗುರುಸ್ವಾಮಿ, ಶಂಕರಾನಂದ ಸ್ವಾಮೀಜಿ, ಅಧ್ಯಕ್ಷತೆ: ಡಾ.ಜಿ. ಪರಮೇಶ್ವರ್, ಆಯೋಜನೆ: ಸಿದ್ಧಾರ್ಥ ಎಜುಕೇಷನ್ ಸೊಸೈಟಿ, ಸಾಲುಮರದ ತಿಮ್ಮಕ್ಕ ಇಂಟರ್‌ನ್ಯಾಷನಲ್ ಫೌಂಡೇಷನ್, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ: 10



ಸಾಲು ಮರದ ತಿಮ್ಮಕ್ಕ

2021ರ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ: ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಪಿ. ರವಿಕುಮಾರ್, ಸೀಮಂತ್ ಕುಮಾರ್ ಸಿಂಗ್, ಡಾ. ಗುರುರಾಜ ಕರಜಗಿ, ಆಯೋಜನೆ: ಇನ್‌ಸೈಟ್ಸ್ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಸ್ಥಳ: ಶೆರಟಾನ್ ಹೋಟೆಲ್, ಒರಾಯನ್ ಮಾಲ್ ಹತ್ತಿರ, ಬೆಳಿಗ್ಗೆ: 10



ಸಾರಿಕಾ



ಸಾಯಿ ಸಹಸ್ರ

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಸಾರಿಕಾ ಮತ್ತು ಸಾಯಿ ಸಹಸ್ರ, ಆಯೋಜನೆ: ಪ್ರಣವಾಂಜಲಿ ಅಕಾಡೆಮಿ ಫಾರ್ ಪರ್ಫಾಮಿಂಗ್ ಆರ್ಟ್ಸ್ ಸಂಸ್ಥೆ, ನಿರ್ದೇಶನ: ಪವಿತ್ರಾ ಪ್ರಶಾಂತ್, ಸ್ಥಳ: ಅಚ್ಯುತ ಪಾರ್ಟಿ ಹಾಲ್, ಶ್ರೀನಿವಾಸನಗರ 80 ಅಡಿ ರಸ್ತೆ, ಸಂಜೆ 7


'ಮೂರ್ಖರ ರಾಜ' ನಾಟಕ ಪ್ರದರ್ಶನ: ಉದ್ಘಾಟನೆ: ಪ್ರಭುದೇವ ಕಲ್ಮಠ್, ಅಧ್ಯಕ್ಷತೆ: ಡಾ.ವೇದಮೂರ್ತಿ.ಕೆ.ಬಿ., ಉಪಸ್ಥಿತಿ: ಗಣೇಶ್ ರಾವ್ ಕೇಸರ್‌ಕರ್, ವಿಶ್ವನಾಥ ಹಿರೇಮಠ, ವೀರಭದ್ರಯ್ಯ. ಎಸ್.ಆರ್., ಡಾ.ಪ್ರೇಮಾ ಸಿದ್ಧರಾಜು, ಆಯೋಜನೆ: ರಂಗ ಸಮಾಜ ಸಾಂಸ್ಕೃತಿಕ ಸಂಸ್ಥೆ, ಸ್ಥಳ: ಲಲಿತಮ್ಮ, ಚನ್ನಬಸಪ್ಪ ಸಭಾಂಗಣ, ಎಸ್.ಜೆ.ಆರ್. ಮಹಿಳಾ ಕಾಲೇಜು, ರಾಜಾಜಿನಗರ, ಬೆಳಿಗ್ಗೆ:10.30

ಇಂಧನ ಇಲಾಖೆಯ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್ ಮ್ಯಾನ್ ಹುದ್ದೆಗಳ ನೇಮಕಾತಿ ಆದೇಶ: ನೇತೃತ್ವ: ಪಿ.ಸುನೀಲ್ ಕುಮಾರ್, ಆಯೋಜನೆ: ಇಂಧನ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಡಾ.ಬಿ.ಆರ್. ಅಂಬೇಡ್ಕರ್ ಬೀದಿ, ಮಧ್ಯಾಹ್ನ 3

ಜಲಮಂಡಳಿ ರಾಮಚಂದ್ರ ಅವರ ಆತ್ಮ ಕಥನ 'ಕುಳವನ ಪಡಿಪಾಟಲು'(ನಿರೂಪಣೆ ಮಂಜುನಾಥ ದಾಸನಪುರ): ಉದ್ಘಾಟನೆ: ಯು.ಬಿ. ವೆಂಕಟೇಶ್, ಅಧ್ಯಕ್ಷತೆ: ಡಾ.ವೂಡೇ. ಪಿ. ಕೃಷ್ಣ, ಕೃತಿ ಬಿಡುಗಡೆ: ಶೂದ್ರ ಶ್ರೀನಿವಾಸ್, ಅತಿಥಿಗಳು: ಪ್ರೊ.ಆರ್. ಭೀಮ್ ಸೇನ, ಕೆಂಪರಾಮಯ್ಯ, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಪರಸ್ಪರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ: 4

'ಕೈಗಾದಲ್ಲೊಬ್ಬ ಕವಿ' ಕುರಿತು ಉಪನ್ಯಾಸ: ಉಪನ್ಯಾಸಕರು: ಎ.ಎನ್. ರಮೇಶ್, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಪ್ರಸ್ತಾವನೆ: ಮಹಾಂತೇಶ ದೇಗಾವಿ, ಆಯೋಜನೆ: ಕನ್ನಡ ಯುವಜನ ಸಂಘ, ಸ್ಥಳ:ಕನ್ನಡ ಯುವಜನ ಸಂಘದ ಸಭಾಂಗಣ, ಎಚ್. ಸಿದ್ದಯ್ಯ ರಸ್ತೆ, ಹೊಂಬೇಗೌಡನಗರ, ಸಂಜೆ: 6.30

ಹರಿದಾಸ ವಾಣಿ ಕಾರ್ಯಕ್ರಮ: ಗಾಯನ: ರಚನಾ ಶರ್ಮಾ, ಪಿಟೀಲು: ವಾಸುಕಿ ಪರಿಮಳ, ಮೃದಂಗ: ಶ್ರೀನಿವಾಸ್ ಅನಂತ ರಾಮಯ್ಯ, ಸ್ಥಳ: ನಂಜನಗೂಡು ರಾಘವೇಂದ್ರ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ.



ರಚನಾ ಶರ್ಮಾ

ಸ್ಪರ್ಧಾ ವಾಣಿ

ಆಫೀಮು



ನಿಮಗಿದು ಗೊತ್ತೇ?

ಆಫೀಮು ಒಂದು ಮಾದಕ ವಸ್ತು. ಪೌರಾತ್ಯ ದೇಶಗಳಲ್ಲಿ ಇದನ್ನು ಜನರು ತಂಬಾಕಿನಂತೆ ಉಪಯೋಗಿಸುತ್ತಾರೆ. ಕೆಲವರು ಇದನ್ನು ಜಗಿದು ತಿನ್ನುತ್ತಾರೆ. ಆಫೀಮು ಹೇಗೆ ಪಡೆಯುತ್ತಾರೆ ಗೊತ್ತೆ? ಅದನ್ನು ನಾವು ಅಡಿಗೆ, ಪಾಯಸಕ್ಕೆ ಬಳಸುತ್ತೇವಲ್ಲ ಗಸಗಸೆ, ಆ ಗಿಡದಿಂದ ಪಡೆಯಲಾಗುತ್ತದೆ. ಗಸಗಸೆ ಹಣ್ಣುಗಳಿಂದ ಬರುವ ರಸವನ್ನು ತೆಗೆಯಲಾಗುತ್ತದೆ. ಬಿಳಿ ಬಣ್ಣದ ಈ ರಸ ಹೆಪ್ಪುಗಟ್ಟುತ್ತದೆ. ಅನಂತರ ಅದು ಕಂದು ಬಣ್ಣಕ್ಕೆ ತಿರುಗುತ್ತದೆ. ಗಾಳಿ ಮತ್ತು ಬೆಳಕಿನಿಂದ ಹೀಗೆ ಬಣ್ಣ ಬದಲಾಗುತ್ತದೆ. ಈ ಅಂಟಿನಿಂದ ಇದರಿಂದ ಮಾತ್ರೆಗಳನ್ನು ತಯಾರಿಸಲಾಗುತ್ತದೆ.

ಭಾರತ ಸೇರಿದಂತೆ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಅಫೀಮು ಮಾರಾಟ ನಿಷೇಧಿಸಲಾಗಿದೆ. ಪರಿಶುದ್ಧ ಆಫೀಮನ್ನು ಮಾರ್ಫಿನ್ ಮುಂತಾದವುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಕೆಲವು ರಾಷ್ಟ್ರಗಳಲ್ಲಿ ಕಚ್ಚಾ ಮತ್ತು ಶುದ್ಧ ಆಫೀಮು ಮತ್ತು ಗಾಂಜಾದ ಅಕ್ರಮ ಮಾರಾಟದ ಮೇಲೆ ನಿಷೇಧ ಹೇರಲಾಗಿದೆ. ಆಫೀಮಿನಲ್ಲಿ ಸಸಾರಜನಕ ಕ್ಷಾರ ದ್ರವ್ಯಗಳಿರುವುದರಿಂದ ಅದು ನೋವು ನಿವಾರಕವಾಗಿ ಕೆಲಸ ಮಾಡುತ್ತದೆ. ಈ ಸಸಾರಜನಕ ಕ್ಷಾರ ದ್ರವ್ಯಗಳಲ್ಲಿ ಮಾರ್ಫಿನ್ ಅತಿ ಮುಖ್ಯವಾದುದು.

ಮಾದರಿ ಪ್ರಶ್ನೋತ್ತರ



ಸಾಮಾನ್ಯ ಜ್ಞಾನ

ಕೆಪಿಎಸ್‌ಸಿ ಗ್ರೂಪ್ 'ಸಿ'ಯ ವಿವಿಧ ಹುದ್ದೆಗಳು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಕರ್ನಾಟಕದ ವಿಧಾನಸಭೆಗೆ 70ರ ಸಂಭ್ರಮ. 1952ರಲ್ಲಿ ಮೊದಲ ವಿಧಾನಸಭೆಯ ಕಲಾಪ ಇಂದಿನ ಹೈಕೋರ್ಟ್ ಇರುವ ಕಟ್ಟಡದಲ್ಲಿ ನಡೆದಿತ್ತು.
2) ಮೊದಲ ವಿಧಾನಸಭೆಯ ಗೌರವ ಸ್ಪೀಕರ್ ಆಗಿ ವಿ.ವೆಂಕಟಪ್ಪ ಕಾರ್ಯನಿರ್ವಹಿಸಿದ್ದರು ಮತ್ತು ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಸೇರಿ ಎಲ್ಲಾ ಸದಸ್ಯರಿಗೆ ಪ್ರಮಾಣವಚನ ಬೋಧಿಸಿದ್ದರು.

ಉತ್ತರ ಸಂಕೇತಗಳು

ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

2) ಭಾರತೀಯ ಪತ್ರಿಕಾ ಮಂಡಳಿಯ ಅಧ್ಯಕ್ಷರಾಗಿ ಯಾರನ್ನು ನೇಮಕ ಮಾಡಲಾಗಿದೆ?

ಎ) ನ್ಯಾ. ರಂಜನಾ ದೇಸಾಯಿ
ಬಿ) ನ್ಯಾ. ಸಂಜಯ ಕಿಶನ್ ಕೌಲ್
ಸಿ) ನ್ಯಾ. ಎನ್ ವಿ ರಮಣ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

3) ವಿಶ್ವಸಂಸ್ಥೆ ಪ್ರಕಟಣೆಗಳು ಭಾರತೀಯ ಯಾವ ಭಾಷೆಯಲ್ಲಿ ಲಭ್ಯವಿವೆ?

ಎ) ಬಂಗಾಲಿ ಬಿ) ತಮಿಳು
ಸಿ) ಹಿಂದಿ ಡಿ) ಗುಜರಾತ್

ಉತ್ತರ:ಸಿ

4) ಐಟುಯೂಟು (I2U2)ಕೂಟದಲ್ಲಿ ಯಾವೆಲ್ಲಾ ದೇಶಗಳು ಇವೆ?

ಎ) ಭಾರತ, ಇಸ್ರೇಲ್, ಅಮೆರಿಕ, ಯುಎಇ
ಬಿ) ಭಾರತ, ಆಸ್ಟ್ರೇಲಿಯಾ, ಬ್ರಿಟನ್, ಯುಎಇ
ಸಿ) ಚೀನಾ, ಇಸ್ರೇಲ್, ಅಮೆರಿಕ, ಜಪಾನ್
ಡಿ) ಇಂಡೋನೇಷ್ಯ, ಇಸ್ರೇಲ್, ಅಮೆರಿಕ, ಜಪಾನ್

ಉತ್ತರ: ಎ

5) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಕ್ಷೀರಪಥದ ಕಪ್ಪುಕುಳಿ ಸಗ್ಗಿಟರಸ್-ಎ(Sagittarius A)ಗಿಂತಲೂ 500 ಪಟ್ಟು ದೊಡ್ಡದಾಗಿರುವ ಹೊಸ ಕಪ್ಪುಕುಳಿ ಪತ್ತೆಯಾಗಿದೆ. ಅದೂ ಸೂರ್ಯನ 3 ಬಿಲಿಯನ್ ಪಟ್ಟು ದ್ರವ್ಯರಾಶಿಯನ್ನು ಹೊಂದಿದೆ.
2) ಆಸ್ಟ್ರೇಲಿಯನ್ ನ್ಯಾಷನಲ್ ಯೂನಿವರ್ಸಿಟಿ ಖಗೋಳಶಾಸ್ತ್ರಜ್ಞರು ಸೆಂಟಾರಸ್ ನಕ್ಷತ್ರಪುಂಜದಲ್ಲಿರುವ ಬೃಹತ್ ಕುಪ್ಪುಕುಳಿ ಇದಾಗಿದೆ.

ಉತ್ತರ ಸಂಕೇತಗಳು

ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

6) ಅಗ್ನಿಪಥ ಕುರಿತಾದ ಹೇಳಿಕೆಗಳನ್ನು ಗಮನಿಸಿ

1) ಹದಿನೇಳೂವರೆ ವರ್ಷದಿಂದ 23ರ ತನಕದ ಯುವಕರನ್ನು ಸೇನೆಗೆ ಸೇರಲು ಅವಕಾಶ ನೀಡುತ್ತದೆ.
2) ಅಗ್ನಿಪಥದಲ್ಲಿ ಸೇರಿದ ಅಗ್ನಿವೀರರಿಗೆ ನೂತನ ಶಿಕ್ಷಣ ನೀತಿಗೆ ಅನುಗುಣವಾಗಿ ಇಂದಿರಾಗಾಂಧಿ ಮುಕ್ತ ವಿಶ್ವ ವಿದ್ಯಾಲಯದಿಂದ ಪದವಿ ದೊರೆಯಲಿದೆ ಹಾಗೂ ಆ ಪದವಿಗೆ ನಮ್ಮ ದೇಶದಲ್ಲಿ ಹಾಗೂ ವಿದೇಶಗಳಲ್ಲಿಯೂ ಮಾನ್ಯತೆ ದೊರೆಯಲಿದೆ.
3) ಭೂ ಸೇನಾ ಸೈನಿಕರ ಸರಾಸರಿ ವಯಸ್ಸು 32 ರಿಂದ 33 ವರ್ಷಗಳಾಗಿದ್ದು ಅಗ್ನಿಪಥ ಯೋಜನೆಯಿಂದಾಗಿ 26ಕ್ಕೆ ಇಳಿಯುವ ಸಾಧ್ಯತೆ ಇದೆ.
4) ಅಗ್ನಿಪಥ ಯೋಜನೆಯಡಿ ನೇಮಕವಾದವರಿಗೆ ನಾಲ್ಕುವರ್ಷ ಸೇವೆ ಸಲ್ಲಿಸಿದ ನಂತರ ಶೇ 75ರಷ್ಟು ಅಗ್ನಿವೀರರನ್ನು ವಾಪಸ್ ಸಮಾಜಕ್ಕೆ ಕಳುಹಿಸಲಾಗುತ್ತದೆ. ಇವರಿಗೆ ಪಿಂಚಣಿ ವ್ಯವಸ್ಥೆ ಇರುವುದಿಲ್ಲ. ₹ 11ರಿಂದ ₹12 ಲಕ್ಷದಷ್ಟು ಹಣವನ್ನು ನೀಡಲಾಗುತ್ತದೆ.

ಉತ್ತರ ಸಂಕೇತಗಳು

ಎ) ಹೇಳಿಕೆ 1, 2 ಮತ್ತು 3 ಮಾತ್ರ ಸರಿಯಾಗಿದೆ
ಬಿ) 1, 4ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) 1 ರಿಂದ 4ರ ತನಕ ಎಲ್ಲಾ ಹೇಳಿಕೆಗಳು ಸರಿಯಾಗಿವೆ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿದ್ದಾವೆ

ಉತ್ತರ: ಸಿ

7) ಬೆಂಗಳೂರಿನ ರಾಷ್ಟ್ರೀಯ ಮಿಲಿಟರಿ ಶಾಲೆಯ ಅಮೃತ ಮಹೋತ್ಸವ ಆಚರಿಸುತ್ತದೆ. ಇದನ್ನು ಆರನೇ ಕಿಂಗ್ ಜಾರ್ಜ್ ಆರಂಭಿಸಿದ್ದರು. ಈ ಶಾಲೆಯನ್ನು ಯಾವ ವರ್ಷ ಆರಂಭಿಸಲಾಗಿತ್ತು?

ಎ) 1946 ಬಿ) 1939
ಸಿ) 1940 ಡಿ)1950

ಉತ್ತರ: ಎ

8) ಅನಾಮಾರ್ಫಾಸಿಸ್ ಎಂಬ ಹೆಸರಿನ ದೃಶ್ಯ ಕಲೆಯನ್ನು ಬಳಸಿ ಅನಿಲ್ ಭೋಗಶೆಟ್ಟಿ ಎಂಬ ಕಲಾವಿದರು ಪ್ರಧಾನಿ ನರೇಂದ್ರ ಮೋದಿ ಚಿತ್ರ ಬಿಡಿಸಿದರು. ಹಾಗಾದರೆ ಅನಾಮಾರ್ಫಾಸಿಸ್ ವಿಶೇಷತೆ ಏನು?

ಎ) ನೋಡಿದ ತಕ್ಷಣ ಚಿತ್ರ ಏನು ಎಂಬುದು ಗೊತ್ತಾಗುತ್ತದೆ
ಬಿ) ನಿರ್ದಿಷ್ಟ ಬಿಂದುವಿನಲ್ಲಿ/ಕೋನದಲ್ಲಿ ನೋಡಿದಾಗ ಮಾತ್ರ ಚಿತ್ರವು ಸ್ಪಷ್ಟವಾಗುತ್ತದೆ
ಸಿ) ಕೇವಲ ಹೂವು ಹಣ್ಣುಗಳನ್ನು ಮಾತ್ರ ಬಿಡಿಸಲು ಈ ಕಲೆ ಬಳಸಲಾಗುತಿತ್ತು ಈಗ ಮಾನವರನ್ನು ಕೂಡಾ ಚಿತ್ರಿಸಲಾಗುತ್ತದೆ
ಡಿ) ಮೇಲಿನ ಯಾವುದೇ ಹೇಳಿಕೆ ಸರಿಯಾಗಿಲ್ಲ

ಉತ್ತರ:ಬಿ

'ಕಠಿಣ ಪರಿಶ್ರಮ, ಸತತ ಪ್ರಯತ್ನ ಅಗತ್ಯ'

ಯುಪಿಎಸ್‌ಸಿ ಟಾಪರ್ಸ್ ಟಿಪ್ಸ್



ಕೆ.ಆರ್.ಕಲ್ಪಶ್ರೀ

ಮೈಲಾರಿ ಲಿಂಗಪ್ಪ

ತುಮಕೂರು ಜಿಲ್ಲೆಯ ಶಿರಾ ಪಟ್ಟಣದ ಎಂಜಿನಿಯರಿಂಗ್ ಪದವೀಧರೆ ಕೆ.ಆರ್. ಕಲ್ಪಶ್ರೀ ಪ್ರಸಕ್ತ ಸಾಲಿನ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ 291ನೇ ರ‍್ಯಾಂಕ್ ಪಡೆದಿದ್ದಾರೆ. ಈ ಸಾಧನೆಯ ಹಿಂದಿನ ಸಿದ್ಧತೆ ಕುರಿತು 'ಸ್ಪರ್ಧಾವಾಣಿ'ಯೊಂದಿಗೆ ಅವರು ಮಾಹಿತಿ ಹಂಚಿಕೊಂಡಿದ್ದಾರೆ.

- **ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದ್ದೀರಿ, ನಿಮ್ಮ ಮುಂದಿನ ಹೆಜ್ಜೆ?**

ಗ್ರಾಮೀಣ ಶಾಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ತಂತ್ರಜ್ಞಾನ ಆಧಾರಿತ, ಇಂಟರ್ನೆಟ್, ಸ್ಮಾರ್ಟ್ ಬೋರ್ಡ್ ಒಳಗೊಂಡ ಉತ್ತಮ ಬೋಧನಾ ಸಾಮಗ್ರಿ ಪೂರೈಸುವ ಕೆಲಸ ಮಾಡಬೇಕು. ಅವಕಾಶ ದೊರೆತರೆ ಗ್ರಾಮಾಂತರ ಪ್ರದೇಶದ ಶಾಲೆಗಳಲ್ಲಿ ಶಿಕ್ಷಣದ ಅಭಿವೃದ್ಧಿಗೆ ಕೆಲಸ ಮಾಡುತ್ತೇನೆ.

- **ಯುಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳನ್ನು ಎಷ್ಟನೇ ಪ್ರಯತ್ನದಲ್ಲಿ ಪೂರ್ಣಗೊಳಿಸಿದಿರಿ?**

5ನೇ ಪ್ರಯತ್ನದಲ್ಲಿ ಪೂರ್ಣಗೊಳಿಸಿದೆ. ಎಂಜಿನಿಯರಿಂಗ್ ಪದವಿ ಮುಗಿಸುವ ವರೆಗೂ ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ಹೀಗಾಗಿ ಮೊದಲ ಸಲ ಯಾವುದೇ ತಯಾರಿ ಇಲ್ಲದೆ ಪರೀಕ್ಷೆ ಬರೆದಿದ್ದೆ.

ಐಚ್ಛಿಕ ವಿಷಯವಾಗಿ ಭೂಗೋಳ ಆಯ್ಕೆ ಮಾಡಿಕೊಂಡಿದ್ದರಿಂದ ಪ್ರಾರಂಭದಲ್ಲಿ ಕಷ್ಟ ಆಯ್ತು. ಎಲ್ಲ ವಿಷಯ ತಿಳಿದುಕೊಂಡು ಪಠ್ಯ ಮುಗಿಸಲು ಸಮಯ ಹಿಡಿಯಿತು. ಗುಂಪು ಚರ್ಚೆ, ಅಣಕು ಪರೀಕ್ಷೆಯನ್ನು ಹೆಚ್ಚಾಗಿ ಎದುರಿಸಿದಂತೆಲ್ಲಾ ಮುಖ್ಯ ಪರೀಕ್ಷೆ ಬರೆಯಲು ಸುಲಭವಾಯಿತು.

- **ನೀವು ಬಳಸುತ್ತಿದ್ದ ಅಧ್ಯಯನ ಪರಿಕರಗಳ ಬಗ್ಗೆ ತಿಳಿಸಿ**

ಸ್ಪರ್ಧಾತ್ಮಕ ಪರೀಕ್ಷೆ ಸಿದ್ಧತೆ ನಡೆಸುವವರು ಮುಖ್ಯವಾಗಿ 6ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗಿನ ಸಮಾಜ ವಿಜ್ಞಾನ, ಗಣಿತ ಪುಸ್ತಕಗಳನ್ನು ಓದಬೇಕು. ಅದರಿಂದ ಪ್ರಿಲಿಮ್ಸ್ ಪರೀಕ್ಷೆ ಬರೆಯಲು ತುಂಬಾ ಸಹಾಯವಾಗಲಿದೆ. ಇನ್ನುಳಿದಂತೆ ವಿಜ್ಞಾನ, ರಾಜ್ಯಶಾಸ್ತ್ರ, ಸಂವಿಧಾನ, ಅರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ವಿವಿಧ ಲೇಖಕರು ಬರೆದ ಪುಸ್ತಕಗಳನ್ನು ಅಧ್ಯಯನ ಮಾಡುತ್ತಿದ್ದೆ. ಇವುಗಳ ಜೊತೆಗೆ ಎ.ಪಿ.ಜೆ.ಅಬ್ದುಲ್ ಕಲಾಂ ಅವರ ಪ್ರೋತ್ಸಾಹದಾಯಕ ಪುಸ್ತಕ ಓದುತ್ತಿದ್ದೆ.

ಪ್ರಿಲಿಮ್ಸ್‌ನಲ್ಲಿ 15ರಿಂದ 20 ಪ್ರಶ್ನೆಗೆ ಪ್ರಚಲಿತ ವಿದ್ಯಮಾನಗಳ ಬಗ್ಗೆ ಇರುತ್ತವೆ. ಪ್ರಚಲಿತ ವಿದ್ಯಮಾನಗಳಿಗಾಗಿ ಕಡ್ಡಾಯವಾಗಿ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳನ್ನು ಓದುತ್ತಿದ್ದೆ. ಸ್ಪರ್ಧಾತ್ಮಕ ಪರೀಕ್ಷೆ ತಯಾರಿಯಲ್ಲಿ ಪತ್ರಿಕೆ ಓದುವುದು ತುಂಬಾ ಮುಖ್ಯ.

- **ಈ ಸ್ಪರ್ಧಾತ್ಮಕ ಪರೀಕ್ಷೆಗೆ ಹೆಚ್ಚುವರಿ ಕೋಚಿಂಗ್ ಅಗತ್ಯವಿದೆಯೇ? ನೀವು ಕೋಚಿಂಗ್‌ಗೆ ಹೋಗಿದ್ದಿರಾ? ಯಾವ ರೀತಿ ಕೋಚಿಂಗ್ ತರಬೇತಿ ನೆರವಾಗುತ್ತದೆ?**

ಕೋಚಿಂಗ್ ಇಲ್ಲದೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಬಹುದು. ಇತ್ತೀಚೆಗೆ ಯ್ಯೂಟ್ಯೂಬ್‌ನಲ್ಲಿ ಎಲ್ಲ ರೀತಿಯ ಕೋಚಿಂಗ್ ಕ್ಲಾಸ್ ಸಿಗುತ್ತವೆ. ಅವುಗಳ ಬಳಕೆಯಿಂದ ತಯಾರಿ ನಡೆಸಬಹುದು. ಆದರೆ, ನಮಗೊಂದು ಸೂಕ್ತ ಮಾರ್ಗದರ್ಶಕರ ಅವಶ್ಯಕತೆ ಇದೆ ಎನ್ನುವವರಿಗೆ ಕೋಚಿಂಗ್ ಬೇಕಾಗುತ್ತದೆ. ಅಲ್ಲಿ, ಯಾವುದನ್ನು ಓದಬೇಕು, ಯಾವುದು ಬೇಡ ಎಂಬ ಮಾರ್ಗದರ್ಶನ ಸಿಗುತ್ತದೆ.

- **ಎಷ್ಟು ಸಮಯದಿಂದ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದೀರಿ? ಸಿದ್ಧತೆಗೆ ಸಮಯ ಹೊಂದಾಣಿಕೆ ಹೇಗೆ ಮಾಡಿಕೊಂಡಿರಿ?**

2017-18 ಅಭ್ಯಾಸ ಶುರು ಮಾಡಿದ್ದೆ. ಎರಡು ಬಾರಿ ಮುಖ್ಯ ಪರೀಕ್ಷೆ ಬರೆದು, ಒಮ್ಮೆ ಸಂದರ್ಶನದವರೆಗೆ ಹೋಗಿದ್ದೆ. ನಿರಂತರ ಓದಿಗಿಂತ ಮಧ್ಯೆ ವಿರಾಮ ತೆಗೆದುಕೊಳ್ಳಬೇಕು. ಬೆಳಿಗ್ಗೆ ಧ್ಯಾನ, ಯೋಗ ಮಾಡುವುದು ಏಕಾಗ್ರತೆಯಿಂದ ಇರಲು ಸಹಾಯವಾಗುತ್ತದೆ. ದಿನ ಮತ್ತು ವಾರದ ವೇಳಾಪಟ್ಟಿ ತಯಾರಿಸಿಕೊಂಡು, ಅದರ ಪ್ರಕಾರವೇ ಅಧ್ಯಯನ ಮಾಡಬೇಕು. ಇಂತಿಷ್ಟು ಪಠ್ಯ ಓದಿ ಮುಗಿಸುತ್ತೇನೆ ಎಂದು ಗುರಿಯಿಟ್ಟುಕೊಂಡು ಓದಬೇಕು.

ಕನಿಷ್ಠ ನಿತ್ಯ 6 ಗಂಟೆಯಾದರೂ ಓದಬೇಕು. ನಾನು ಮುಖ್ಯ ಪರೀಕ್ಷೆಗೆ ತಯಾರಿ ನಡೆಸುವಾಗ 17 ರಿಂದ 18 ಗಂಟೆ ಕಾಲ ಅಭ್ಯಾಸದಲ್ಲಿ ತೊಡಗಿಸಿಕೊಳ್ಳುತ್ತಿದ್ದೆ. ನನಗೆ ಓದಿನ ಒತ್ತಡ ಕಡಿಮೆಯಾಗಲು ಬ್ಯಾಡ್ಮಿಂಟನ್, ಈಜು ಸಹಾಯವಾಯಿತು.

- **ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆಯುವವರಿಗೆ ನಿಮ್ಮ ಸಲಹೆ?**

ಕಠಿಣ ಪರಿಶ್ರಮ, ಸಕಾರಾತ್ಮಕ ಮನೋಭಾವ, ತಾಳ್ಮೆ ತುಂಬಾ ಮುಖ್ಯ. ಎಲ್ಲರೂ ಒಂದೇ ಸಲ ಉತ್ತೀರ್ಣರಾಗುವುದಿಲ್ಲ. ಕಠಿಣ ಶ್ರಮ, ಪ್ರಾಮಾಣಿಕ ಪ್ರಯತ್ನದ ಜೊತೆಗೆ, ಹಿಂದೆ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದವರಿಂದ ಸಲಹೆ ಪಡೆಯಬಹುದು. ಯುಪಿಎಸ್‌ಸಿ ಜೊತೆಗೆ ಇತರೆ ಪರೀಕ್ಷೆಗಳನ್ನು ಬರೆಯುವುದು ರೂಢಿ ಮಾಡಿಕೊಳ್ಳಬೇಕು. ಇಂಥ ಅಭ್ಯಾಸಗಳು ಪರೀಕ್ಷೆಯ ಯಶಸ್ಸಿಗೆ ನೆರವಾಗುತ್ತವೆ.

ಅಗ್ನಿಪಥ

ಸೇನಾ ನೇಮಕಾತಿಯ ಹೊಸಶಕೆ

ಯುಪಿಎಸ್‌ಸಿ- ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ -2, ಕೆಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ -2 ಹಾಗೂ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಪ್ರಚಲಿತ ವಿದ್ಯಮಾನವೊಂದರ ಮಾಹಿತಿ ಇಲ್ಲಿದೆ.



ಯು.ಟಿ.ಆಯಿಶ ಫರ್ಝಾನ

ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಲು ಭಾರತೀಯ ಯುವಕರಿಗೆ ಅವಕಾಶ ಕಲ್ಪಿಸುವ 'ಅಗ್ನಿಪಥ' ಎಂಬ ಹೊಸ ನೇಮಕಾತಿ ಯೋಜನೆಗೆ ಕೇಂದ್ರ ಸಚಿವ ಸಂಪುಟ ಇತ್ತೀಚೆಗೆ ಅನುಮೋದನೆ ನೀಡಿದೆ. ಈ ಯೋಜನೆಯಡಿ ಆಯ್ಕೆಯಾದ ಯುವಕರನ್ನು 'ಅಗ್ನಿವೀರ' ಎಂದು ಕರೆಯಲಾಗುತ್ತದೆ.

ಅಗ್ನಿಪಥ, ದೇಶಭಕ್ತಿ ಪ್ರೇರಿತರಾದ ಯುವಕರಿಗೆ ನಾಲ್ಕು ವರ್ಷಗಳ ಅವಧಿಗೆ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಲು ಅವಕಾಶ ನೀಡುತ್ತದೆ. ಇದು ಸೇನೆಯ ಮೂರು ಸೇವೆಗಳ (ಭೂಸೇನೆ, ನೌಕಾಪಡೆ ಮತ್ತು ವಾಯುಪಡೆ) ಮಾನವ ಸಂಪನ್ಮೂಲ ನೀತಿಯಲ್ಲಿ ಹೊಸ ಯುಗವನ್ನು ಪ್ರಾರಂಭಿಸಲು ಸರ್ಕಾರ ಪರಿಚಯಿಸಿರುವ ಪ್ರಮುಖ ರಕ್ಷಣಾ ನೀತಿ ಸುಧಾರಣೆಯಾಗಿದ್ದು, ತ್ವರಿತಗತಿಯಲ್ಲಿ ಅನುಷ್ಠಾನವಾಗುತ್ತಿದೆ.

ಯೋಜನೆಯ ವಿವರಗಳು

- ಅಗ್ನಿಪಥ ಯೋಜನೆಯಡಿಯಲ್ಲಿ, ಅಗ್ನಿವೀರರನ್ನು ನಾಲ್ಕು ವರ್ಷಗಳ ಅವಧಿಗೆ ವಿವಿಧ ಸೇನಾ ಪಡೆಗಳಲ್ಲಿ ಸಂಬಂಧಿತ ಸೇವಾ ಕಾಯಿದೆಗಳ ಅಡಿಯಲ್ಲಿ ದಾಖಲಿಸಲಾಗುತ್ತದೆ.
- ಈ ಮೂಲಕ ಸಶಸ್ತ್ರ ಪಡೆಗಳಲ್ಲಿ ಪ್ರಸಕ್ತ ಅಸ್ತಿತ್ವದಲ್ಲಿರುವ ಶ್ರೇಣಿಗಳಿಗಿಂತ ಭಿನ್ನವಾದ ಒಂದು ವಿಶಿಷ್ಟ ಶ್ರೇಣಿ ಯನ್ನು ರೂಪಿಸಲಾಗುತ್ತದೆ. ನಾಲ್ಕು ವರ್ಷಗಳ ಸೇವೆ ಪೂರ್ಣಗೊಳಿಸಿದ ನಂತರ ಅಗ್ನಿವೀರರಿಗೆ ಆ ಸಂದರ್ಭದಲ್ಲಿನ ಸಾಂಸ್ಥಿಕ ಅಗತ್ಯತೆಗಳು ಮತ್ತು ಕಾಲಕಾಲಕ್ಕೆ ಸಶಸ್ತ್ರ ಪಡೆಗಳು ಪ್ರಕಟಿಸಿದ ನೀತಿಗಳ ಆಧಾರದ ಮೇಲೆ ಆ ಪಡೆಗಳಲ್ಲಿ ಶಾಶ್ವತ ದಾಖಲಾತಿಗಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗುತ್ತದೆ.
- ನಾಲ್ಕು ವರ್ಷಗಳ ಸೇವಾ ಅವಧಿಯಲ್ಲಿ ತೋರಿಸಿದ ಕಾರ್ಯಕ್ಷಮತೆ ಮತ್ತು ವಸ್ತುನಿಷ್ಠ ಮಾನದಂಡಗಳ ಆಧಾರದ ಮೇಲೆ ಕೇಂದ್ರೀಕೃತ ರೀತಿಯಲ್ಲಿ ಅಗ್ನಿವೀರರ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ. ಪ್ರತಿ ನಿರ್ದಿಷ್ಟ ತಂಡದಿಂದ ಶೇ 25 ರಷ್ಟು ಅಗ್ನಿವೀರರನ್ನು ಸಶಸ್ತ್ರ ಪಡೆಗಳ ನಿಯಮಿತ ಕೇಡರ್‌ಗೆ ದಾಖಲಿಸಲಾಗುತ್ತದೆ.
- ಆಯ್ಕೆಯು ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ವ್ಯಾಪ್ತಿಯಾಗಿದ್ದು, ಈ ವರ್ಷ 46,000 ಅಗ್ನಿವೀರರನ್ನು ನೇಮಿಸಿಕೊಳ್ಳಲಾಗುವುದು.
- ಮಾನ್ಯತೆ ಪಡೆದ ತಾಂತ್ರಿಕ ಸಂಸ್ಥೆಗಳಾದ ಕೈಗಾರಿಕಾ ತರಬೇತಿ ಸಂಸ್ಥೆಗಳು ಮತ್ತು ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿನಿಂದ ವಿಶೇಷ ರ‍್ಯಾಲಿ (rallies)ಗಳು ಮತ್ತು ಕ್ಯಾಂಪಸ್ ಸಂದರ್ಶನಗಳೊಂದಿಗೆ ಎಲ್ಲಾ ಮೂರು ಸೇವೆಗಳಿಗೆ ಆನ್‌ಲೈನ್ ಮೂಲಕ ನೋಂದಣಿ ಕೈಗೊಳ್ಳಲಾಗುತ್ತದೆ.
- ದಾಖಲಾತಿಯು 'ಆಲ್ ಇಂಡಿಯಾ ಆಲ್ ಕ್ಲಾಸ್' (ಸಂಪೂರ್ಣ ಭಾರತದ ಸಮಗ್ರ ವರ್ಗಗಳು ತತ್ವದ) ಆಧಾರದ ಮೇಲೆ, ಅಂದರೆ ಯಾವುದೇ ಜಾತಿ, ಮತ, ಧರ್ಮ, ಲಿಂಗ, ವರ್ಗಗಳ ಬೇಧವಿಲ್ಲದೇ ನಡೆಯುತ್ತದೆ. ಈ ಹುದ್ದೆಗೆ ಅರ್ಹ ವಯಸ್ಸು 17 ವರ್ಷ 6 ತಿಂಗಳಿನಿಂದ 21 ವರ್ಷಗಳ ವ್ಯಾಪ್ತಿಯಲ್ಲಿರುತ್ತದೆ.
- ಕಳೆದ ಎರಡು ವರ್ಷಗಳಲ್ಲಿ ಸೇನಾ ನೇಮಕಾತಿ ಕೈಗೊಳ್ಳಲು ಸಾಧ್ಯವಾಗಿಲ್ಲದ ಕಾರಣ ಉದ್ದೇಶಿತ ನೇಮಕಾತಿಗೆ ಒಂದು ಬಾರಿ ವಿನಾಯಿತಿ ನೀಡಲು ಸರ್ಕಾರ ನಿರ್ಧರಿಸಿದೆ. ಆ ಪ್ರಕಾರ, 2022 ಕ್ಕೆ ಅಗ್ನಿಪಥ ಯೋಜನೆಗೆ ನೇಮಕಾತಿ ಪ್ರಕ್ರಿಯೆಗೆ ಗರಿಷ್ಠ ವಯಸ್ಸಿನ ಮಿತಿಯನ್ನು 23 ವರ್ಷಗಳಿಗೆ ಹೆಚ್ಚಿಸಲಾಗಿದೆ.
- 6 ತಿಂಗಳ ಕಾಲದ ತರಬೇತಿ ನೀಡಿದ ಬಳಿಕ ಮೂರುವರೆ ವರ್ಷಗಳ ಕಾಲ ಸೇವೆಗೆ ನಿಯೋಜಿಸಲಾಗುತ್ತದೆ.
- ಅಗ್ನಿವೀರರನ್ನು ಆಯಾ ವಿಭಾಗಗಳಿಗೆ ಅನ್ವಯವಾಗುವಂತೆ ಸಶಸ್ತ್ರ ಪಡೆಗಳಲ್ಲಿ ದಾಖಲಾತಿ ಗಾಗಿ ನಿಗದಿಪಡಿಸಿದ ವೈದ್ಯಕೀಯ ಅರ್ಹತೆಯ ಷರತ್ತುಗಳನ್ನು ಪೂರೈಸಬೇಕು.

ಶೈಕ್ಷಣಿಕ ಅರ್ಹತೆ

- ವಿವಿಧ ವಿಭಾಗಗಳಲ್ಲಿ ಪ್ರಸಕ್ತ ಚಾಲ್ತಿಯಲ್ಲಿರುವ ಕನಿಷ್ಠ ಶೈಕ್ಷಣಿಕ ಅರ್ಹತೆಗಳನ್ನೇ ಅಗ್ನಿವೀರರ ದಾಖಲಾತಿಗಾಗಿ ಪರಿಗಣಿಸಲಾಗುತ್ತದೆ. ಉದಾಹರಣೆಗೆ: ಸಾಮಾನ್ಯ ಸೇವಾ (ಜಿಡಿ) ಸೈನಿಕನಿಗೆ ವಿದ್ಯಾರ್ಹತೆ 10ನೇ ತರಗತಿ ಇದ್ದು ಇಲ್ಲೂ ಹಾಗೆಯೇ ಮುಂದುವರಿಯುತ್ತದೆ.

ಅಗ್ನಿವೀರರು

- ಈ ಯೋಜನೆಯ ಅಡಿಯಲ್ಲಿ ಸಂಬಂಧಿತ ಸೇವಾ ಕಾಯಿದೆಗಳ ಅಡಿಯಲ್ಲಿ ಸೇರಿಕೊಳ್ಳುವ ಯುವಪಡೆಗಳನ್ನು ಅಗ್ನಿವೀರರು (Agniveers) ಎಂದು ಕರೆಯಲಾಗುತ್ತದೆ.
- ಅಗ್ನಿವೀರರಿಗೆಮೂರುಸೇವೆಗಳಲ್ಲಿಅನ್ವಯವಾಗುವಂತೆ, ವಿವಿಧ ಇತರ ಭತ್ಯೆಗಳೊಂದಿಗೆ ನಿಗದಿ ಪಡಿಸಿದ ಮಾಸಿಕ ಪ್ಯಾಕೇಜ್‌ನ ವೇತನ ನೀಡಲಾಗುತ್ತದೆ.
- ನಾಲ್ಕು ವರ್ಷಗಳ ಸೇವಾವಧಿ ಪೂರ್ಣಗೊಂಡ ನಂತರ ಅಗ್ನಿವೀರರಿಗೆ ಒಂದು ಬಾರಿ 'ಸೇವಾನಿಧಿ' ಪ್ಯಾಕೇಜ್ ಪಾವತಿಸಲಾಗುವುದು.
- ಈ 'ಸೇವಾ ನಿಧಿ'ಯು ಆದಾಯ ತೆರಿಗೆಯಿಂದ ವಿನಾಯಿತಿ ಪಡೆಯುತ್ತದೆ. ಆದರೆ ಇವರಿಗೆ ಗ್ರಾಚ್ಯುಟಿ ಮತ್ತು ಪಿಂಚಣಿ ಪ್ರಯೋಜನಗಳನ್ನು ಪಡೆಯಲು ಯಾವುದೇ ಅರ್ಹತೆ ಇರುವುದಿಲ್ಲ. ಅಗ್ನಿವೀರರಿಗೆ ಭಾರತೀಯ ಸಶಸ್ತ್ರ ಪಡೆಗಳಲ್ಲಿ ಅವರ ಸೇವಾ ಅವಧಿಯಲ್ಲಿರುವವರೆಗೆ ₹48 ಲಕ್ಷ ಮೊತ್ತದ ಉಚಿತ ಜೀವ ವಿಮಾ ರಕ್ಷಣೆ ಒದಗಿಸಲಾಗುತ್ತದೆ.
- ರಾಷ್ಟ್ರಸೇವೆಯ ಈ ಅವಧಿಯಲ್ಲಿ ಅಗ್ನಿವೀರರು ಮಿಲಿಟರಿ ಕೌಶಲಗಳಾದ ಶಿಸ್ತು, ದೈಹಿಕ ಸಾಮರ್ಥ್ಯ, ನಾಯಕತ್ವದ ಗುಣಗಳು, ಧೈರ್ಯ ಮತ್ತು ದೇಶಭಕ್ತಿ ಮುಂತಾದ ಮೌಲ್ಯಗಳ ಸಮರ್ಥ ತರಬೇತಿ ಪಡೆದಿರುತ್ತಾರೆ.
- ನಾಲ್ಕು ವರ್ಷಗಳ ಈ ಅವಧಿಯ ಬಳಿಕ ಅಗ್ನಿವೀರರು ನಾಗರಿಕ ಸಮಾಜಕ್ಕೆ ಮರಳಬೇಕಿರುತ್ತದೆ ಮತ್ತು ಅಲ್ಲಿ ಪಡೆದ ತರಬೇತಿಯ ಫಲವಾಗಿ ಅವರು ರಾಷ್ಟ್ರ ನಿರ್ಮಾಣ ಪ್ರಕ್ರಿಯೆಗೆ ಅಪಾರ ಕೊಡುಗೆಗಳನ್ನು ನೀಡುವ ಅವಕಾಶವಿರುತ್ತದೆ.

ಪ್ರಜಾವಾಣಿ ಉದ್ಯೋಗ ವಾರ್ತೆ

ಜಲಸಂಪನ್ಮೂಲ ಇಲಾಖೆ: ಎಸ್‌ಡಿಎ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಜಲ ಸಂಪನ್ಮೂಲ ಇಲಾಖೆಯಲ್ಲಿ ಗ್ರೂಪ್-ಸಿ ಹಾಗೂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇರ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಈ ಹುದ್ದೆಗಳು ಪರಿಶಿಷ್ಟ ಜಾತಿಯ ಬ್ಯಾಕ್‌ಲಾಗ್ ಹುದ್ದೆಗಳಾಗಿವೆ.

ಅರ್ಹ ಪರಿಶಿಷ್ಟ ಜಾತಿ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು.

ಹುದ್ದೆಗಳ ಸಂಖ್ಯೆ: 155

ವಿದ್ಯಾರ್ಹತೆ: ಅಭ್ಯರ್ಥಿಗಳು ದ್ವಿತೀಯ ಪಿಯುಸಿ ಉತ್ತೀರ್ಣರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.

ವಯಸ್ಸು, ವೇತನ, ವಯೋಮಿತಿ ಸೇರಿದಂತೆ ಇತರೆ ಮಾಹಿತಿಗೆ ಈ ಕೆಳಗೆ ನೀಡಿರುವ ವೆಬ್‌ಸೈಟ್ ನೋಡಬಹುದು.

ಅಧಿಕೃತ ವೆಬ್‌ಸೈಟ್ ವಿಳಾಸ :https://waterresouces.karnataka.gov.in

ಅರ್ಜಿ ಸಲ್ಲಿಸಲು ಕೊನೆ ದಿನಾಂಕ: 10-08-2022

ಬ್ಯಾಂಕ್ ಆಫ್ ಬರೋಡಾ: ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ದೇಶದಾದ್ಯಂತ ಬ್ಯಾಂಕ್ ಆಫ್ ಬರೋಡಾ ಬ್ಯಾಂಕ್‌ನ ವಿವಿಧ ಪ್ರಾದೇಶಿಕ ಮತ್ತು ಶಾಖಾ ಕಚೇರಿಗಳಲ್ಲಿ ಖಾಲಿ ಇರುವ ವಿಶೇಷ ಅಧಿಕಾರಿ (ರಿಲೇಷನ್‌ಶಿಪ್ ಮ್ಯಾನೇಜರ್ ಮತ್ತು ಕ್ರೆಡಿಟ್ ಅನಾಲಿಸ್ಟ್) ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳ ಸಂಖ್ಯೆ: 325

ವಿದ್ಯಾರ್ಹತೆ: ಹುದ್ದೆಗಳಿಗೆ ಸಂಬಂಧಿಸಿದಂತೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ/ ಸ್ನಾತಕೋತ್ತರ ಪದವಿ ಪಡೆದಿರಬೇಕು. ಹೆಚ್ಚಿನ ಮಾಹಿತಿಗೆ ಈ ಕೆಳಗೆ ಅಧಿಸೂಚನೆಯ ಲಿಂಕ್ ನೀಡಿದೆ ಗಮನಿಸಬಹುದು.

ವೇತನ ಶ್ರೇಣಿ: ಇತರೆ ಭತ್ಯೆಗಳು ಸೇರಿದಂತೆ ಮಾಸಿಕ ₹ 36,700 ಮೂಲ ವೇತನ ಪಡೆಯಬಹುದು.

ವಯಸ್ಸು: ಕನಿಷ್ಠ 18 ವರ್ಷಗಳು, ಗರಿಷ್ಠ 42 ವರ್ಷಗಳ ವಯೋಮಿತಿಯಲ್ಲಿ ಇರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. ಆದಾಗ್ಯೂ ಸರ್ಕಾರಿ ನಿಯಮಾವಳಿಗಳ ಅನ್ವಯ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ವಯೋಮಿತಿ ಸಡಿಲಿಕೆ: ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳು.

ಅರ್ಜಿ ಶುಲ್ಕ: ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳಿಗೆ ₹ 100. ಇತರೆ ಅಭ್ಯರ್ಥಿಗಳಿಗೆ ₹ 600 ಅರ್ಜಿ ಶುಲ್ಕ ನಿಗದಿಪಡಿಸಲಾಗಿದೆ.

ನೇಮಕಾತಿ ಪ್ರಕ್ರಿಯೆ: ಲಿಖಿತ ಪರೀಕ್ಷೆ ಮೂಲಕ ನೇಮಕಾತಿ ನಡೆಯಲಿದೆ. ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಗಾಗಿ ಅಧಿಸೂಚನೆಯನ್ನು ನೋಡುವುದು.

ಅರ್ಜಿಸಲ್ಲಿಸುವ ವಿಧಾನ: ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಅಧಿಕೃತ ವೆಬ್‌ಸೈಟ್ https://ibpsonline.ibps.in/bobsojun22/basic_details.php/ ಗೆ ಲಾಗಿನ್ ಆಗಿ ಅರ್ಜಿಗಳನ್ನು ಸಲ್ಲಿಸಬಹುದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು 2022ರ ಜುಲೈ 12 ಕೊನೆ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಬ್ಯಾಂಕ್ ಹೊರಡಿಸಿರುವ ನೇಮಕಾತಿ ಅಧಿಸೂಚನೆಯನ್ನು ನೋಡಬಹುದು.

ಅಧಿಸೂಚನೆ ಲಿಂಕ್: https://www.bankofbaroda.in/-/media/Project/BOB/CountryWebsites/India/Ca...

ವೆಬ್‌ಸೈಟ್: https://www.bankofbaroda.in

ಬೀಜ ನಿಗಮದಲ್ಲಿ 32 ಹುದ್ದೆಗಳಿಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಬೀಜ ನಿಗಮದಲ್ಲಿ ಖಾಲಿ ಇರುವ 32 ಹುದ್ದೆಗಳ ಭರ್ತಿಗೆ ಆನ್‌ಲೈನ್ ಮೂಲಕ ಅರ್ಜಿ ಕರೆಯಲಾಗಿದೆ.

ಹುದ್ದೆಗಳ ಸಂಖ್ಯೆ: 32

ಸಹಾಯಕ ವ್ಯವಸ್ಥಾಪಕರು (ಕಾರ್ಯಾಚರಣೆ): 16

ಸಹಾಯಕರು: 16

ವಿದ್ಯಾರ್ಹತೆ: ಸಹಾಯಕ ವ್ಯವಸ್ಥಾಪಕರು ಹುದ್ದೆಗೆ ಬಿಎಸ್ಸಿ ಕೃಷಿ ಪದವಿ ಪಡೆದಿರಬೇಕು. ಸಹಾಯಕರು ಹುದ್ದೆಗಳಿಗೆ ಬಿಕಾಂ/ ಬಿಬಿಎಂ, ಕೃಷಿಯಲ್ಲಿ 2 ವರ್ಷದ ಡಿಪ್ಲೊಮಾ ಪಡೆದಿರಬೇಕು. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ನೋಡುವುದು.

ಅರ್ಜಿ ಶುಲ್ಕ: ಸಾಮಾನ್ಯ ಅಭ್ಯರ್ಥಿಗಳಿಗೆ ₹ 750, OBC ಅಭ್ಯರ್ಥಿಗಳಿಗೆ ₹ 500, ಮಾಜಿ ಸೈನಿಕ, ಎಸ್‌ಸಿ / ಎಸ್‌ಟಿ / ಪ್ರವರ್ಗ-1 / ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ, ಪ್ರಕ್ರಿಯೆ ಶುಲ್ಕ ₹ 250.

ವಯಸ್ಸು: ಯಾವುದೇ ಹುದ್ದೆಗೆ ಅರ್ಜಿ ಸಲ್ಲಿಸಲು ಕನಿಷ್ಠ 18 ವರ್ಷ, ಗರಿಷ್ಠ 35 ವರ್ಷಗಳು. ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 38 ವರ್ಷ, ಎಸ್‌ಸಿ / ಎಸ್‌ಟಿ / ಪ್ರವರ್ಗ-1 ಅಭ್ಯರ್ಥಿಗಳಿಗೆ 40 ವರ್ಷ ವಯೋಮಿತಿ ಸಡಿಲಿಕೆ ಇದೆ.

ಅರ್ಜಿ ಸಲ್ಲಿಸಿದವರಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ, ಮೆರಿಟ್ ಆಧಾರದಲ್ಲಿ ಆಯ್ಕೆ ನಡೆಸಲಾಗುತ್ತದೆ.

ಪಠ್ಯಕ್ರಮ ಮತ್ತು ಪರೀಕ್ಷೆ ಮಾದರಿಯನ್ನು ಹುದ್ದೆವಾರು ವಿವರಗಳನ್ನು ನೇಮಕಾತಿ ನಡೆಸುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವೆಬ್‌ಸೈಟ್ ನೋಡುವುದು.

ಅರ್ಜಿ ಸಲ್ಲಿಕೆ ಕಡೆ ದಿನ : 20-07-2022

ವೆಬ್‌ಸೈಟ್: https://cetonline.karnataka.gov.in/kea

ನವದೆಹಲಿಯಲ್ಲಿ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಜತೆಗೆ ರಾಹುಲ್ ಗಾಂಧಿ ಪ್ರತ್ಯೇಕ ಚರ್ಚೆ

ಸಾಮೂಹಿಕ ನಾಯಕತ್ವ: ಹೈಕಮಾಂಡ್ ಸ್ಪಷ್ಟೋಕ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ಕರ್ನಾಟಕ ವಿಧಾನಸಭೆಯ ಚುನಾವಣಾ ದಿನಾಂಕ ಘೋಷಣೆಗೆ ಮುನ್ನವೇ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಬೇಕು ಎಂಬ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬೇಡಿಕೆಗೆ ಕಾಂಗ್ರೆಸ್ ಹೈಕಮಾಂಡ್ ಮನ್ನಣೆ ನೀಡಿಲ್ಲ.

ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಜತೆಗೆ ಮಂಗಳವಾರ ಸುದೀರ್ಘವಾಗಿ ಚರ್ಚೆ ನಡೆಸಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ಇಬ್ಬರೂ ನಾಯಕರನ್ನು ಬುಧವಾರ ಪ್ರತ್ಯೇಕವಾಗಿ ಕರೆಸಿ ಸಮಾಲೋಚನೆ ನಡೆಸಿದರು. ಉಭಯ ನಾಯಕರು ಮುಂದಿನ ದಿನಗಳಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ರಾಹುಲ್ ಸೂಚಿಸಿದರು. ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಇಬ್ಬರಿಗೂ ಸೂಕ್ತ ಸ್ಥಾನಮಾನ ನೀಡಲಾಗುತ್ತದೆ ಎಂಬುದಾಗಿ ಭರವಸೆ ನೀಡಿದರು ಎಂದು ಆ ಪಕ್ಷದ ಮೂಲಗಳು ತಿಳಿಸಿವೆ.

ನಾಯಕರೊಳಗಿನ ಭಿನ್ನಾಭಿಪ್ರಾಯದ ಬಗ್ಗೆ ರಾಹುಲ್ ಅವರ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು.



ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರೊಂದಿಗೆ ಬುಧವಾರ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರು ಚರ್ಚಿಸಿದರು.

ಪಂಜಾಬ್ ವಿಧಾನಸಭಾ ಚುನಾವಣೆಗೆ ಮುನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಲಾಯಿತು. ಆದರೆ, ಇದರಿಂದ ಪಕ್ಷಕ್ಕೆ ಲಾಭಕ್ಕಿಂತ ನಷ್ಟವೇ ಹೆಚ್ಚಾಯಿತು. ಪಕ್ಷದಲ್ಲಿ ಮೂರು ಬಣಗಳು ಸೃಷ್ಟಿಯಾದವು. ಪಕ್ಷವು ಹೀನಾಯವಾಗಿ ಸೋತಿತು. ಅಂತಹ ತಪ್ಪನ್ನು ಕರ್ನಾಟಕದಲ್ಲಿ ಮಾಡಲು ಪಕ್ಷ ಸಿದ್ಧವಿಲ್ಲ ಎಂದು ರಾಜ್ಯ ನಾಯಕರಿಗೆ ರಾಹುಲ್ ಸ್ಪಷ್ಟಪಡಿಸಿದರು.

ಎಐಸಿಸಿ ಸೂಚನೆ ಮೇರೆಗೆ ರಾಜ್ಯದಲ್ಲಿ ಸಮೀಕ್ಷೆ ನಡೆಸಿದ್ದ ಚುನಾವಣಾ ನೀತಿ ತಂತ್ರಜ್ಞ ಸುನೀಲ್ ಕನುಗೋಲು, ಅವರು ಹೈಕಮಾಂಡ್‌ಗೆ ಸಲ್ಲಿಸಿದ್ದ ವರದಿಯಲ್ಲಿ 'ಬಿಜೆಪಿಯ ಪೈಪೋಟಿ ಎದುರಿಸಿ, ಕಾಂಗ್ರೆಸ್ ನೂರರ ಗಡಿ ದಾಟಬೇಕಿದ್ದರೆ ಪ್ರಚಾರ, ಕಾರ್ಯತಂತ್ರದ ಶೈಲಿಯನ್ನು ಪುನರ್ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದರು.

ಸಿದ್ದರಾಮಯ್ಯ ಬಣ ಹಾಗೂ ಶಿವಕುಮಾರ್ ಬಣಗಳ ನಡುವಿನ ಭಿನ್ನಮತದ ಬಗ್ಗೆಯೂ ಸಮೀಕ್ಷೆಯಲ್ಲಿ ಪ್ರಸ್ತಾಪಿಸಿರುವ ಅವರು, ಕಾರ್ಯಕರ್ತರ ಹಂತದಲ್ಲೂ ಎರಡು ಗುಂಪುಗಳು ಸೃಷ್ಟಿಯಾಗಿವೆ. ಸಮನ್ವಯದ ಕೊರತೆ ಇರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ಬಗ್ಗೆ ಕೂಡಲೇ ಗಮನ ಹರಿಸಬೇಕು. ಇಲ್ಲದಿದ್ದರೆ ಪಕ್ಷಕ್ಕೆ ಅಧಿಕಾರಕ್ಕೆ ಬರುವುದು ಕಷ್ಟ ಎಂದೂ ಹೇಳಿದ್ದರು.

'ಕರ್ನಾಟಕದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಆಶಾದಾಯಕವಾಗಿದೆ. ಮೇಲ್ನೋಟಕ್ಕೆ ಪಕ್ಷದ ಪರವಾದ ವಾತಾವರಣ ಇದೆ. ಆದರೆ, ಬಿಜೆಪಿ ಭಾರಿ ಪೈಪೋಟಿ ನೀಡುತ್ತಿದೆ. ಬಿಜೆಪಿ ವಿರುದ್ಧ ಅಸ್ತ್ರ ಪ್ರಯೋಗಿಸಲು ಪ್ರಚಾರ ಹಾಗೂ ಕಾರ್ಯತಂತ್ರ ಹೇಗಿರಬೇಕು?' ಎಂಬುದನ್ನು ಪಕ್ಷದ ನಾಯಕರಿಗೆ ಸುನೀಲ್ ವಿವರಿಸಿದ್ದಾರೆ. ಈ ಅಂಶಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಿದ ನಾಯಕರು, ಪಕ್ಷ ಸಂಘಟನೆ ಬಲಪಡಿಸಿ, ಅಧಿಕಾರ ಗದ್ದುಗೆ ಹಿಡಿಯಲು ರೂಪಿಸಿಕೊಳ್ಳಬೇಕಾದ ಕಾರ್ಯತಂತ್ರ, ಅದರ ಅನುಷ್ಠಾನದ ಬಗ್ಗೆ ಚರ್ಚೆ ನಡೆಸಿದ್ದಾರೆ.

ಸಿದ್ದರಾಮೋತ್ಸವ: ರಾಹುಲ್ ಭಾಗಿ

ದಾವಣಗೆರೆಯಲ್ಲಿ ಆಗಸ್ಟ್ 3ರಂದು ನಡೆಯಲಿರುವ 'ಸಿದ್ದ-ರಾಮೋತ್ಸವ'ದಲ್ಲಿ ರಾಹುಲ್ ಗಾಂಧಿ ಪಾಲ್ಗೊಳ್ಳಲಿದ್ದಾರೆ. 'ಕಾರ್ಯಕ್ರಮಕ್ಕೆ ಬರುವಂತೆ ನಾನು ನೀಡಿದ ಆಮಂತ್ರಣವನ್ನು ರಾಹುಲ್ ಗಾಂಧಿ ಒಪ್ಪಿಕೊಂಡಿ-ದ್ದಾರೆ' ಎಂದು ಸಿದ್ದರಾಮಯ್ಯ ತಿಳಿಸಿದರು.

ಒಗ್ಗಟ್ಟಿನಿಂದ ಚುನಾವಣೆ:ಡಿಕೆಶಿ

'ನಮ್ಮ ಪಕ್ಷದ ಪ್ರತಿಯೊಬ್ಬ ನಾಯಕರಿಗೂ ಒಂದೊಂದು ರೀತಿಯ ಬಲ ಇದೆ. ಒಗ್ಗಟ್ಟಿನಿಂದ ಚುನಾವಣೆ ಎದುರಿಸುತ್ತೇವೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕರ್ನಾಟಕದಲ್ಲಿ ಭ್ರಷ್ಟ ಬಿಜೆಪಿ ಸರ್ಕಾರದ ಆಡಳಿತವನ್ನು ಕೊನೆಗಾಣಿಸ-ಬೇಕಿದೆ. ಇದಕ್ಕಾಗಿ ಕಾರ್ಯತಂತ್ರ ರೂಪಿಸಿದ್ದೇವೆ. ಪಕ್ಷದ ವರಿಷ್ಠರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಪ್ರಕಾರವೇ, ಮುನ್ನಡೆಯುತ್ತೇವೆ' ಎಂದರು.

'ಯಾರು ಬೇಕಾದರೂ ಸಿಎಂ ಆಗಬಹುದು'

ಬೆಂಗಳೂರು: 'ಮಲ್ಲಿಕಾರ್ಜುನ ಖರ್ಗೆ, ಪರಮೇಶ್ವರ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೀಗೆ ಯಾರು ಬೇಕಾದರೂ ಮುಖ್ಯಮಂತ್ರಿ ಆಗಬಹುದು. ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಆಗಬೇಕೆಂದು ಕೆಲವರು ಹೇಳುತ್ತಿದ್ದಾರೆ' ಎಂದು ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಾಂಗ್ರೆಸ್ ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆಗೆ ಹೋಗಲಿದೆ' ಎಂದರು.

'ಏಳು ಬಾರಿ ಗೆದ್ದಿರುವ ರಾಮಲಿಂಗಾ ರೆಡ್ಡಿ ಅವರಿಗೂ ಸಿ.ಎಂ ಆಗುವ ಆಸೆ ಇದೆ. ದೇಶಪಾಂಡೆ ಅವರು ಎಂಟು ಬಾರಿ ಗೆದ್ದಿದ್ದಾರೆ. ಅವರಿಗೂ ಆಸೆ ಇದೆ. ಸಿದ್ದರಾಮಯ್ಯ ಹತ್ತು ವರ್ಷಗಳಿಂದ ಪಕ್ಷ ಸಂಘಟನೆ ಮಾಡುತ್ತಿದ್ದಾರೆ. ಮುಂದಿನ ಮುಖ್ಯಮಂತ್ರಿ ಯಾರು ಎಂಬ ಬಗ್ಗೆ ಪಕ್ಷದ ನಾಯಕರು ಈಗ ತೀರ್ಮಾನ ಮಾಡಿಲ್ಲ' ಎಂದರು.

ಕನಕ ಗುರುಪೀಠದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ

ಬೆಂಗಳೂರು: ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಬೆಳ್ಳೂಡಿಯ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರು ಪೀಠದಲ್ಲಿ ಚಂದ್ರಗುಪ್ತ ಮೌರ್ಯ ಇನ್‌ಸ್ಟಿಟ್ಯೂಷನ್ ಮತ್ತು ಬೆಂಗಳೂರಿನ ಇನ್‌ಸೈಟ್ಸ್ ಐಎಎಸ್ ಸಹಯೋಗದಲ್ಲಿ ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ಪರೀಕ್ಷೆಗಳಿಗೆ ತರಬೇತಿ ಕೇಂದ್ರ ಆರಂಭವಾಗಲಿದೆ.

'ಜುಲೈ 3ರಂದು ಕೇಂದ್ರ ಉದ್ಘಾಟನೆಯಾಗಲಿದ್ದು, 10ರಿಂದ ತರಗತಿಗಳು ಆರಂಭವಾಗಲಿವೆ. ನಿರಂಜನಾನಂದಪುರಿ ಸ್ವಾಮೀಜಿ ಅವರು ಕೇಂದ್ರವನ್ನು ಆರಂಭಿಸಿದ್ದಾರೆ. ಎಲ್ಲ ಸಮುದಾಯದವರಿಗೂ ಇಲ್ಲಿ ಅವಕಾಶವಿದೆ' ಎಂದು ಮಾಜಿ ಸಚಿವ ಎಚ್.ಎಂ.ರೇವಣ್ಣ ತಿಳಿಸಿದರು.

ಇನ್‌ಸೈಟ್ಸ್ ಐಎಎಸ್‌ನ ಸಂಸ್ಥಾಪಕ ಮತ್ತು ನಿರ್ದೇಶಕ ಜಿ.ಬಿ. ವಿನಯ್‌ಕುಮಾರ್ ಅವರು ಮಾತನಾಡಿ 'ಈಗಾಗಲೇ ದಾಖಲಾತಿ ಪ್ರಕ್ರಿಯೆ ಆರಂಭವಾಗಿದ್ದು, ಜೂ.26ರಂದು ಆನ್‌ಲೈನ್‌ನಲ್ಲಿ ಪ್ರವೇಶ ಪರೀಕ್ಷೆ ನಡೆಯಲಿದೆ' ಎಂದರು.

'ಇ-ಗ್ರಂಥಾಲಯ ಸೇರಿ ಎಲ್ಲ ಆಧುನಿಕ ಸೌಲಭ್ಯಗಳನ್ನು ಕೇಂದ್ರವು ಹೊಂದಿದ್ದು, 50 ವಿದ್ಯಾರ್ಥಿನಿಯರು ಸೇರಿ ಒಟ್ಟು 120 ಅಭ್ಯರ್ಥಿಗಳಿಗೆ ಅವಕಾಶವಿದೆ' ಎಂದು ವಿವರಿಸಿದರು.

ಮಾಹಿತಿಗೆ 9535867197, 7483163074, www.insightsonindia.com

ಕಲಿಕಾ ಹಾಳೆಗೂ ಹಣದ ಕೊರತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮಕ್ಕಳಿಗೆ ಆರಂಭಿಸಿರುವ ಕಲಿಕಾ ಚೇತರಿಕೆಯ ಹಾಳೆಗಳಿಗೂ ಸರ್ಕಾರ ಅನುದಾನದ ಕೊರತೆಯಾಗಿದೆ.


ಶಿಕ್ಷಕರೇ ಕಲಿಕಾ ಹಾಳೆಗಳ ಝೆರಾಕ್ಸ್ ಪ್ರತಿ ಮಾಡಿಸಿಕೊಂಡು ವಿದ್ಯಾರ್ಥಿಗಳಿಗೆ ಬೋಧನೆ ಮಾಡುವಂತೆ ಶಿಕ್ಷಣ ಇಲಾಖೆ ಶಿಕ್ಷಕರಿಗೆ ಸೂಚಿಸಿದೆ.

'ವಿದ್ಯಾ ಪ್ರವೇಶ– ಕಲಿಕಾ ಚೇತರಿಕೆ'ಯ ಕಲಿಕಾ ಹಾಳೆಗಳನ್ನು ಝೆರಾಕ್ಸ್ ಮಾಡಿಸಲು ದಾನಿಗಳ ಬಳಿ ಹಣ ಸಂಗ್ರಹಿಸಿ ಎಂದು ಸಮಗ್ರ ಶಿಕ್ಷಣ ಯೋಜನೆ ರಾಜ್ಯ ನಿರ್ದೇಶಕರು ಜೂ. 27ರಂದು ಸುತ್ತೋಲೆ ಹೊರಡಿಸಿದ್ದಾರೆ.

ಕೋವಿಡ್ ಕಾರಣಕ್ಕೆ ವಿದ್ಯಾರ್ಥಿಗಳ ಕಲಿಕಾ ನಷ್ಟ ಸರಿದೂಗಿಸಲು1 ರಿಂದ 9ನೇ ತರಗತಿಯವರೆಗಿನ ವಿದ್ಯಾರ್ಥಿಗಳ 'ವಿದ್ಯಾಪ್ರವೇಶ–ಕಲಿಕಾ ಚೇತರಿಕೆ' ಕಾರ್ಯಕ್ರಮ ಆರಂಭಿಸಲಾಗಿದೆ. ಈ ಮೂಲಕ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದು ಕಾರ್ಯಕ್ರಮದ ಉದ್ದೇಶ. 1ರಿಂದ 3ನೇ ತರಗತಿಯವರೆಗೆ ಮೊದಲ ಮೂರು ತಿಂಗಳಿಗೆ ವಿದ್ಯಾಪ್ರವೇಶ ಅನುಷ್ಠಾನಗೊಳಿಸಲಾಗಿದೆ.

ಈ ಕಾರ್ಯಕ್ರಮದ ಭಾಗವಾಗಿ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಶಿಕ್ಷಕರ ಕೈಪಿಡಿ ಹಾಗೂ ಮಕ್ಕಳ ಕಲಿಕಾ ಹಾಳೆಗಳ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗಿದೆ. 'ದಾನಿಗಳ ನೆರವಿನಲ್ಲಿ ಈ ಹಾಳೆಗಳನ್ನು ಝೆರಾಕ್ಸ್ ಮಾಡಿಸಿ ಮಕ್ಕಳಿಂದ ಕಲಿಕಾ ಚಟುವಟಿಕೆಗಳನ್ನು ಮಾಡಿಸಬೇಕು' ಎಂದು ಸೂಚಿಸಿದೆ.

'ಶಾಲಾನುದಾನ ಅಥವಾ ಎಸ್‌ಡಿಎಂಸಿ ಅನುದಾನ ಲಭ್ಯ ಇದ್ದರೆ ಅಥವಾ ಯಾವುದೇ ಸರ್ಕಾರದ ಅನುದಾನವನ್ನು ಸಹ ಝೆರಾಕ್ಸ್‌ಗೆ ಬಳಸಬಹುದಾಗಿದೆ. ಒಂದು ತರಗತಿ ಅಥವಾ ವಿಭಾಗಕ್ಕೆ ಒಂದು ವಿಷಯಕ್ಕೆ ಒಂದು ಪ್ರತಿ ಮಾತ್ರ ಝೆರಾಕ್ಸ್ ಪ್ರತಿ ಸಿದ್ಧಪಡಿಸಿ, ಎಲ್ಲ ಮಕ್ಕಳಿಂದ ಕಲಿಕಾ ಚಟುವಟಿಕೆ ಮಾಡಿಸಬೇಕು' ನ್ನಲಾಗಿದೆ.



ಕಲಿಕಾ ಹಾಳೆಯ ಪ್ರತಿ

ಹಾಳೆಗಳಲ್ಲಿ ಏನಿದೆ?

ಮಕ್ಕಳು ತ್ವರಿತಗತಿಯಲ್ಲಿ ಮತ್ತು ಸುಲಭವಾಗಿ ಕಲಿಯಲು ಅನುಕೂಲವಾಗುವಂತೆ ರೂಪಿಸಿರುವ ವರ್ಕ್‌ಶೀಟ್‌ಗಳೇ ಕಲಿಕಾ ಚೇತರಿಕೆಯ ಹಾಳೆಗಳು ಎಂದು ಶಿಕ್ಷಕರು ವಿವರಿಸಿದ್ದಾರೆ. ಚಿತ್ರಗಳ ಸಮೇತ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದರಿಂದ ಕಲಿಕೆಗೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

'ಕಲಿಕಾ ಹಾಳೆಯ ಮುದ್ರಣ ಪ್ರತಿಗಳನ್ನು ನೀಡುವುದಾಗಿ ಇಲಾಖೆ ತಿಳಿಸಿದೆ. ಆದರೆ, ಇನ್ನೂ ಕೈ ಸೇರಿಲ್ಲ. ಸದ್ಯ ಒಂದು ವಿಷಯದ ಝೆರಾಕ್ಸ್‌ಗೆ ದಾನಿಗಳನ್ನು ಹುಡುಕುತ್ತ ಹೋಗಬೇಕಾದ ಪರಿಸ್ಥಿತಿ ಇದೆ. ಬಹುತೇಕ ಕಡೆಗಳಲ್ಲಿ ಶಿಕ್ಷಕರೇ ಝೆರಾಕ್ಸ್‌ಗೆ ಖರ್ಚು ಮಾಡುತ್ತಿದ್ದಾರೆ' ಎಂದು ಹೆಸರು ಹೇಳಲು ಇಚ್ಛಿಸಿದ ಶಿಕ್ಷ-ಕರೊಬ್ಬರು ತಿಳಿಸಿದ್ದಾರೆ.

ಒಂದು ತರಗತಿಗೆ ಒಂದು ಪ್ರತಿ ಝೆರಾಕ್ಸ್ ಮಾಡಿಸಿ ಕಲಿಸುವುದಾದರೂ ಹೇಗೆ? ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿದ್ದರೆ ಝೆರಾಕ್ಸ್ ₹800 ಅನ್ನು ಶಿಕ್ಷಕರೇ ಭರಿಸಬೇಕಿದೆ ಎಂದರು.

ಸುರಕ್ಷತೆ: ಖಾಸಗಿ ಶಾಲೆಗಳಿಗೆ ವಿನಾಯಿತಿ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನಿತ, ಅನುದಾನರಹಿತ ಶಾಲೆಗಳ ಮಾನ್ಯತೆ, ಮಾನ್ಯತೆ ನವೀಕರಣಕ್ಕೆ ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತೆ ಪ್ರಮಾಣಪತ್ರ ಸಲ್ಲಿಸಬೇಕೆಂಬ ನಿಯಮದಿಂದ ವಿನಾಯಿತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

'ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಟಿಪ್ಪಣಿಯಂತೆ, 2022–23ನೇ ಸಾಲಿಗೆ ಮಾನ್ಯತೆ ಅಥವಾ ಮಾನ್ಯತೆ ನವೀಕರಣ ನೀಡಲು ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತೆ ಪ್ರಮಾಣಪತ್ರ ಸಲ್ಲಿಸುವ ಷರತ್ತಿನಂತೆ ಮುಚ್ಚಳಿಕೆ ಪ್ರಮಾಣಪತ್ರ ಪಡೆದು, ಒಂದು ವರ್ಷದ ಮಟ್ಟಿಗೆ ವಿನಾಯಿತಿ ನೀಡಲಾಗುವುದು' ಎಂದು ಆದೇಶದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ತಿಳಿಸಿದ್ದಾರೆ.

ವೈಜ್ಞಾನಿಕ ಮಾರ್ಗಸೂಚಿ ರಚಿಸಿ: ಅಗ್ನಿ ಸುರಕ್ಷತೆ ಹಾಗೂ ಕಟ್ಟಡ ದಕ್ಷತೆ ಪ್ರಮಾಣಪತ್ರ ಸಲ್ಲಿಸಬೇಕೆಂಬ ನಿಯಮದಿಂದ ವಿನಾಯಿತಿ ನೀಡಿರುವುದನ್ನು ಸ್ವಾಗತಿಸಿರುವ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಒಕ್ಕೂಟದ (ರುಪ್ಸ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಅಗ್ನಿ ಸುರಕ್ಷತಾ ಪ್ರಮಾಣಪತ್ರದ ವಿಚಾರದಲ್ಲಿ ವೈಜ್ಞಾನಿಕ ಮಾರ್ಗ-ಸೂಚಿಯನ್ನು ರಚಿಸಿ, ಖಾಸಗಿ ಶಾಲೆಗಳಿಗೆ ಭ್ರಷ್ಟಾಚಾರ ರಹಿತವಾಗಿ ಮತ್ತು ಸುಲಭವಾಗಿ ಸಿಗುವಂತೆ ಮಾಡಬೇಕು' ಎಂದು ಮನವಿ ಮಾಡಿದ್ದಾರೆ.

'ವಿಧಾನಪರಿಷತ್ ಸದಸ್ಯರಾದ ಎಸ್.ವಿ.ಸಂಕನೂರು ನೇತೃತ್ವದಲ್ಲಿ ಕಳೆದ ತಿಂಗಳು ಸಿ.ಎಂ ಭೇಟಿಯಾದಾಗ, ಕಟ್ಟಡ ಗುಣಮಟ್ಟ, ಅಗ್ನಿ ಸುರಕ್ಷತೆ ಪ್ರಮಾಣಪತ್ರಗಳ ಅಗತ್ಯ ಕುರಿತು ಎರಡು ವರ್ಷ ವಿನಾಯಿತಿ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದರು. ಈಗ ಒಂದು ವರ್ಷಕ್ಕೆ ವಿನಾಯಿತಿ ನೀಡಿ ಆದೇಶ ಹೊರಡಿಸಿದೆ' ಎಂದರು.

'ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಅಪ್ರಯೋಜಕರು'

ಬೆಂಗಳೂರು: 'ಕಾಂಗ್ರೆಸ್ ಪಕ್ಷದ ನಾಯಕತ್ವ ವಹಿಸಲು ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಅಪ್ರಯೋಜಕರು' ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಎಂ.ಡಿ. ಲಕ್ಷ್ಮೀನಾರಾಯಣ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ನನಗೆ ವಿಧಾನಪರಿಷತ್ ಸ್ಥಾನದ ಭರವಸೆ ನೀಡಿ ದ್ರೋಹ ಮಾಡಿದ್ದಾರೆ' ಎಂದು ಕಿಡಿಕಾರಿದರು.

'ನಾನು ತುರುವೇಕೆರೆ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಅಲ್ಲಿ ಕಾಂತರಾಜ್‌ಗೆ ಟಿಕೆಟ್ ಕೊಡುವುದಾಗಿ ತಿಳಿಸಿದ ನಾಯಕರು, ನನಗೆ ಪರಿಷತ್ ಸ್ಥಾನದ ಭರವಸೆ ನೀಡಿದ್ದರು. ಆ ಮಾತಿನಂತೆ ನಡೆದುಕೊಳ್ಳಲಿಲ್ಲ' ಎಂದು ಹೇಳಿದರು.

'ಪಕ್ಷಕ್ಕೆ ಸಾಕಷ್ಟು ದುಡಿದಿದ್ದೇನೆ. ನನ್ನಂಥ ಕಾರ್ಯಕರ್ತನಿಗೆ ಹೀಗೆ ಮಾಡಿದರೆ ಹೇಗೆ? ಪಕ್ಷದ ನಾಯಕರಿಗೆ ಬಹಿರಂಗ ಪತ್ರ ಬರೆದಿದ್ದೇನೆ. ಶಿಸ್ತು ಪಾಲನಾ ಸಮಿತಿ ನೋಟಿಸ್ ಕೊಟ್ಟರೆ ಉತ್ತರಿಸುತ್ತೇನೆ' ಎಂದು ಅವರು ಹೇಳಿದರು.

ಕರಾವಳಿ: ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಉಡುಪಿ/ ಮಂಗಳೂರು: ಕರಾವ-ಳಿಯಾದ್ಯಂತ ಬುಧವಾರ ಬಿರುಸಿನ ಮಳೆಯಾಗಿದೆ. ಗಾಳಿ ಮಳೆಗೆ ಕಾರ್ಕಳ ತಾಲ್ಲೂಕಿನ ಮುಂಡ್ಕೂರು ಗ್ರಾಮದಲ್ಲಿ ಮನೆ ಮೇಲೆ ಮರ ಬಿದ್ದು ಹಾನಿಯಾಗಿದೆ.


ಸಮುದ್ರದಲ್ಲಿ ಗಂಟೆಗೆ 40 ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದ್ದು, 3.5 ಮೀಟರ್‌ವರೆಗೂ ದೈತ್ಯ ಅಲೆಗಳು ಏಳುವ ಸಂಭವವಿದ್ದು, ಮೀನುಗಾರರು ಸಮುದ್ರಕ್ಕಿಳಿಯ-ದಂತೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಕರಾವಳಿಯ ಮೂರೂ ಜಿಲ್ಲೆಗಳಿಗೆ ಜುಲೈ 1ರ ತನಕ 'ಆರೆಂಜ್ ಅಲರ್ಟ್', ಜುಲೈ 2ರಿಂದ 4ರವರೆಗೆ 'ಯೆಲ್ಲೋ ಅಲರ್ಟ್' ಮುನ್ಸೂಚನೆಯನ್ನು ಭಾರತೀಯ ಹವಾಮಾನ ಇಲಾಖೆ ನೀಡಿದೆ.

ಹೆಬ್ರಿಯಲ್ಲಿ ಅತಿ ಹೆಚ್ಚು 26.5 ಸೆಂ.ಮೀ ಮಳೆ ಬಿದ್ದಿದೆ. ಶಿವಪುರದಲ್ಲಿ 18.9 ಸೆಂ.ಮೀ, ವರಂಗದಲ್ಲಿ 18.3. ಸೆಂ.ಮೀ ಮಳೆಯಾಗಿದೆ.

ಐಎಫ್‌ಎಸ್: ರಾಜ್ಯದ ಸಾಧಕರು

ಪ್ರಜಾವಾಣಿ ವಾರ್ತೆ



ತರುಣ್ ಎಸ್

ಬೆಂಗಳೂರು: ಕೇಂದ್ರ ನಾಗರಿಕ ಸೇವಾ ಆಯೋಗವು (ಯುಪಿಎಸ್‌ಸಿ) ನಡೆಸಿದ್ದ ಭಾರತೀಯ ಅರಣ್ಯ ಸೇವೆಯ (ಐಎಫ್‌ಎಸ್) ಪರೀಕ್ಷೆಯಲ್ಲಿ ಬೆಂಗಳೂರಿನ ತರುಣ್ ಎಸ್. 19ನೇ ರ‍್ಯಾಂಕ್ ಪಡೆದಿದ್ದಾರೆ.

ಮೂರನೇ ಯತ್ನದಲ್ಲಿ ಅವರು ಈ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಿದ್ದಾರೆ. ಬಿ.ಇ.(ಎಲೆಕ್ಟ್ರಿಕಲ್) ಪದವಿ ಪಡೆದಿರುವ ಅವರು, ಸರ್ಕಾರೇತರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

'ನನಗೆ ಅರಣ್ಯ ಮತ್ತು ಪ್ರಾಣಿಗಳ ಬಗ್ಗೆ ಅತೀವ ಆಸಕ್ತಿ ಮತ್ತು ಪ್ರೀತಿ. ಅರಣ್ಯ ಸೇವೆಯನ್ನು ಆಯ್ಕೆ ಮಾಡಿಕೊಳ್ಳಲು ಇದೇ ಪ್ರೇರಣೆ. ಈ ಗುರಿ ತಲುಪುವ ನಿಟ್ಟಿನಲ್ಲಿ ಕಾರ್ಯ ಯೋಜನೆ ರೂಪಿಸಿ ಪರೀಕ್ಷೆಗೆ ಸಿದ್ಧತೆಗಳನ್ನು ಮಾಡಿಕೊಂಡೆ' ಎಂದು ತರುಣ್ ವಿವರಿಸಿದ್ದಾರೆ.

'ಮುಖ್ಯ ಪರೀಕ್ಷೆಯಲ್ಲಿ ಅರಣ್ಯ ಮತ್ತು ಭೂವಿಜ್ಞಾನ ವಿಷಯಗಳನ್ನು ಆಯ್ಕೆ ಮಾಡಿಕೊಂಡಿದ್ದೆ. ಆನ್‌ಲೈನ್ ಮೂಲಕ ನೀಡಿದ ಉಪನ್ಯಾಸಗಳು ಪರೀಕ್ಷೆಗಳು ನೆರವಾದವು' ಎಂದು ಅವರು ವಿವರಿಸಿದರು.

ತಹಸೀನ್ ಬಾನುಗೆ 8ನೇ ರ‍್ಯಾಂಕ್



ಹುಬ್ಬಳ್ಳಿ: ಇಲ್ಲಿಯ ಮಂಟೂರ ರಸ್ತೆಯ ನಿವಾಸಿ, ತಹಸೀನ್ ಬಾನು ದಾವಡಿ ಭಾರತೀಯ ಅರಣ್ಯ ಸೇವೆಯ (ಐಎಫ್‌ಎಸ್) ಪರೀಕ್ಷೆಯಲ್ಲಿ ದೇಶಕ್ಕೆ ಎಂಟನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ. ಇದಕ್ಕೂ ಮುಂಚೆ ಅವರು ಇತ್ತೀಚೆಗೆ ನಡೆದ ಯುಪಿಎಸ್‌ಸಿ ಪರೀಕ್ಷೆಯಲ್ಲಿ 482ನೇ ರ‍್ಯಾಂಕ್ ಗಳಿಸಿದ್ದರು.

'ತಹಸೀನ್ ಪರೀಕ್ಷೆಯಲ್ಲಿ ರ‍್ಯಾಂಕ್ ಪಡೆದಿರುವುದು ಖುಷಿ ತಂದಿದೆ. ರಾಜ್ಯದ ಅರಣ್ಯ ಇಲಾಖೆಯಲ್ಲಿಯೇ ಅವರು ನಿಯೋಜನೆಯಾಗುವ ಸಾಧ್ಯತೆಯಿದೆ' ಎಂದು ತಹಸೀನ್ ಅವರ ಸಹೋದರ ಸಂಬಂಧಿ ಮಹ್ಮದ್ ಇಲಿಯಾಸ್ ಹೇಳಿದರು.

ತಹಸೀನ್ ಬಾನು ಅವರು ನೈರುತ್ಯ ರೈಲ್ವೆಯ ನಿವೃತ್ತ ಗಾರ್ಡ್ ಖಾದರ್ ಬಾಷಾ ಹಾಗೂ ಹಸೀನಾ ಬೇಗಂ ದಂಪತಿ ಪುತ್ರಿ. ಗದಗ ರಸ್ತೆಯಲ್ಲಿರುವ ನೈರುತ್ಯ ರೈಲ್ವೆ ಬಾಲಕಿಯರ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಕೇಶ್ವಾಪುರದ ಫಾತಿಮಾ ಪ್ರೌಢಶಾಲೆಯಲ್ಲಿ ಪ್ರೌಢಶಿಕ್ಷಣ, ವಿದ್ಯಾನಗರದ ವಿದ್ಯಾನಿಕೇತನ ಕಾಲೇಜಿನಲ್ಲಿ ಪಿಯುಸಿ ವಿಜ್ಞಾನ ಹಾಗೂ ಧಾರವಾಡ ಕೃಷಿ ವಿಶ್ವವಿ-ದ್ಯಾಲಯದಲ್ಲಿ ಬಿಎಸ್‌ಸಿ (ಕೃಷಿ) ಅಧ್ಯಯನ ಮಾಡಿದ್ದಾರೆ.

ಎಸ್.ನವೀನ ಕುಮಾರಗೆ 62ನೇ ರ‍್ಯಾಂಕ್



ಕಾರವಾರ: ಕೇಂದ್ರ ನಾಗರಿಕ ಸೇವಾ ಆಯೋಗವು (ಯು.ಪಿ.ಎಸ್.ಸಿ) ಹಮ್ಮಿಕೊಂಡಿದ್ದ ಭಾರತೀಯ ಅರಣ್ಯ ಸೇವೆಯ (ಐಎಫ್‌ಎಸ್) ಪರೀಕ್ಷೆಯಲ್ಲಿ, ಅಂಕೋಲಾ ತಾಲ್ಲೂಕಿನ ಅಚವೆಯ ಎಸ್.ನವೀನ ಕುಮಾರ ಹೆಗಡೆ 62ನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ.

'ಅರಣ್ಯದಿಂದ ಕೂಡಿರುವ ಉತ್ತರ ಕನ್ನಡದ ಪರಿಸರವು, ನಾನು ಅರಣ್ಯ ಸೇವೆಗೆ ಸೇರಬೇಕು ಎಂದು ಪ್ರೇರೇಪಿಸಿತು. ನನ್ನ ಎತ್ತರವು ಕಡಿಮೆಯಾಗಿದ್ದ ಕಾರಣದಿಂದ ಈ ಮೊದಲು ಪರೀಕ್ಷೆ ಬರೆಯಲು ಅರ್ಹತೆ ಇರಲಿಲ್ಲ. ಆದರೆ, ಯು.ಪಿ.ಎಸ್.ಸಿ ಈಚೆಗೆ ಈ ನಿಯಮದಿಂದ ವಿನಾಯಿತಿ ನೀಡಿದೆ. ಇದು ಅನುಕೂಲವಾಯಿತು' ಎಂದು 'ಪ್ರಜಾವಾಣಿ' ಜೊತೆ ಸಂತಸ ಹಂಚಿಕೊಂಡರು. ಅಚವೆ ಸಮೀಪದ ಮೋತಿಗುಡ್ಡ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹಳವಳ್ಳಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಕುಮಟಾದ ಮೂರೂರು ಪ್ರಗತಿ ವಿದ್ಯಾಮಂದಿರದಲ್ಲಿ ಪ್ರೌಢಶಾಲೆ, ಬಳಿಕ ಉಜಿರೆಯ ಎಸ್.ಡಿ.ಎಂ ಕಾಲೇಜಿನಲ್ಲಿ ಪಿ.ಯು ಅಧ್ಯಯನ ಮಾಡಿದ್ದರು. ನಂತರ, ಬೆಂಗಳೂರಿನ ಆರ್.ವಿ.ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಅಧ್ಯಯನ ಮಾಡಿದ್ದರು.

'ಯು.ಪಿ.ಎಸ್.ಸಿ ಪರೀಕ್ಷೆಗೆ 2017ರಲ್ಲಿ ದೆಹಲಿಯಲ್ಲಿ ತರಬೇತಿ ಪಡೆದಿದ್ದೆ. ಐದು ಬಾರಿ ನಾಗರಿಕ ಸೇವಾ ಪರೀಕ್ಷೆಗಳನ್ನು ಬರೆದಿದ್ದೇನೆ. ಮೊದಲ ಪ್ರಯತ್ನ-ದಲ್ಲಿ ಐ.ಎಫ್.ಎಸ್ ಉತ್ತೀರ್ಣನಾಗಿದ್ದೇನೆ' ಎಂದು ತಿಳಿಸಿದರು. ಅವರ ತಂದೆ ಸೀತಾರಾಮ ಹೆಗಡೆ ಟೇಲರಿಂಗ್ ಮತ್ತು ಕೃಷಿ ಮಾಡುತ್ತಿದ್ದು, ತಾಯಿ ಲಲಿತಾ ಹೆಗಡೆ ಗೃಹಿಣಿಯಾಗಿದ್ದಾರೆ.

ಎಸಿಬಿಯೇ ಕಲೆಕ್ಷನ್ ಸೆಂಟರ್

ಒಂದನೇ ಪುಟದಿಂದ..

ಇದು ಹಿರಿಯ ಅಧಿಕಾರಶಾಹಿಗಳ ಮಧ್ಯದ ಒಳ ಒಪ್ಪಂದದ ವ್ಯವಸ್ಥೆಯಂತೆ ಕಾಣುತ್ತದೆ' ಎಂದು ಕಿಡಿಕಾರಿದರು.

'ನಿವೃತ್ತ ಮುಖ್ಯ ಕಾರ್ಯದರ್ಶಿ ಅರವಿಂದ ಜಾಧವ್ ಪ್ರಕರಣ-ದಲ್ಲಿ ನೀವು ಏನೆಲ್ಲಾ ಮಾಡಿದಿರಿ ಎಂಬುದು ಗೊತ್ತಿದೆ. ಆ ಪ್ರಕರಣ-ದಲ್ಲಿ ನಿಮ್ಮ ತನಿಖಾಧಿಕಾರಿಗಳು ಎಡಿಜಿಪಿಯ ತಾಳಕ್ಕೆ ತಕ್ಕಂತೆ ಕುಣಿದಿ-ದ್ದರಲಿಲವೇ, ನಾನು ನಿಮ್ಮ ಎಡಿಜಿಪಿಯ ಸೇವಾ ದಾಖಲೆಯನ್ನು ಕೋರ್ಟ್‌ಗೆ ತರಿಸುತ್ತೇನೆ' ಎಂದು ಎಚ್ಚರಿಸಿದರು.

'2016ರಿಂದ ಇಲ್ಲೀ ತನಕ ಬಿ ರಿಪೋರ್ಟ್ ಹಾಕಿರುವ ಪ್ರಕರಣ-ಗಳೆಷ್ಟು ಎಂಬುದರ ವಸ್ತುಸ್ಥಿತಿಯ ವರದಿ ನೀಡಿ' ಎಂದು ಮನಮೋಹನ್ ಅವರಿಗೆ ನಿರ್ದೇಶಿಸಿದ ನ್ಯಾಯಮೂ-ರ್ತಿಗಳು ವಿಚಾರಣೆಯನ್ನು ಜುಲೈ 4ಕ್ಕೆ ಮುಂದೂಡಿದರು. ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯದಲ್ಲಿ ಅನುಕೂಲಕರ ಆದೇಶ ನೀಡಲು ಬೇಗೂರು ನಿವಾಸಿ ಅಜಂ ಪಾಷಾ ಎಂಬುವರಿಂದ ₹ 5 ಲಕ್ಷ ಲಂಚ ಪ್ರಕರಣದಲ್ಲಿ ಅರ್ಜಿದಾರ ಮಹೇಶ್ ಆರೋಪಿಯಾಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ದ್ರೌಪದಿ ಮುರ್ಮುಗೆ ಜೆಡಿಎಸ್ ಬೆಂಬಲ

ಬೆಂಗಳೂರು: 'ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ದ್ರೌಪದಿ ಮುರ್ಮು ಅವರನ್ನು ಜೆಡಿಎಸ್ ಬೆಂಬಲಿಸಲಿದೆ. ಪಕ್ಷದ ಶಾಸಕರು ಎನ್‌ಡಿಎ ಅಭ್ಯರ್ಥಿಗೆ ಮತ ನೀಡಲಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

'ದ್ರೌಪದಿ ಮುರ್ಮು ನಮ್ಮ ಬೆಂಬಲ ಕೋರಿದ್ದಾರೆ. ನಾವು ಬೆಂಬಲಿಸುತ್ತೇವೆ. ತಳ ಸಮುದಾಯದಲ್ಲಿ ಹುಟ್ಟಿ, ಕಷ್ಟ, ಸವಾಲು ಎದುರಿಸಿ ರಾಷ್ಟ್ರಪತಿ ಸ್ಥಾನದ ಎತ್ತರಕ್ಕೆ ಬೆಳೆದಿರುವುದು ನಮ್ಮೆಲ್ಲರಿಗೂ ಮಾದರಿ' ಎಂದರು. 'ಜೆಡಿಎಸ್ ಪಕ್ಷವು ಎನ್‌ಡಿಎ ಅಭ್ಯರ್ಥಿಯನ್ನು ಬೆಂಬಲಿಸು-ವುದರಿಂದ ನಮ್ಮ ಪಕ್ಷವನ್ನು ಬಿಜೆಪಿಯ 'ಬಿ ಟೀಂ' ಎಂದು ಕರೆಯಬಹುದು. ರಾಷ್ಟ್ರಪತಿ ಚುನಾವಣೆಗೂ ಅಂತಹ ಆರೋಪ ಸಲ್ಲದು' ಎಂದು ಹೇಳಿದರು.

ಅತ್ಯಾಚಾರಕ್ಕೆ ಯತ್ನ ಕಾನ್‌ಸ್ಟೆಬಲ್ ಸೆರೆ

ತಿಪಟೂರು (ತುಮಕೂರು): ಮಹಿಳೆಯೊಬ್ಬರ ಅತ್ಯಾಚಾರಕ್ಕೆ ಯತ್ನಿಸಿ, ಕೊಲೆ ಬೆದರಿಕೆ ಒಡ್ಡಿದ ಆರೋಪದ ಮೇಲೆ ತಾಲ್ಲೂಕಿನ ಕಿಬ್ಬನಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಕಾನ್‌ಸ್ಟೆಬಲ್ ಎಚ್.ಎನ್.ಮಂಜುನಾಥ್ ಎಂಬುವರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಕೆ.ಬಿ.ಕ್ರಾಸ್‌ನ ಇಂಪೀರಿಯಲ್ ಮಿಲ್ಟ್ರಿ ಹೋಟೆಲ್‌ನಲ್ಲಿ ಮಂಗಳವಾರ ಮಂಜುನಾಥ್ ತಮ್ಮ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾರೆ ಎಂದು ನೊಂದ ಮಹಿಳೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಅದಕ್ಕೆ ಪುರಾವೆಯಾಗಿ ಸಿ.ಸಿ ಟಿ.ವಿ ದೃಶ್ಯಾವಳಿ-ಗಳನ್ನು ದೂರಿನ ಜೊತೆಗೆ ಸಲ್ಲಿಸಿದ್ದರು. ಇದನ್ನು ಆಧರಿಸಿ ಬಂಧಿಸಲಾಗಿದೆ.

ಅಗ್ನಿಶಾಮಕ ಇಲಾಖೆ: 2 ಸಾವಿರ ಹುದ್ದೆ ಭರ್ತಿಗೆ ಕ್ರಮ

ಬೆಂಗಳೂರು: 'ರಾಜ್ಯದಲ್ಲಿ ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆಯ ವಿವಿಧ ಹುದ್ದೆಗಳಿಗೆ ಎರಡು ಸಾವಿರ ಮಂದಿಯನ್ನು ನೇಮಕ ಮಾಡಿಕೊ-ಳ್ಳಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಬೆಂಗಳೂರು ಮೆಟ್ರೊ ರೈಲು ನಿಗಮ ನಿರ್ಮಿಸಲಿರುವ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಬಹೂಪಯೋಗಿ ಸಭಾಂಗಣ ಕಟ್ಟಡ ನಿರ್ಮಾಣದ ಶಂಕುಸ್ಥಾಪನೆ ಹಾಗೂ ಜಯನಗರದ ಅಗ್ನಿಶಾಮಕ ಠಾಣೆಯ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಇಲಾಖೆಗೆ ಅತ್ಯಾಧುನಿಕ ಸೌಲಭ್ಯ ಕಲ್ಪಿಸಲು ಸರ್ಕಾರ ವಿಶೇಷ ಆದ್ಯತೆ ನೀಡುತ್ತಿದೆ. ಹೆಚ್ಚಿನ ಅನುದಾನ ಸಹ ಕಲ್ಪಿಸಲಾಗುವುದು. ಜನರ ಪ್ರಾಣ ಹಾಗೂ ಆಸ್ತಿಯ ರಕ್ಷಣೆಗೆ ಸರ್ಕಾರವು ಮೊದಲ ಆದ್ಯತೆ ನೀಡುತ್ತಿದೆ' ಎಂದು ಹೇಳಿದರು.

ವಿಧಾನ ಪರಿಷತ್ ಜೆಡಿಎಸ್ ಸದಸ್ಯ ಟಿ.ಎ.ಶರವಣ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಯ ಮಹಾ ನಿರ್ದೇಶಕ ಅಮರ್‌ಕುಮಾರ್ ಪಾಂಡೆ ಹಾಜರಿದ್ದರು.

ಅಮರನಾಥ ಯಾತ್ರೆಗೆ ಚಾಲನೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಅಮರನಾಥ ಯಾತ್ರೆಗೆ ಬುಧವಾರ ಚಾಲನೆ ನೀಡಿದರು.

43 ದಿನಗಳ ಈ ಯಾತ್ರೆಯು ಇದೇ 30ರಂದು ಆರಂಭವಾಗಲಿದೆ. ಮೊದಲ ಹಂತದಲ್ಲಿ ಭಗವತಿನಗರ ಶಿಬಿರದ 4,890 ಮಂದಿ ಭಕ್ತರು ಯಾತ್ರೆಗೆ ತೆರಳಲಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಾವು ಕಲಿತ ವಿದ್ಯೆಯನ್ನು ಧಾರಾಳವಾಗಿ ಹತ್ತು ಜನರಿಗೆ ಹೇಳಿಕೊಡಬೇಕು. ಕಲಿತದ್ದು ಮುಗಿಯಿತು ಎಂಬ ಅಹಂಭಾವ ಬಿಟ್ಟು ಸದಾ ಕಲಿಯುತ್ತಿರಬೇಕು.

– ಅ.ನ.ಕೃ.

ತೀಸ್ತಾ ಸೆಟಲ್‌ವಾಡ್ ಬಂಧನ ಪ್ರತೀಕಾರದ ಕ್ರಮ

ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಮತ್ತು ಗುಜರಾತ್‌ನ ಪೊಲೀಸ್ ಮಹಾನಿರ್ದೇಶಕರಾಗಿದ್ದ ಆರ್.ಬಿ. ಶ್ರೀಕುಮಾರ್ ಅವರ ವಿರುದ್ಧ ಗುಜರಾತ್ ಪೊಲೀಸರು ದಾಖಲು ಮಾಡಿರುವ ಪ್ರಕರಣಗಳು, ಈ ಇಬ್ಬರ ವಿರುದ್ಧ ರಾಜ್ಯ ಸರ್ಕಾರ ಹಾಗೂ ಪೊಲೀಸರು ತೆಗೆದುಕೊಂಡ ಪ್ರತೀಕಾರದ ಕ್ರಮಗಳಂತೆ ಕಾಣಿಸುತ್ತಿವೆ. 2002ರಲ್ಲಿ ನಡೆದ ಕೋಮು ಗಲಭೆಗಳನ್ನು ಗುಜರಾತ್ ರಾಜ್ಯದ ಆಡಳಿತ ವ್ಯವಸ್ಥೆ ಹಾಗೂ ಅಲ್ಲಿನ ಪೊಲೀಸರು ನಿಭಾಯಿಸಿದ ಬಗೆಯನ್ನು ಇವರಿಬ್ಬರೂ ಪ್ರಶ್ನಿಸಿದ್ದರು. ಅಲ್ಲದೆ, ಸರ್ಕಾರ ಮತ್ತು ಪೊಲೀಸರ ವಿರುದ್ಧ ಕಾನೂನು ಸಮರ ಸಾರಿದ್ದರು ಕೂಡ. ಕೋಮು ಗಲಭೆಗಳಿಗೆ ಸಂಬಂಧಿಸಿದ ಕೆಲವು ಪ್ರಕರಣಗಳ ತನಿಖೆ ನಡೆಸಿದ ವಿಶೇಷ ತನಿಖಾ ತಂಡವು (ಎಸ್‌ಐಟಿ) ರಾಜ್ಯದ ಆಡಳಿತ ವ್ಯವಸ್ಥೆಗೆ ಹಾಗೂ ಪೊಲೀಸರಿಗೆ ನೀಡಿದ್ದ ಕ್ಲೀನ್ ಚಿಟ್ ಅನ್ನು ಪ್ರಶ್ನಿಸಿ ಜಾಕಿಯಾ ಜಾಫ್ರಿ ಅರ್ಜಿ ಸಲ್ಲಿಸುವಲ್ಲಿ ತೀಸ್ತಾ ಅವರ ಪಾತ್ರವೂ ಇತ್ತು. ಜಾಕಿಯಾ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಈಚೆಗೆ ವಜಾಗೊಳಿಸಿದೆ. ಕೋಮುಗಲಭೆಗಳಲ್ಲಿ ಸಂತ್ರಸ್ತರಾದ ಹಲವರಿಗೆ ನ್ಯಾಯಾಲಯದ ಕದ ತಟ್ಟಲು ತೀಸ್ತಾ ಅವರು ಸಹಾಯ ಮಾಡಿದ್ದರು. ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ಈ ಕೋಮುಗಲಭೆಗಳು ನಡೆದಿವೆ. ಗಲಭೆಗಳಲ್ಲಿ ಮೋದಿ ಅವರ ಮತ್ತು ಇತರ ಕೆಲವರ ಪಾತ್ರವೂ ಇತ್ತು ಎಂಬ ಅರ್ಥ ಬರುವಂತೆ ಶ್ರೀಕುಮಾರ್ ಅವರು ಕೆಲವು ಹೇಳಿಕೆಗಳನ್ನು ನೀಡಿದ್ದರು. ಶ್ರೀಕುಮಾರ್ ಮತ್ತು ತೀಸ್ತಾ ವಿರುದ್ಧ ದಾಖಲು ಮಾಡಲಾಗಿರುವ ಎಫ್‌ಐಆರ್‌ನಲ್ಲಿ (ಪ್ರಥಮ ಮಾಹಿತಿ ವರದಿ) ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಅವರ ಹೆಸರೂ ಇದೆ. ಭಟ್ ಅವರು ಇನ್ನೊಂದು ಪ್ರಕರಣದಲ್ಲಿ ಈಗಾಗಲೇ ಜೈಲಿನಲ್ಲಿದ್ದಾರೆ.



ನ್ಯಾಯವನ್ನು ಕೋರಿ ನ್ಯಾಯಾಲಯದ ಮೆಟ್ಟಿಲು ಹತ್ತುವವರನ್ನು ಪೀಡಿಸುವ, ಶಿಕ್ಷಿಸುವ ಕೆಲಸ ಆಗಬಾರದು

‘ವಿಚಾರ ತಣ್ಣಗಾಗಲು ಬಿಡಬಾರದು ಎಂಬ ಉದ್ದೇಶದಿಂದ ರಾಜ್ಯದ ಅತೃಪ್ತ ಅಧಿಕಾರಿಗಳು, ಬಹಿರಂಗವಾಗಿ ಹೇಳಲು ಆಗದಂತಹ ಉದ್ದೇಶಕ್ಕಾಗಿ... ಪ್ರಕ್ರಿಯೆಗಳನ್ನು ಹೀಗೆ ದುರ್ಬಳಕೆ ಮಾಡಿಕೊಳ್ಳುವವರು ಕಾನೂನು ಕ್ರಮ ಎದುರಿಸಬೇಕು, ಅವರ ವಿರುದ್ಧ ಕಾನೂನಿಗೆ ಅನುಗುಣವಾಗಿ ಕ್ರಮ ಜರುಗಿಸಬೇಕು’ ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದ ನಂತರದಲ್ಲಿ ಈ ಇಬ್ಬರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ. ನ್ಯಾಯಾಲಯ ಆಡಿದ ಮಾತುಗಳನ್ನು ಗಮನಿಸಿ ಪೊಲೀಸರು ಪ್ರಕರಣಗಳನ್ನು ದಾಖಲು ಮಾಡಿಕೊಂಡಿದ್ದಾರೆ. ಆದರೆ, ಗಲಭೆಗಳಲ್ಲಿ ಸಂತ್ರಸ್ತರಾದ ಹಲವರ ಜೊತೆ ನಿಂತುಕೊಂಡ, ನ್ಯಾಯ ಕೋರಿ ನ್ಯಾಯಾಲಯದ ಮೆಟ್ಟಿಲು ಏರಿದ ಹಲವರ ಜೊತೆಗೂ ಇದ್ದ ವ್ಯಕ್ತಿಗಳ ವಿರುದ್ಧ ಪೊಲೀಸರು ನ್ಯಾಯಾಲಯ ಆಡಿರುವ ಮಾತುಗಳ ಆಧಾರದಲ್ಲಿ ಕ್ರಮಕ್ಕೆ ಮುಂದಾದಂತಹ ಸನ್ನಿವೇಶ ನಿರ್ಮಾಣವಾಗಿರುವುದು ವಿಷಾದಕರ. ಇನ್ನೊಂದು ಪ್ರಕರಣದಲ್ಲಿ ತೀಸ್ತಾ ವಿರುದ್ಧ ಮಾಡಿದ್ದ ಆರೋಪಗಳನ್ನು ನ್ಯಾಯಾಲಯವು ಬೇರೆ ಒಂದು ಸಂದರ್ಭದಲ್ಲಿ ‘ಸುಳ್ಳು’ ಎಂದು ಕರೆದಿತ್ತು ಎನ್ನುವುದನ್ನು ನೆನಪಿಸಿಕೊಳ್ಳಬೇಕು. ಈಗ ಆರೋಪಿಗಳ ವಿರುದ್ಧ ‘ಕ್ರಿಮಿನಲ್ ಪಿತೂರಿ, ನಕಲಿ ದಾಖಲೆ ಸೃಷ್ಟಿ, ಅಮಾಯಕರನ್ನು ಸಿಲುಕಿಸಲು ನ್ಯಾಯಾಲಯದಲ್ಲಿ ತಪ್ಪು ಸಾಕ್ಷ್ಯಗಳನ್ನು ಸಲ್ಲಿಸಿದ’ ಆರೋಪ ಹೊರಿಸಲಾಗಿದೆ. ಮೂವರ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸಲು ಪೊಲೀಸರು ವಿಶೇಷ ತನಿಖಾ ತಂಡವೊಂದನ್ನು ರಚಿಸಿದ್ದಾರೆ. ಇದು ಸುಪ್ರೀಂ ಕೋರ್ಟ್‌ನ ಸೂಚನೆಯ ಅನುಸಾರ ಎಂದು ಅವರು ಹೇಳಿದ್ದಾರೆ. ‘ತೆರೆಯ ಹಿಂದಿನ ಪಿತೂರಿ, ಹಣಕಾಸು ಮತ್ತು ಇತರ ಲಾಭಗಳು, ಇತರರ ಜೊತೆ ಷಾಮೀಲಾಗಿ ಗಂಭೀರ ಅಪರಾಧ ಎಸಗಲು ಆಮಿಷ ಒಡ್ಡಿದ್ದು’ ಮುಂತಾದವುಗಳನ್ನು ಪತ್ತೆ ಮಾಡುವ ಉದ್ದೇಶ ಪೊಲೀಸರಿಗೆ ಇದೆ.

ಸರ್ಕಾರ ಹಾಗೂ ಅದರ ನಾಯಕರನ್ನು ಟೀಕಿಸುವವರು, ಅವರಲ್ಲಿ ತಪ್ಪು ಹುಡುಕುವವರು ಮುಂದೊಂದು ದಿನ ಒಂದಲ್ಲ ಒಂದು ರೀತಿಯಲ್ಲಿ ಕ್ರಮ ಎದುರಿಸಬೇಕಾಗುತ್ತದೆ ಎನ್ನುವ ಸಂದೇಶವನ್ನು ಈ ಮೂವರ ವಿರುದ್ಧ ತೆಗೆದುಕೊಂಡಿರುವ ಕ್ರಮವು ನೀಡುತ್ತಿದೆ. ಹಿಂದೆ ನಡೆದ ಹಲವು ಬಂಧನಗಳು ಕೂಡ ಇದೇ ಸಂದೇಶವನ್ನು ರವಾನಿಸಿವೆ ಎಂಬುದು ನಿಜ. ಸುಪ್ರೀಂ ಕೋರ್ಟ್ ಆಡಿರುವ ಮಾತುಗಳು ಪ್ರಾಸಂಗಿಕ ಮಾತ್ರ. ತೀಸ್ತಾ ಮತ್ತು ಶ್ರೀಕುಮಾರ್ ಬಂಧನವನ್ನು ಹಲವರು ಖಂಡಿಸಿದ್ದಾರೆ. ಅವರನ್ನು ಬಿಡುಗಡೆ ಮಾಡಬೇಕು ಎಂದು ಹಲವು ಸಂಘಟನೆಗಳು ಹಾಗೂ ವ್ಯಕ್ತಿಗಳು ಆಗ್ರಹಿಸಿದ್ದಾರೆ. ನ್ಯಾಯವನ್ನು ಕೋರಿ ನ್ಯಾಯಾಲಯದ ಮೆಟ್ಟಿಲು ಹತ್ತುವವರನ್ನು ಪೀಡಿಸುವ, ಶಿಕ್ಷಿಸುವ ಕೆಲಸ ಆಗಬಾರದು.

ದಿನದ ಟ್ವೀಟ್

ಒಂದಾಗಿ ನಿಲ್ಲೋಣ



ಕನ್ಹಯ್ಯ ಲಾಲ್ ಅವರ ಭೀಕರ ಹತ್ಯೆಯ ಬಗ್ಗೆ ಹೆಚ್ಚಿನ ವಿವರಗಳು ಹೊರಬೀಳುತ್ತಿದ್ದಂತೆಯೇ ಅವು ಹೆಚ್ಚು ಆಕ್ರೋಶಕ್ಕೆ ಕಾರಣವಾಗುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಟ್ಟಿಗೇ ಕಾರ್ಯನಿರತವಾಗುವ ಮೂಲಕ ತಪ್ಪಿತಸ್ಥರಿಗೆ ತ್ವರಿತವಾಗಿ ಶಿಕ್ಷೆಯಾಗುವಂತೆ ನೋಡಿಕೊಳ್ಳುತ್ತವೆ ಎಂದು ಭರವಸೆ ಇಡೋಣ. ಈ ವಿಷಯದಲ್ಲಿ ನಮ್ಮನ್ನು ವಿಭಜಿಸಲು ಸಾಧ್ಯವಿಲ್ಲ. ಪ್ರಬಲ ಸಂದೇಶ ರವಾನಿಸುವ ಸಲುವಾಗಿ ದೇಶವು ಒಂದಾಗಿ ನಿಲ್ಲುವ ಅಗತ್ಯವಿದೆ.

ಪ್ರಿಯಾಂಕಾ ಚತುರ್ವೇದಿ, ರಾಜ್ಯಸಭಾ ಸದಸ್ಯೆ, ಶಿವಸೇನಾ ನಾಯಕಿ

ಕಿಡಿನುಡಿ



ಸೂರತ್ ಮತ್ತು ಗುವಾಹಟಿ ಬಳಿಕ ಇದೀಗ ಶಿವಸೇನಾ ಬಂಡುಕೋರರು ಗೋವಾದತ್ತ ಮುಖ ಮಾಡಿದ್ದಾರೆ. ಡೋನಾಪಾಲಾದ ತಾಜ್ ಕನ್ವೆನ್‌ಷನ್ ಸೆಂಟರ್‌ನಲ್ಲಿ 70 ಕೊಠಡಿಗಳನ್ನು ಕಾಯ್ದಿರಿಸಲಾಗಿದೆ. ‘ಬಂಡುಕೋರ’ರಾಗಿ ಭಾರತ ದರ್ಶನ ಮಾಡಿ. ಗುಜರಾತ್, ಅಸ್ಸಾಂ ಮತ್ತು ಗೋವಾಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಅಂಶ ಯಾವುದು? ಎಲ್ಲವೂ ಬಿಜೆಪಿ ಆಡಳಿತವಿರುವ ರಾಜ್ಯಗಳು! ಪ್ರಶ್ನೆ: ಬಿಲ್‌ಗಳನ್ನು ಪಾವತಿಸುವವರು ಯಾರು?

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ
ಸೋಮವಾರ, 30-6-1997

- **ಖಾಸಗಿ ಶಾಲೆಗಳಲ್ಲಿ ಶಿಕ್ಷಕರ ತಪ್ಪದ ಶೋಷಣೆ**

ಬೆಂಗಳೂರು, ಜೂನ್ 29 - ‘ಎಂಟು ನೂರು ರೂ. ಕೊಟ್ಟು ರಿಜಿಸ್ಟರ್‌ನಲ್ಲಿ ಮಾತ್ರ ಎರಡು ಸಾವಿರಕ್ಕೆ ಸಹಿ ಮಾಡಿಸಿಕೊಳ್ಳುತ್ತಾರೆ. ಐದು ನಿಮಿಷ ತಡವಾದರೆ ಅರ್ಧ ದಿನದ ಸಂಬಳ ಹಿಡೀತಾರೆ’ ಎಂದು ಪದವೀಧರೆ ಊರ್ಮಿಳಾ (ನಿಜವಾದ ಹೆಸರಲ್ಲ) ಹೇಳುವಾಗ ಆಕೆಯ ಕಣ್ಣಂಚಿನಲ್ಲಿ ನೀರಾಡಿತ್ತು.

ನಗರದ ಖಾಸಗಿ ಶಾಲೆಯೊಂದರಲ್ಲಿ ಕಳೆದ ಮೂರು ವರ್ಷಗಳಿಂದ ಕೆಲಸ ಮಾಡುತ್ತಿರುವ ಊರ್ಮಿಳಾ ಶಿಕ್ಷಕಿಯಾಗಿ ಆಡಳಿತ ವರ್ಗದಿಂದ ಶೋಷಣೆಗೆ ಒಳಗಾಗಿ ಕೈಗೆಟುಕದ ಸಂಪಾದನೆಯಿಂದ ವಂಚಿತಳಾಗಿ ನೊಂದು ಹೇಳಿದ ಮಾತಿದು.

ಕಾಲೇಜುಗಳಲ್ಲಿ ಶಿಕ್ಷಕರ ಸ್ಥಿತಿ ಶೋಚನೀಯ ಎಂದು ಖಾಸಗಿ ಪ್ರೌಢಶಾಲಾ ಶಿಕ್ಷಕರ ಸಂಘಟನೆಗಳೂ ಪ್ರತಿಭಟಿಸುತ್ತಲೇ ಬಂದಿವೆ.

ರಾಜ್ಯದಲ್ಲಿರುವ ಖಾಸಗಿ ಶಾಲೆಗಳಲ್ಲಿ ಅದರಲ್ಲೂ ಇತ್ತೀಚಿನ ವರ್ಷಗಳಲ್ಲಿ ಪ್ರಾಥಮಿಕ ಪೂರ್ವ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಇಂಥ ನೂರಾರು ಪ್ರಕರಣಗಳು ಸಿಗುತ್ತವೆ.

ಶಿಕ್ಷಕರಲ್ಲಿ ಸಂಘಟನೆಯ ಕೊರತೆ ಇರುವುದರಿಂದ ಶಿಕ್ಷಣ ಸಂಸ್ಥೆಗಳು ದಿನಗೂಲಿ ಆಳುಗಳಿಗಿಂತ ಕಡೆಯಾಗಿ 300ರಿಂದ 1,000 ರೂಪಾಯಿಗಳ ಅಂತರದಲ್ಲಿ ವೇತನ ನೀಡಿ ಬೆಳಗಿನಿಂದ ಸಂಜೆಯವರೆಗೆ ದುಡಿಸಿ ಕೊಳ್ಳುವುದು ನಡೆದಿದೆ ಎಂಬುದು ಸಾಮಾನ್ಯ ದೂರು.

50 ವರ್ಷಗಳ ಹಿಂದೆ
ಶುಕ್ರವಾರ, 30-6-1972

- **ಭೋಜನಕೂಟದಲ್ಲಿ ಇಂದಿರಾ – ಭುಟ್ಟೊ ವಿಚಾರ ವಿನಿಮಯ**

ಸಿಮ್ಲಾ, ಜೂನ್ 29 – ಉಪಖಂಡದಲ್ಲಿ ದೃಢ ಶಾಂತಿ ಸ್ಥಾಪನೆ ಕುರಿತು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಮತ್ತು ಪಾಕಿಸ್ತಾನದ ಅಧ್ಯಕ್ಷ ಭುಟ್ಟೊ ಅವರು ಇಂದು ರಾತ್ರಿ ಭೋಜನ ಸಮಯದಲ್ಲಿ ವಿಚಾರ ವಿನಿಮಯ ನಡೆಸಿದರು.

ಈ ಭೋಜನಕೂಟದಲ್ಲಿ ಹಿರಿಯ ರಾಜಕೀಯ ಮತ್ತು ಅಧಿಕೃತ ಸಲಹೆಗಾರರು ಹಾಜರಿದ್ದರು.

- **ಹರಿಜನರ ಶೋಷಣೆ ತಪ್ಪಿಲ್ಲ, ನಿಮ್ಮ ವರ್ಗದ ಉದ್ಧಾರಕ್ಕೆ ಮಾಡಿದ ವೆಚ್ಚ ವ್ಯರ್ಥ: ಸದಸ್ಯರ ಟೀಕೆ**

ಬೆಂಗಳೂರು, ಜೂನ್ 29 – ಸ್ವಾತಂತ್ರ್ಯದ ಕಾಲು ಶತಮಾನ ಕಳೆದರೂ ಹರಿಜನರ ಶೋಷಣೆ ತಪ್ಪಿಲ್ಲವೆಂದೂ, ಅಸ್ಪೃಶ್ಯತೆ ತಾಂಡವವಾಡುತ್ತಿದ್ದು ನಿಮ್ಮ ವರ್ಗದವರ ಉದ್ಧಾರಕ್ಕೆ ಕೋಟಿಗಟ್ಟಲೆ ಹಣ ವೆಚ್ಚ ಮಾಡಿದ್ದು ವ್ಯರ್ಥವಾಗಿದೆಯೆಂದೂ ಇಂದು ವಿಧಾನಸಭೆಯಲ್ಲಿ ಸದಸ್ಯರು ಟೀಕಿಸಿದರು.

ಸಮಾಜಕಲ್ಯಾಣ ಸಚಿವ ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ ಅವರು ಗ್ರಾಮಾಂತರ ಅಭಿವೃದ್ಧಿ, ಸಮುದಾಯ ಅಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮತ್ತಿತರ ಬಾಬುಗಳಿಗೆ ಸಂಬಂಧಿಸಿದ 20 ಕೋಟಿ 62 ಲಕ್ಷ ರೂ.ಗಳ ಬೇಡಿಕೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಸದಸ್ಯರು, ಪಂಚಾಯಿತಿ ಹಾಗೂ ತಾಲ್ಲೂಕು ಮಂಡಳಿಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕೆಂದು ಒತ್ತಾಯಿಸಿದರು.

ಏಕಬಳಕೆ ಪ್ಲಾಸ್ಟಿಕ್ ನಿಷೇಧವು ಈ ಸರ್ವಾಂತರ್ಯಾಮಿಯ ಅಂತ್ಯಕ್ಕೆ ನಾಂದಿಯಾದೀತೆ?

ತ್ಯಾಜ್ಯರಕ್ಕಸನ ಕುಣಿತಕ್ಕೆ ಕಡಿವಾಣ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ತರಕಾರಿ ಕೊಳ್ಳಲು ಮಾರುಕಟ್ಟೆಗೆ ಹೋಗುವುದು, ಖರೀದಿಸಿದ ತರಕಾರಿಯನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಕೊಂಡು ಮನೆಗೆ ಬರುವುದು, ಆ ಚೀಲವನ್ನು ಮನೆಯ ಕಾಂಪೌಂಡಿನಿಂದ ಆಚೆ ಎಸೆಯುವುದು... ಹೀಗೆ, ಮಳೆಗಾಲದಲ್ಲಿ ಚರಂಡಿಯಲ್ಲಿ ಸಿಕ್ಕಿಕೊಂಡ ಪ್ಲಾಸ್ಟಿಕ್ ತ್ಯಾಜ್ಯವು ನೀರಿನ ಸರಾಗ ಹರಿವಿಗೆ ಅಡ್ಡಿಪಡಿಸುತ್ತದೆ. ನೀರು ಮನೆಯೊಳಗೆ ನುಗ್ಗುತ್ತದೆ. ಆಗ ಸರ್ಕಾರಕ್ಕೆ ಹಿಡಿಶಾಪ ಹಾಕಿ ತಮ್ಮ ಸಾಮಾಜಿಕ ಜವಾಬ್ದಾರಿ ಮರೆದರಾಯಿತು. ಇದು, ಹಲವಾರು ವರ್ಷಗಳಿಂದ ನಡೆದುಬಂದ ಪರಿಪಾಟ. ಪ್ಲಾಸ್ಟಿಕ್ ಎಂಬ ಸರ್ವಾಂತರ್ಯಾಮಿ ತ್ಯಾಜ್ಯರಕ್ಕಸನ ಭೂತ ಕುಣಿತಕ್ಕೆ ಪ್ರೋತ್ಸಾಹ ನೀಡುವಲ್ಲಿ ಪ್ರತಿಯೊಬ್ಬ ನಾಗರಿಕನ ಪಾಲೂ ಇದೆ.

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಿಂದ ಎಂಟು ಕಿ.ಮೀ. ದೂರದಲ್ಲಿ ವರದಾಶ್ರಮ ಎಂಬ ಧಾರ್ಮಿಕ ಕೇಂದ್ರವಿದೆ. ಅಲ್ಲಿಗೆ ಬರುವ ಭಕ್ತಾದಿಗಳಿಗೆ ಹಣ್ಣು- ಕಾಯಿಯಂತಹ ಪದಾರ್ಥಗಳನ್ನು ನೀಡಲು ಪ್ಲಾಸ್ಟಿಕ್ ಚೀಲಗಳನ್ನು ಬಳಸುತ್ತಿದ್ದರು. 2009ರಲ್ಲಿ ಪರಿಸರಾಸಕ್ತ ಸಂಸ್ಥೆಯೊಂದು ಪ್ಲಾಸ್ಟಿಕ್ ಬದಲಿಗೆ ಬಟ್ಟೆ ಚೀಲ ಬಳಸುವಂತೆ ಸಲಹೆ ನೀಡಿತು. ಸುಲಭದ ಪ್ಲಾಸ್ಟಿಕ್ ಚೀಲದ ಬಳಕೆಗೆ ಒಗ್ಗಿಹೋದ ಮನಃಸ್ಥಿತಿಯನ್ನು ಬದಲಿಸುವುದು ಅಷ್ಟು ಸುಲಭವಾಗಿರಲಿಲ್ಲ. ಅಲ್ಲಿನ ಆಡಳಿತ ಮಂಡಳಿ ಮೇಲಿಂದ ಮೇಲೆ ಸಭೆಗಳನ್ನು ನಡೆಸಿತು. ಅಂತೂ 2009ರ ಜೂನ್ ತಿಂಗಳಲ್ಲಿ ಪ್ಲಾಸ್ಟಿಕ್ ಚೀಲ ತ್ಯಜಿಸುವ ನಿರ್ಧಾರ ಕೈಗೊಂಡಿತು. ಅಲ್ಲಿ ಪ್ರತಿದಿನ ಸರಾಸರಿ ಇನ್ನೂರು ಪ್ಲಾಸ್ಟಿಕ್ ಚೀಲಗಳು ಬಳಕೆಯಾಗುತ್ತಿದ್ದವು. ಈ ಹನ್ನೆರಡು ವರ್ಷಗಳಲ್ಲಿ ಹತ್ತಿರ ಹತ್ತಿರ 9 ಲಕ್ಷ ಪ್ಲಾಸ್ಟಿಕ್ ಚೀಲಗಳು ಭೂಮಿಗೆ ಸೇರಿ ಮಲಿನವಾಗಿಸುವುದು ತಪ್ಪಿತು. ಶ್ರೀಧರ ಸ್ವಾಮಿಗಳ ಚಿತ್ರವಿರುವ ಬಟ್ಟೆ ಕೈಚೀಲಗಳು ಧಾರ್ಮಿಕ ಶ್ರದ್ಧೆಯ ಕಾರಣಕ್ಕೆ ಮರುಬಳಕೆಯೂ ಆಗುತ್ತವೆ ಹಾಗೂ ಇದೇ ಕಾರಣಕ್ಕೆ, ಎಲ್ಲೆಂದರಲ್ಲಿ ಬಿಸಾಡುವುದು ಸಹ ತಪ್ಪುತ್ತದೆ.

ನಗರ ಪ್ರದೇಶದಲ್ಲಿ ವಾಸಿಸುವ ಜಾನುವಾರುಗಳ ಹೊಟ್ಟೆಯಲ್ಲಿ ತಲಾ 20-30 ಕೆ.ಜಿ. ಪ್ಲಾಸ್ಟಿಕ್ ತ್ಯಾಜ್ಯ ಸಿಕ್ಕಿರುವ ಅನೇಕ ಉದಾಹರಣೆಗಳಿವೆ. ಸತ್ತ ಜಾನುವಾರಿನ ಮರಣೋತ್ತರ ಪರೀಕ್ಷೆಯಲ್ಲಿ ಈ ಆಘಾತಕಾರಿ ಅಂಶ ಬೆಳಕಿಗೆ ಬಂದಿದೆ. ಆದರೆ, ಕಾಡಾನೆಗಳ ಹೊಟ್ಟೆಯೂ ಪ್ಲಾಸ್ಟಿಕ್ ಚೀಲಗಳ ಗುಡಾಣವಾಗಿದೆ ಎಂಬ ಮತ್ತೂ ಆಘಾತಕಾರಿ ಅಂಶವುಳ್ಳ ವರದಿಯನ್ನು ‘ದಿ ನ್ಯೂಯಾರ್ಕ್ ಟೈಮ್ಸ್’ ಮೇ ತಿಂಗಳಲ್ಲಿ ಪ್ರಕಟಿಸಿದೆ. ಅದರಲ್ಲೂ ಭಾರತದ ಆನೆಗಳು, ಕಾಡಂಚಿಗೆ ತಂದು ಸುರಿಯುವ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಭಕ್ಷಿಸಿ ನಂತರದಲ್ಲಿ ಅಭಯಾರಣ್ಯದ ಒಳಭಾಗಕ್ಕೆ ತೆರಳುತ್ತವೆ. ಅಭಯಾರಣ್ಯದ ಹತ್ತಾರು ಕಿ.ಮೀ. ಒಳಭಾಗದಲ್ಲಿ ಕಂಡ ಆನೆಗಳ ಲದ್ದಿಯಲ್ಲಿ ಪ್ಲಾಸ್ಟಿಕ್ ಚೀಲಗಳು ಪತ್ತೆಯಾಗಿದ್ದನ್ನು ಸಂಶೋಧಕರು ವರದಿ ಮಾಡಿದ್ದಾರೆ. ಇದು ಆನೆಗಳ ಜೀರ್ಣಾಂಗ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದರ ಜೊತೆಗೆ ಪ್ಲಾಸ್ಟಿಕ್‌ನಲ್ಲಿರುವ ರಾಸಾಯನಿಕಗಳು ಅವುಗಳ ವಂಶವಾಹಿಯ ಮೇಲೂ ಗಂಭೀರ ಪರಿಣಾಮಗಳನ್ನು ಬೀರುತ್ತವೆ ಎನ್ನಲಾಗಿದೆ. ಲಾಭಕ್ಕಿಂತ ಹೆಚ್ಚು ನಷ್ಟವನ್ನೇ ಉಂಟು ಮಾಡುವ ಪ್ಲಾಸ್ಟಿಕ್ಕಿಗೆ ಪರ್ಯಾಯ ಹುಡುಕುವ ಕಾರ್ಯ ಇವತ್ತಿನ ತುರ್ತು.

ಪ್ರತಿಯೊಂದನ್ನೂ ಜಿಡಿಪಿಯ ಆಧಾರದ ಮೇಲೆ ಅಳೆಯುವ ನಾವು, ಹೆಚ್ಚು ಹೆಚ್ಚು ಪ್ಲಾಸ್ಟಿಕ್ ಬಳಸುವ ಅನಿವಾರ್ಯ ಸ್ಥಿತಿಗೆ ಬಂದಿದ್ದೇವೆ. ಅಮೆರಿಕದ ತಲಾವಾರು ಪ್ಲಾಸ್ಟಿಕ್ ಬಳಕೆ 35 ಕೆ.ಜಿ. ಇದ್ದರೆ, 2019ರ ಅಂಕಿಅಂಶದ ಪ್ರಕಾರ, ಭಾರತದ ತಲಾವಾರು ಪ್ಲಾಸ್ಟಿಕ್ ಬಳಕೆ 11 ಕೆ.ಜಿ ಇತ್ತು. 2022ರ ಅಂತ್ಯದ ವೇಳೆಗೆ ಈ ಪ್ರಮಾಣ 20 ಕೆ.ಜಿ.ಗೆ ಏರಿಕೆಯಾಗಲಿದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯ ಅಂದಾಜು ಮಾಡಿತ್ತು. ಅಲ್ಲಿಗೆ ಅಮೆರಿಕದವರಿಗಿಂತ ನಾವು ಕಡಿಮೆ ಪ್ಲಾಸ್ಟಿಕ್ ಬಳಸುತ್ತೇವೆ, ಏಕೆಂದರೆ ನಾವು ಬಡವರು ಎಂಬ ಮಿಥ್ಯಾಲೋಚನೆ ನಮ್ಮ ಮೆದುಳಿನಲ್ಲಿ ಹಾಸುಹೊಕ್ಕಾಗಿದೆ. ಅಪ್ಪಿತಪ್ಪಿಯೂ ನಮಗೆ ಪಕ್ಕದ ಪುಟ್ಟ ದೇಶವಾದ ಭೂತಾನ್ ನೆನಪಿಗೆ ಬರುವುದಿಲ್ಲ. ಅಲ್ಲಿನ ಆದರ್ಶ ಅಥವಾ ಮಾದರಿಯನ್ನು ನಾವು ಅನುಕರಿಸುವುದಿಲ್ಲ.

ಒಂದು ಬಾರಿ ಉಪಯೋಗಿಸುವ ಎಲ್ಲಾ ಪ್ಲಾಸ್ಟಿಕ್ ಉತ್ಪನ್ನಗಳು ಕರ್ನಾಟಕದಲ್ಲಿ 2016ರಲ್ಲೇ ನಿಷೇಧಕ್ಕೆ ಒಳಗಾಗಿದ್ದವು. ಇದರಲ್ಲಿ, ಪ್ಲಾಸ್ಟಿಕ್ ಕೊಟ್ಟೆ, ಗ್ಲಾಸ್, ಪ್ಲೇಟ್, ಚಮಚ, ಸ್ಟ್ರಾ, ಕ್ಯಾಂಡಿ ಕಡ್ಡಿಗಳು ಎಲ್ಲವೂ ಸೇರಿದ್ದವು. ಸದಾಶಯದ ಒಂದು ಆದೇಶವು ಬಿಗಿಯಾಗಿ ಅನುಷ್ಠಾನಗೊಳ್ಳದ ಕಾರಣ ಆರು ವರ್ಷಗಳಲ್ಲಿ ಮಹಾನಗರಗಳ ಹೊರವಲಯದಲ್ಲಿ ಪ್ಲಾಸ್ಟಿಕ್ ಪರ್ವತಗಳೇ ಸೃಷ್ಟಿಯಾದವು. ಏಕಬಳಕೆ ಪ್ಲಾಸ್ಟಿಕ್ ವಿರುದ್ಧ ಈಗ ಕೇಂದ್ರ ಸರ್ಕಾರವು ನಿಷೇಧದ ಅಸ್ತ್ರ ಪ್ರಯೋಗಿಸಿದೆ. ಈ ಆದೇಶವು ಇದೇ ಜುಲೈ 1ರಿಂದ ಜಾರಿಗೆ ಬರಲಿದೆ. ಹೀಗಾಗಿ, ನಾವು ಏಕೋಪಯೋಗಿ ಪ್ಲಾಸ್ಟಿಕ್‌ರಹಿತ ಜೀವನಕ್ಕೆ ಒಗ್ಗಿಕೊಳ್ಳುವುದು ಅನಿವಾರ್ಯ.

ಪ್ಲಾಸ್ಟಿಕ್ ಉತ್ಪಾದಕರ ತಲೆನೋವು ಏನೇ ಇರಲಿ. ಅನಗತ್ಯವಾಗಿ ಅದನ್ನು ಬಳಸಿ ಬಳಸಿ ಎಸೆಯುವ ನಮ್ಮ ಮನಃಸ್ಥಿತಿ ಮುಂದಿನ ದಿನಗಳಲ್ಲಿ ಹೇಗಿರಬೇಡ? ಹಣ್ಣು-ಹಂಪಲು, ತರಕಾರಿ, ದಿನಸಿ ಇತ್ಯಾದಿ ತರಲು ಬಟ್ಟೆಯ ಚೀಲವನ್ನು ನಾವು ಜೊತೆಗೆ ಇಟ್ಟುಕೊಳ್ಳಲೇಬೇಕು. ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ತಿದ್ದುಪಡಿ ನಿಯಮ-2021ರ ಪ್ರಕಾರ, ಏಕೋಪಯೋಗಿ ಪ್ಲಾಸ್ಟಿಕ್ ಅನ್ನು ತಯಾರಿಸುವುದು, ಆಮದು ಮಾಡಿಕೊಳ್ಳುವುದು, ಸಂಗ್ರಹಿಸಿ ಇಟ್ಟುಕೊಳ್ಳುವುದು, ಮಾರಾಟ ಮಾಡುವುದು ಮತ್ತು ಉಪಯೋಗಿಸುವುದು ನಿಷಿದ್ಧ. ಪ್ಲಾಸ್ಟಿಕ್ ಚೀಲಕ್ಕೆ ಮಾತ್ರ ಈ ನಿಷೇಧ ಸೀಮಿತವಾಗಿಲ್ಲ, ಪ್ಲಾಸ್ಟಿಕ್ಕಿನಿಂದ ತಯಾರಿಸಿದ ಗುಗ್ಗೆ ಕಡ್ಡಿ, ಐಸ್ ಕ್ರೀಂ ಕಡ್ಡಿ, ಕ್ಯಾಂಡಿಗಳು, ಬಲೂನುಗಳು, ಧ್ವಜ, ಅಲಂಕಾರಕ್ಕಾಗಿ ಬಳಸುವ ಥರ್ಮೋಕೋಲ್ ಎಲ್ಲವೂ ಸೇರಿವೆ. ಜೊತೆಗೆ ಪ್ಲಾಸ್ಟಿಕ್ ಪ್ಲೇಟುಗಳು, ಲೋಟ, ಫೋರ್ಕ್, ಚಮಚ, ಕೇಕ್ ತುಂಡರಿಸುವ ಪ್ಲಾಸ್ಟಿಕ್ ಚಾಕು, ಸ್ಟ್ರಾ ಅಂತಹವು ಸಹ ನಿಷೇಧದ ಪಟ್ಟಿಯಲ್ಲಿವೆ. ಬೇಕರಿಯಲ್ಲಿ ಪ್ಯಾಕಿಂಗ್ ರಟ್ಟಿನ ಮೇಲೆ, ಆಮಂತ್ರಣ ಪತ್ರ, ಸಿಗರೇಟು ಪ್ಯಾಕ್ ಮೇಲೆ ಬಳಸುವ ತೆಳು ಪ್ಲಾಸ್ಟಿಕ್ ಹೊದಿಕೆ, 100 ಮೈಕ್ರಾನ್‌ಗಿಂತ ಕಡಿಮೆ ಇರುವ ಫ್ಲೆಕ್ಸ್ ಬ್ಯಾನರ್‌ಗಳೂ ಸೇರಿವೆ.

ಏಕೋಪಯೋಗಿ ಪ್ಲಾಸ್ಟಿಕ್‌ಗೆ ಪರ್ಯಾಯ ಏನು? ಬಟ್ಟೆ ಚೀಲ, ಬಿದಿರಿನ ಉತ್ಪನ್ನಗಳು, ವಿವಿಧ ಸಾವಯವ ವಸ್ತುಗಳಿಂದ ತಯಾರಿಸಿದ ಕೈಚೀಲದಂತಹವನ್ನು ಇಲ್ಲಿ ಪರಿಗಣಿಸಬಹುದು. ಈಶಾನ್ಯ ರಾಜ್ಯಗಳಲ್ಲಿ ಈಗೀಗ ಬಿದಿರಿನ ನೀರಿನ ಬಾಟಲಿಗಳನ್ನು ತಯಾರಿಸುತ್ತಿದ್ದಾರೆ. ಮಣ್ಣಿನಲ್ಲಿ ವೇಗವಾಗಿ ಕರಗಬಲ್ಲಂತಹ ಧಾನ್ಯಾಧಾರಿತ ತೆಳು ಚೀಲಗಳನ್ನು ಕೆಲ ದೇಶಗಳಲ್ಲಿ ತಯಾರಿಸುತ್ತಿದ್ದಾರೆ. ಪರ್ಯಾಯ ಚಿಂತನೆಗಳಿಗೆ, ಆವಿಷ್ಕಾರಗಳಿಗೆ ತೆರೆದುಕೊಳ್ಳುವ ಮನಸ್ಸಿದ್ದರೆ ಹಾಗೂ ಸರ್ಕಾರಗಳ ಒತ್ತಾಸೆಯಿದ್ದರೆ, ಹಳ್ಳಿ ಹಳ್ಳಿಗಳಲ್ಲೂ ಪ್ಲಾಸ್ಟಿಕ್ಕಿಗೆ ಪರ್ಯಾಯವಾದ ಉತ್ತಮ ಉತ್ಪನ್ನಗಳನ್ನು ತಯಾರಿಸುವ ಪಡೆಯನ್ನೇ ಸಜ್ಜುಗೊಳಿಸಬಹುದು. ಇದರಿಂದ ನಿರುದ್ಯೋಗ ಸಮಸ್ಯೆಯೂ ಕೊಂಚ ಮಟ್ಟಿಗೆ ತಗ್ಗುವ ನಿರೀಕ್ಷೆಯಿದೆ.

ಸದ್ಯಕ್ಕೆ ಕೆಲವು ಬಗೆಯ ಏಕೋಪಯೋಗಿ ಪ್ಲಾಸ್ಟಿಕ್ ಅನ್ನು ದೇಶದಲ್ಲಿ ನಿಷೇಧಿಸಲಾಗಿದೆ. ಹಾಲಿನ ಪ್ಯಾಕೆಟ್, ಎಣ್ಣೆ, ಜಂಕ್‌ಫುಡ್ ತುಂಬಿಸಲು ಬಳಸುವ ಪ್ಯಾಕೆಟ್‌ಗಳಂತಹ ಇನ್ನೂ ಅನೇಕ ಬಗೆಯ ಏಕೋಪಯೋಗಿ ಪ್ಲಾಸ್ಟಿಕ್ ವಸ್ತುಗಳಿವೆ. ಅವುಗಳ ಕುರಿತಾಗಿ ಇನ್ನೂ ಸ್ಪಷ್ಟವಾದ ನಿಲುವು ತೆಗೆದುಕೊಳ್ಳಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ.

ದೇಶದ ಸಂವಿಧಾನದಲ್ಲಿ ನಾಗರಿಕರ ಅನುಕೂಲಕ್ಕಾಗಿಯೇ ಅನೇಕ ಕಾನೂನುಗಳಿವೆ. ಆ ಕಾನೂನುಗಳಿಗೆ ಬೆಲೆ ಬರುವುದು ಅವು ಸಮರ್ಪಕವಾಗಿ ಅನುಷ್ಠಾನವಾದಾಗ ಮಾತ್ರ. ಏಕೋಪಯೋಗಿ ಪ್ಲಾಸ್ಟಿಕ್ ನಿಷೇಧ ಮಾಡಿರುವುದನ್ನು ನಾಗರಿಕರೆಲ್ಲಾ ಸ್ವಾಗತಿಸಬೇಕು ಜೊತೆಗೆ ಮುಂದಿನ ದಿನಗಳಲ್ಲಿ ಎಲ್ಲಾ ತರಹದ ಪ್ಲಾಸ್ಟಿಕ್ ನಿಷೇಧ ಮಾಡುವ ಉಪಕ್ರಮಗಳಿಗೂ ಸರ್ಕಾರದ ಜೊತೆ ಕೈಜೋಡಿಸಬೇಕು. ಆಗ ಮಾತ್ರ ಸ್ವಚ್ಛ ಭಾರತದ ಕಲ್ಪನೆ ಸಾಕಾರಗೊಳ್ಳಲು ಸಾಧ್ಯ.



ಚುರುಮುರಿ



ತೆಳು ಮೊಸರು, ಕಹಿತುಪ್ಪ

• ಕೆ.ವಿ.ರಾಜಲಕ್ಷ್ಮಿ

‘ಮೊಸರು ಯಾಕೋ ತೆಳ್ಳಗಿದೆ’ ಗೊಣಗಿಕೊಂಡೇ ತುತ್ತೆತ್ತಿದೆ.

‘ಯಾಕೆ? ವಿಷಯ ಗೊತ್ತಿಲ್ವ? ಗಂಟೆಗಟ್ಲೆ ಪೇಪರ್ ಓದಿದ್ರೂ ಓದಿದ್ದೇ ನ್ಯೂಸ್ ಕೇಳಿದ್ರೂ ಕೇಳಿದ್ದೇ! ಜಿಎಸ್‌ಟಿ ಆವರಣಕ್ಕೆ ಮೊಸರು, ಜೇನುತುಪ್ಪ, ಪನ್ನೀರು ಎಲ್ಲ ಸೇರಿಕೊಂಡಿವೆ. ಇನ್ಮೇಲೆ ಇವೆಲ್ಲ ತುಟ್ಟಿ’ ನನ್ನವಳು ಉರಿದುಬಿದ್ದಳು.

‘ರಸಾಯನದಲ್ಲಿ ಜೇನುತುಪ್ಪ ಇರೋಲ್ಲ’ ಪುಟ್ಟಿ ಕಿಸಕ್ಕನೆ ನಕ್ಕಳು.

‘ನಗ್ಬೇಡ, ವಿದ್ಯುತ್ ಬೆಲೆಯೇರಿಕೆಯ ಶಾಕ್ ಬೇರೆ, ಓದೋದೇನಿದ್ರೂ ಆದಷ್ಟೂ ಬೆಳಕಿದ್ದಾಗ್ಲೇ ಮುಗಿಸ್ಕೊ’ ನಾನು ನನ್ನವಳ ಪರ ನಿಂತೆ.

‘ನೀವೂ ಅಷ್ಟೆ, ಟಿ.ವಿ. ಓಡ್ತಿರುತ್ತೆ ನೀವು ತೂಕಡಿಸ್ತಾ ಇರ್ತೀರಿ. ಎಲ್ಲ ಸಹವಾಸ ದೋಷ, ನಿಮ್ಮ ಗೆಳೆಯನ ಚಾಳಿ ನಿಮಗೂ...’ ಪರೋಕ್ಷವಾಗಿ ಕಂಠಿಗೂ ಅರ್ಚನೆ.

‘ಅದೆಲ್ಲ ಇರ್ಲಿ, ಇನ್ಮುಂದೆ ಏಕಬಳಕೆ ಪ್ಲಾಸ್ಟಿಕ್ ನಿಷೇಧ. ಪರಿಸರ ಕಾಳಜಿಯ ದಿಸೆಯಲ್ಲಿ ಒಳ್ಳೇದೇ ಆಯಿತು’ ಅತ್ತೆ ಸುದ್ದಿ ಕೊಟ್ಟರು.

‘ಎಳನೀರು, ಜ್ಯೂಸು ಇವನ್ನೆಲ್ಲ ಸ್ಟ್ರಾನಲ್ಲಿ ಸುರ್ ಅಂತ ಹೀರ್ತಿದ್ವಿ, ಇಯರ್ ಬಡ್ ಹೇಗಿರುತ್ತೋ?’ ಪುಟ್ಟಿಯ ಚಿಂತೆ.

‘ಎಳನೀರನ್ನ ಲಕ್ಷಣವಾಗಿ ಲೋಟಕ್ಕೆ ಬಗ್ಗಿಸಿಕೊಂಡು ಕುಡಿದರಾಗೋಲ್ವೆ? ನಾವೆಲ್ಲ ಕಿವಿ ಗುಗ್ಗೇನ ಸೇಫ್ಟಿ ಪಿನ್ನೋ ಇಲ್ಲ ಸಣ್ಣ ಹೇರ್ ಪಿನ್ನಲ್ಲೋ ತೆಗೆದು ಸ್ವಚ್ಛ ಮಾಡ್ಕೊತಿದ್ವಿ, ಏನಾಗಿದೆ ನಮಗೆ?’ ಅತ್ತೆ ಗದರಿದರು.

ಅಷ್ಟರಲ್ಲಿ ಕಂಠಿ ಕುಂಟಿಕೊಂಡೇ ಬಂದು ಈಸಿ ಚೇರಿನಲ್ಲಿ ಕಷ್ಟಪಟ್ಟು ಕುಳಿತ.

‘ಏನಾಯ್ತು? ಬಾಸ್ ಜೊತೆ ಪ್ರವಾಸ ಗಿವಾಸ ಹೋಗಿದ್ಯಾ?’

‘ಬಾಸ್ ಮನೆಗೆ ಹೋಗುವಾಗ, ಹೊಸದಾಗಿ ಡಾಂಬರು ಹಾಕಿ ಮಿರಮಿರ ಮಿಂಚ್ತಿದ್ದ ರಸ್ತೆಯಲ್ಲಿ ಗುಂಡಿ ಕಾಣದೆ ಎಡವಿಬಿದ್ದೆ, ಸ್ವಲ್ಪ ಮೂಗೇಟು’.

‘ಮತ್ತೆ ಮೂಗಿಗೆ ಪ್ಲಾಸ್ಟರ್ ಹಾಕಿಲ್ಲ’ ಪುಟ್ಟಿಯ ಕೀಟಲೆ!

‘ಹೊರಗೆ ಥಳುಕು ಒಳಗೆ ಹುಳುಕು ಅನ್ನೋದು ಅದಕ್ಕೇ, ಹೋಗ್ಲಿಬಿಡು, ಇಷ್ಟರಲ್ಲೇ ಆಯಿತು ಅಂತ ಸಮಾಧಾನ ಪಟ್ಕೋಬೇಕು’ ಎಂದೆ.

ಕಂಠಿ ಆಗಲೇ ನಿದ್ದೆಗೆ ಜಾರಿದ್ದ.

ಸಂಗತ

ಕ್ಷುದ್ರಗ್ರಹ ನಿಗ್ರಹಕ್ಕೆ ನೇಸರನ ನೆರವು?

ಕ್ಷುದ್ರಗ್ರಹಗಳೆಂಬ ಅನಪೇಕ್ಷಿತ ಅತಿಥಿಗಳು ನಮ್ಮ ಮೇಲಿನ ತೂಗುಗತ್ತಿಗಳು

• ಬಿ.ಎಸ್.ಭಗವಾನ್

ಅಸಂಖ್ಯ ಕಿರು ಆಕಾಶಕಾಯಗಳು ಭುವಿಯತ್ತ ಬರುತ್ತವಲ್ಲ, ವಿಮಾನಕ್ಕೆ ಹಕ್ಕಿ ಡಿಕ್ಕಿಯಾದಂತೆ ಅವು ಅಪ್ಪಳಿಸಿ ಏನಾದರೂ ಅನಾಹುತವಾದರೆ? ಅವು ಹೆಸರಿಗಷ್ಟೇ ‘ಕ್ಷುದ್ರಗ್ರಹ’ಗಳು. ಪತನಗೊಂಡರೆ ಆಸುಪಾಸಿನಲ್ಲಿ ಸೃಷ್ಟಿಸುವ ರಾದ್ಧಾಂತವೋ ಮನುಕುಲಕ್ಕೆ ತಿಳಿದಿರುವ ಯಾವುದೇ ವಿಪತ್ತಿಗಿಂತಲೂ ಬಹು ರೌದ್ರ, ಅತಿ ಘೋರ.

ಕ್ಷುದ್ರಗ್ರಹಗಳು ಸೌರವ್ಯೂಹದ ಸದಸ್ಯರೇ. ವಿಶೇಷವಾಗಿ ಮಂಗಳ ಮತ್ತು ಗುರುಗ್ರಹದ ನಡುವೆ ಅವು ದಟ್ಟೈಸಿದ್ದು, ವಿವಿಧ ಪಥಗಳಲ್ಲಿ ಸೂರ್ಯನನ್ನು ಬಳಸುತ್ತವೆ. ಹಾಗಾಗಿ ಈ ವ್ಯೋಮ ವಲಯವನ್ನು ‘ಕ್ಷುದ್ರಗ್ರಹಗಳ ಅಡ್ಡ’ ಎನ್ನೋಣ! ಇದೇ ವರ್ಷ ಅಕ್ಟೋಬರ್‌ನಲ್ಲಿ ಡಿಡಿಮೊಸ್ ಎಂಬ 550 ಮೀಟರ್ ಅಡ್ಡಗಲದ ಕ್ಷುದ್ರಗ್ರಹವೊಂದು ಧರೆಯ ಬಳಿ ಸುಳಿಯುವ ಸಾಧ್ಯತೆಯಿದೆ. ಇವ ತನ್ನ ಸುತ್ತ ಬಳಸುವ 150 ಮೀಟರ್ ಅಡ್ಡಗಲದ ‘ಮರಿಕಾಯ’ದ ಸಮೇತ ಬರುವವ ಎನ್ನುವುದೇ ಹೆಚ್ಚುವರಿ ಆತಂಕ. ಕೊಲೆಗಡುಕನನ್ನು ಹತ್ತಿಕ್ಕುವುದರ ಮೊದಲ ಹಂತವೇ ಅವನನ್ನು ಗುರುತಿಸುವುದು ತಾನೆ? ‘ನಾಸಾ’ದ ವಿಜ್ಞಾನಿಗಳು ಡಿಡಿಮೊಸ್‌ನ ಚಲನವಲನಗಳ ಮೇಲೆ ಹದ್ದಿನ ಕಣ್ಣಿಟ್ಟಿದಾರೆ.

ಯಾವುದೇ ಒಂದು ಆಕಾಶಕಾಯ ಗುರುತ್ವ ಪ್ರಭಾವಿತ ಸಂಬದ್ಧ ರಚನೆ. ಹಗಲಿರುಳೆನ್ನದೆ ಉಲ್ಕೆಗಳೆಂಬ ಸಣ್ಣ ಪುಟ್ಟವು ಭೂಮಿಯತ್ತ ಬಂದು ವಾಯುಮಂಡಲದೊಂದಿಗೆ ಘರ್ಷಿಸಿ ಸಿಡಿದು ಬೀಳುತ್ತಿರುತ್ತವೆ. ಹಾಗಾಗಿ ಆಕಾಶಕಾಯಗಳು ದಿಕ್ಕೆಟ್ಟು ಭೂಮಿಗೆ ಯಾವುದೇ ಕ್ಷಣ ಬಡಿಯುವುದು ಸಾಮಾನ್ಯ, ಸಂಭಾವ್ಯ. ಕ್ಷುದ್ರಗ್ರಹಗಳೆಂಬ ಆ ಅನಪೇಕ್ಷಿತ ಅತಿಥಿಗಳು ನಿಜಕ್ಕೂ ನಮ್ಮ ಮೇಲಿನ ತೂಗುಗತ್ತಿಗಳು. ಏನೂ ಆಗದು, ಬಿಡಿ ಎಂದುಕೊಂಡರೂ ಸ್ವಲ್ಪಮಟ್ಟಿಗಾದರೂ ಅವು ನಮ್ಮ ನಿರಾಳತೆ ಕಸಿದಿವೆ.

2016ರಲ್ಲಿ ವಿಶ್ವಸಂಸ್ಥೆ ನಿರ್ಣಯಿಸಿದಂತೆ, ಪ್ರತಿ ವರ್ಷ ಜೂನ್ 30ರಂದು ‘ವಿಶ್ವ ಕ್ಷುದ್ರಗ್ರಹಗಳ ದಿನ’ ಆಚರಿಸಲಾಗುತ್ತಿದೆ. ಜನಸಾಮಾನ್ಯರಲ್ಲಿ ಆಗಸದ ಪ್ರಜ್ಞೆಯನ್ನು ಪುಟಿದೆಬ್ಬಿಸುವುದೇ ಅಭಿಯಾನದ ಉದ್ದೇಶ.

30.6.1908, ಬೆಳಿಗ್ಗೆ 7. 14ರ ಸಮಯ. ರಷ್ಯಾದ ಸೈಬೀರಿಯ ಪ್ರಾಂತ್ಯದ ತುಂಗಾಸ್ಕ ನದಿಯ ಸಮೀಪ 8 ಕಿ.ಮೀ. ಎತ್ತರದಲ್ಲಿ ದಿಢೀರನೆ ಭಾರಿ ಸ್ಫೋಟ ಸಂಭವಿಸಿತು. ಸ್ಫೋಟದ ತೀವ್ರತೆ ಎಷ್ಟಿತ್ತೆಂದರೆ, ಸುತ್ತಲ 100 ಚದರ ಕಿ.ಮೀ. ವ್ಯಾಪ್ತಿಯ ಸುಮಾರು ಎಂಟು ಕೋಟಿ ದೇವದಾರು ಮರಗಳು ಗಳಿಗೆಯಲ್ಲಿ ಸುಟ್ಟು ಕರಕಲಾಗಿದ್ದವು. ನಿರ್ಜನ ಪ್ರದೇಶವಾಗಿದ್ದರಿಂದ ಮೂರ್ನಾಲ್ಕು ಮಂದಿ ಮಾತ್ರವೆ ಜೀವತೆತ್ತರೇನೊ? ಸರಿ, ಈ ಪರಿ ಸಿಡಿದ ಕಾಯ 40 ಮೀಟರ್ ಅಗಲದ ಕ್ಷುದ್ರಗ್ರಹ, ಸುದೈವವಶಾತ್ ಗಾಳಿಯೊಡನೆ ಘರ್ಷಿಸಿ ಚೆಲ್ಲಾಪಿಲ್ಲಿಯಾಯಿತು. ನೆಲಕ್ಕಪ್ಪಳಿಸಿದ್ದರೆ ಆಗಲಿದ್ದ ಘೋರ ಅನಾಹುತ ಊಹಾತೀತ. ‘ತುಂಗಾಸ್ಕ ಘಟನೆ’ ಎಂದೇ ಈ ಆಕಸ್ಮಿಕವು ಇತಿಹಾಸದಲ್ಲಿ (ಕು)ಖ್ಯಾತವಾಯಿತು.

ಕೇವಲ ಒಂದು ಕಿ.ಮೀ. ವ್ಯಾಸದ ಕ್ಷುದ್ರಕಾಯ ತಾಸಿಗೆ 60,000 ಕಿ.ಮೀ. ವೇಗದಲ್ಲಿ ನೆಲಕ್ಕಪ್ಪಳಿಸಿ ದಿಢೀರನೆ ಎಬ್ಬಿಸುವ ದೂಳು ಮತ್ತು ಕಲ್ಲು ಚೂರುಗಳು ಹಲವು ದಿನಗಳವರೆಗೆ ಸೂರ್ಯನನ್ನೇ ಮರೆಮಾಚಿರುತ್ತವೆ. ಅಷ್ಟೇ ಅಲ್ಲ, ಅಂತರಗ್ರಹ ಆಗಸದಲ್ಲಿ ಆ ತುಣುಕುಗಳು ‘ತೇಲುವ ಕಸ’. ಇನ್ನು ಸಾಗರ ಪ್ರದೇಶದಲ್ಲಿ ಬಿದ್ದರೆ ಗೊತ್ತೇ ಇದೆ, ಧರೆಯನ್ನೇ ಆಪೋಶನ ತೆಗೆದುಕೊಳ್ಳುವ ಭೀಕರ ಸುನಾಮಿ ಕಟ್ಟಿಟ್ಟ ಬುತ್ತಿ.

6.6 ಕೋಟಿ ವರ್ಷಗಳ ಹಿಂದೆ 10 ಕಿ.ಮೀ. ವ್ಯಾಸದ ಕ್ಷುದ್ರಗ್ರಹ ಭೂಮಿಗಪ್ಪಳಿಸಿ ಡೈನೊಸಾರ್ ಸಂಕುಲ ಸೇರಿದಂತೆ ಭೂಮಿಯ ಮುಕ್ಕಾಲು ಪಾಲು ಪ್ರಾಣಿವೈವಿಧ್ಯವನ್ನು ನಿರ್ನಾಮಗೊಳಿಸಿತು ಎನ್ನಲಾಗಿದೆ. ಭೂಮಿಗೆ ಅಪ್ಪಳಿಸುವ ಮುನ್ನವೇ ಕ್ಷುದ್ರಗ್ರಹಗಳನ್ನು ನಿಗ್ರಹಿಸುವ ಯೋಜನೆಗಳನ್ನು ‘ನಾಸಾ’ ರೂಪಿಸಿದೆ. ವಿನಾಶಕಾರಿಯಾದವನ್ನು ಬೇಟೆಯಾಡಿ ಅವುಗಳಿಂದ ಆಗಬಹುದಾದ ಕಠೋರ ರಾದ್ಧಾಂತ ಮುಂಗಾಣುವುದು ‘ನಾಸಾ’ದ ಸಂಕಲ್ಪ.



ಭೂಮಿಯ ಹತ್ತಿರಕ್ಕೆ ಬರಲೆತ್ನಿಸುವ ಆಗಂತುಕ ಕಾಯಗಳ ಹರಣ ಕಾರ್ಯಾಚರಣೆ ಖಗೋಳಯಾತ್ರಿಗಳ ಹೊಣೆಯಲ್ಲ. ಅದು ಸಿನಿಮಾಗಳಲ್ಲಷ್ಟೆ! ಅಲ್ಲಿ ನಾಯಕ ತಾನು ಪಯಣಿಸುವ ಗಗನನೌಕೆಯ ಕಿಂಡಿಯ ಮೂಲಕ ದಾಳಿಯಿಡಲು ಭೂಮಿಯತ್ತ ಹೊರಟಿರುವ ಕಾಯವನ್ನು ಹೊಂಚು ಹಾಕಿ ಛಿದ್ರಗೊಳಿಸುತ್ತಾನೆ! ಈ ದಿಸೆಯಲ್ಲಿ ಒಂದು ಸಿದ್ಧಾಂತವಿದೆ. ಸೌರವ್ಯೂಹ ರೂಪುಗೊಳ್ಳುವ ಕಾಲಕ್ಕೆ ಮಂಗಳ ಮತ್ತು ಗುರುಗ್ರಹಗಳ ಮಧ್ಯೆ ಒಂದು ಗ್ರಹವಿತ್ತು. ಎಷ್ಟಾದರೂ ಗುರು ದೈತ್ಯ. ಸ್ವಲ್ಪದರಲ್ಲೇ ತಾರೆಯಾಗುವ ಅವಕಾಶ ಕಳೆದುಕೊಂಡ ನತದೃಷ್ಟ ಅನ್ನಿ. ಆ ಅಮಾಯಕ ಗ್ರಹದ ಕಕ್ಷೆಗೆಡಿಸಿ ಅದನ್ನು ನುಚ್ಚುನೂರಾಗಿಸಿ ಮಿಲಿಯಾಂತರ ಬಂಡೆಗಳಾಗಿಸಿರಬಹುದು. ಗ್ರಹಗಳ ಬಳಿ ಸುಪ್ತವಾಗಿರುವುದು ಕ್ಷುದ್ರಗ್ರಹಗಳ ಜಾಯಮಾನ. ಅವುಗಳಲ್ಲಿ ಜೀವವೈವಿಧ್ಯವಿಲ್ಲ. ಅವಕ್ಕೆ ಉಪಗ್ರಹಗಳಿಲ್ಲ. ಭೂಮಿಯತ್ತ ಧಾವಿಸುವ ಅಪಾಯಕಾರಿ ಕ್ಷುದ್ರಗ್ರಹಗಳನ್ನು ಗಗನ ನೌಕೆಗಳಿಂದ ಡಿಕ್ಕಿ ಹೊಡೆಸಿ ಅವುಗಳ ಪಥಗಳನ್ನು ಬದಲಿಸುವುದು ಉಪಾಯ.

ಮ್ಯಾಡ್ರಿಡ್ ತಾಂತ್ರಿಕ ವಿಶ್ವವಿದ್ಯಾಲಯದ ಸಿ. ಬಾಂಬ್ರಡೆಲ್ಲಿ ಹಾಗೂ ಜೆ.ಪೆಲೇಜ್ ಎಂಬ ವಿಜ್ಞಾನಿಗಳು ಒಂದು ಹೊಸ ತಂತ್ರ ರೂಪಿಸಿದ್ದಾರೆ. ಸಂಶೋಧನಾರ್ಥವಾಗಿ ಸುಳಿದಾಡುವ ಗಗನನೌಕೆಯಲ್ಲಿ ‘ಐಯಾನ್ ಥ್ರಸ್ಟರ್’ ಎಂಬ ಉಪಕರಣವಿರಿಸುವುದು, ವಿನಾಶಕಾರಿ ಕ್ಷುದ್ರಗ್ರಹವನ್ನು ಗುರಿಯಾಗಿಸಿ ಅದರ ಮೇಲ್ಮೈನಲ್ಲಿ ನೋದಕ ಬಲ ಸೃಷ್ಟಿಸುವುದರ ಮೂಲಕ ಕ್ಷುದ್ರಗ್ರಹದ ದಿಕ್ಕು ತಪ್ಪಿಸುವುದು, ಸೌರಶಕ್ತಿಯನ್ನು ಬಳಸಿಕೊಂಡು ಆಗಂತುಕ ಕಾಯಗಳಿಗೆ ನೂಕು ಬಲ ಒದಗಿಸುವ ಚಿಂತನೆಯೂ ನಡೆದಿದೆ. ಲೇಸರ್ ಬಳಸಿ ಕ್ಷುದ್ರಗ್ರಹವನ್ನೇ ಕರಕಲಾಗಿಸುವ ಆಲೋಚನೆಯಂತೂ ಭರ್ಜರಿ ಮಹತ್ವ ಪಡೆದುಕೊಂಡಿದೆ.

ವಾಚಕರ ವಾಣಿ

ಪಠ್ಯಪುಸ್ತಕ: ಶಾಶ್ವತ ಪರಿಹಾರ ಅಗತ್ಯ

ಹಿಜಾಬ್ ವಿವಾದದಿಂದ ಶಾಲಾಕಾಲೇಜು ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಯಿತು. ನಂತರ ಶಾಲಾ ಮಕ್ಕಳ ಪಠ್ಯಪುಸ್ತಕ ಪರಿಷ್ಕರಣೆಯು ವಿವಾದಕ್ಕೆ ಎಡೆಮಾಡಿಕೊಟ್ಟಿತು. ಬಳಿಕ ಪಠ್ಯಪುಸ್ತಕ ಸರಬರಾಜಿನಲ್ಲಿ ವಿಳಂಬ, ಏರುಪೇರು ಆಯಿತು. ಕೆಲವೆಡೆ ಪುಸ್ತಕ ಸರಬರಾಜು ಆಗಿದ್ದರೂ ಪರಿಷ್ಕರಣೆಗೆ ಸಂಬಂಧಿಸಿದ ಗೊಂದಲ ಮಾತ್ರ ಇನ್ನೂ ಬಗೆಹರಿದಿಲ್ಲ.

ಕೊರೊನಾ ಸಾಂಕ್ರಾಮಿಕದಿಂದ ಎರಡು ವರ್ಷಗಳ ಕಾಲ ತೀವ್ರ ಹಿನ್ನಡೆ ಅನುಭವಿಸಿದ್ದ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ನಮ್ಮ ಅಧಿಕಾರಸ್ಥರಿಗೆ ಕಾಳಜಿಯೇ ಇಲ್ಲ ಎಂಬುದು ಇದರಿಂದ ತಿಳಿಯುತ್ತದೆ. ಮಕ್ಕಳ ಪಠ್ಯಪುಸ್ತಕಗಳ ಮೇಲೆ ರಾಜಕೀಯದ ವಕ್ರದೃಷ್ಟಿ ಬಿದ್ದು ವಿದ್ಯಾಭ್ಯಾಸ ನಲುಗುತ್ತಿರುವುದು ವಿಷಾದನೀಯ. ಇದಕ್ಕೊಂದು ಶಾಶ್ವತ ಪರಿಹಾರ ಅಗತ್ಯ.

ಸತ್ಯಬೋಧ, ಬೆಂಗಳೂರು

ಭೂಮಿ ಒತ್ತುವರಿ: ತೆರೆದ ರಹಸ್ಯ!

ಬೆಂಗಳೂರಿನ ನಾಗವಾರದಲ್ಲಿ ಬಿಡಿಎಗೆ ಸೇರಿದ ಸುಮಾರು ನೂರು ಕೋಟಿ ರೂಪಾಯಿ ಮೌಲ್ಯದ ಒಂದೂಕಾಲು ಎಕರೆ ಜಾಗದಲ್ಲಿ ನಿರ್ಮಿಸಲಾಗಿದ್ದ ವಾಣಿಜ್ಯ ಮಳಿಗೆಗಳನ್ನು ಇತ್ತೀಚೆಗೆ ತೆರವುಗೊಳಿಸಿದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಪ್ರಕ್ರಿಯೆಗೆ ಮೂರು ದಶಕಗಳಿಗಿಂತಲೂ ಅಧಿಕ ಸಮಯ ತಗುಲಿರುವುದು ಅಚ್ಚರಿ ಮೂಡಿಸುತ್ತದೆ. ನಗರದ ವಿವಿಧ ಬಡಾವಣೆಗಳಲ್ಲಿ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದು ಗೋಪ್ಯವಾಗಿ ಉಳಿದಿಲ್ಲ.

ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ನಿರ್ಮಿಸಲಾದ ಕಟ್ಟಡಗಳನ್ನು ಹಲವಾರು ವರ್ಷಗಳ ಕಾಲ ಪುಕ್ಕಟೆಯಾಗಿ ಅನುಭವಿಸಲು ಬಿಟ್ಟು ತದನಂತರ ಒತ್ತುವರಿಯನ್ನು ತೆರವುಗೊಳಿಸುವ ಪ್ರಕ್ರಿಯೆಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟಾಗುತ್ತದೆ. ಈ ನಷ್ಟವನ್ನು ಒತ್ತುವರಿದಾರರಿಂದಲೇ ವಸೂಲಿ ಮಾಡಬೇಕು ಹಾಗೂ ಒತ್ತುವರಿ ಮಾಡಲು ಸಹಕರಿಸಿದ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸಬೇಕು. ಈ ಮೂಲಕ ಸರ್ಕಾರಿ ಭೂಮಿ ಒತ್ತುವರಿಗೆ ತಡೆಯೊಡ್ಡಬೇಕು.

ಜಿ.ನಾಗೇಂದ್ರ ಕಾವೂರು, ಸಂಡೂರು

ಪ್ಲಾಸ್ಟಿಕ್ ನಿಷೇಧ: ದ್ವಂದ್ವ ನಿಲುವು ಬೇಡ

ಏಕಬಳಕೆ ಪ್ಲಾಸ್ಟಿಕ್ ಅನ್ನು ಜುಲೈ 1ರಿಂದ ನಿಷೇಧಿಸಿ ಕೇಂದ್ರ ಸರ್ಕಾರ ಸುತ್ತೋಲೆ ಹೊರಡಿಸಿದೆ. ಮುಂದಾದರೂ ಪ್ಲಾಸ್ಟಿಕ್ ಭೂತ ಹಾಗೇ ನಿಧಾನಗತಿಯಲ್ಲಿ ನಮ್ಮ ಪರಿಸರದಿಂದ ದೂರವಾಗಲಿ ಎಂದು ಆಶಿಸುತ್ತಾ ಎಲ್ಲರೂ ಈ ದಿಸೆಯಲ್ಲಿ ಕೈಜೋಡಿಸೋಣ.

ಆದರೆ ಬಹಳ ಮುಖ್ಯವಾಗಿ, ಸರ್ಕಾರ ತೊಟ್ಟಿಲನ್ನೂ ತೂಗುವ ಮಗುವನ್ನೂ ಚಿವುಟುವ ಕೆಲಸ ಮಾಡಬಾರದು. ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿದರಷ್ಟೇ ಸಾಲದು, ಆ ಪ್ಲಾಸ್ಟಿಕ್ ತಯಾರಿಕಾ ಕಾರ್ಖಾನೆಗಳನ್ನೂ ಮುಚ್ಚಿಸಬೇಕು. ಇಲ್ಲವಾದಲ್ಲಿ ವ್ಯಾಪಾರಿಗಳೇ ಬಲಿಪಶುಗಳು. ಸಾವಿರಾರು ರೂಪಾಯಿಯ ದಂಡವನ್ನು ಅವರು ತೆರಬೇಕಾಗುತ್ತದೆ. ಇದು ಹೀಗೇ ಮುಂದುವರಿದಲ್ಲಿ ಈ ಪ್ಲಾಸ್ಟಿಕ್ ನಿಷೇಧದ ಸುತ್ತೋಲೆಯೇ ದಂಡ ಎನಿಸುತ್ತದೆ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಮಹಿಳೆಯರು ಧೈರ್ಯ ಕಳೆದುಕೊಳ್ಳಬಾರದು

ಕೌಟುಂಬಿಕ ಕಲಹದಿಂದ ಪತಿಯು ಕುಡಿದ ಅಮಲಿನಲ್ಲಿ ಪತ್ನಿಯನ್ನು ಬರ್ಬರವಾಗಿ ಹತ್ಯೆ ಮಾಡಿರುವುದು ಮೈಸೂರು ತಾಲ್ಲೂಕು ಚೆಟ್ಟನಹಳ್ಳಿ ಗ್ರಾಮದಿಂದ ವರದಿಯಾಗಿದೆ. ಮತ್ತೊಂದು ಪ್ರಕರಣದಲ್ಲಿ, ಪತಿಯ ಅಕ್ರಮ ಸಂಬಂಧದಿಂದ ಮನನೊಂದ ಮಹಿಳೆಯೊಬ್ಬರು, ತಮ್ಮಿಬ್ಬರು ಮಕ್ಕಳೊಂದಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಟಿ.ನರಸೀಪುರ ತಾಲ್ಲೂಕಿನ ರಾಮೇಗೌಡನಪುರದಲ್ಲಿ ನಡೆದಿದೆ. ವಿಷಮ ದಾಂಪತ್ಯಕ್ಕೆ ಸಂಬಂಧಿಸಿದ ಇಂತಹ ನೂರಾರು ಪ್ರಕರಣಗಳು ಪ್ರತಿನಿತ್ಯ ನಡೆಯುತ್ತಲೇ ಇರುತ್ತವೆ. ಮೊದಲು ನಗರಗಳಲ್ಲಿ ಹೆಚ್ಚಿಗೆ ಕಂಡುಬರುತ್ತಿದ್ದ ಇಂತಹ ಪ್ರಕರಣಗಳು ಈಗ ಸಣ್ಣ ಪುಟ್ಟ ಹಳ್ಳಿಗಳಲ್ಲೂ ನಡೆಯುತ್ತಿರುವುದು ಆತಂಕಕಾರಿಯಾಗಿದೆ. ಇಂದು ಮಹಿಳೆ ನಾನಾ ಪಾತ್ರಗಳನ್ನು ವಹಿಸಬೇಕಾಗಿದೆ. ಆಕೆ ಪುರುಷರ ಸಮ ಸಮಕ್ಕೆ ದುಡಿಯುತ್ತಿರುವುದರಿಂದ, ಅನೇಕ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕೆಲಸಕ್ಕೆ ಹೋಗುವ ತಮ್ಮ ಹೆಂಡತಿ ಮೇಲೆ ಕೆಲವು ಗಂಡಸರು ಅನುಮಾನ ಪಡುವುದುಂಟು. ಇನ್ನು ಅಕ್ರಮ ಸಂಬಂಧದಂತಹ ವಿಚಾರಗಳು ಸಹ ದಂಪತಿಗಳ ನಡುವೆ ಕಲಹಕ್ಕೆ ಕಾರಣವಾಗಬಹುದು.

ಹೆಂಡತಿ ಬಗ್ಗೆ ಕೆಲವು ಗಂಡಸರು ನಿರ್ದಯೆಯಿಂದ ವರ್ತಿಸುವುದು ನಡೆಯುತ್ತಿದೆ. ಇಂತಹ ಕ್ಲಿಷ್ಟ ಸಂದರ್ಭಗಳಲ್ಲಿ ಮಹಿಳೆಯರು ಧೈರ್ಯಗುಂದದೆ, ಹತ್ತಿರದ ಪೊಲೀಸ್ ಠಾಣೆ ಅಥವಾ ಮಹಿಳಾ ಸಹಾಯವಾಣಿಯನ್ನು ಸಂಪರ್ಕಿಸಿ ದೂರು ದಾಖಲಿಸಬೇಕು. ಇಂದು ಹೆಣ್ಣು ಮಕ್ಕಳಿಗಾಗಿಯೇ ವರದಕ್ಷಿಣೆ ನಿಷೇಧ ಕಾಯ್ದೆ, ಮಹಿಳೆಯರ ಮೇಲಿನ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಸೇರಿದಂತೆ ಹಲವಾರು ಕಾಯ್ದೆಗಳಿವೆ. ಇದರ ಜೊತೆಗೆ ಮಹಿಳೆಯರಿಗಾಗಿಯೇ ವಿಶೇಷ ಪೊಲೀಸ್ ಠಾಣೆಗಳಿವೆ. ಪ್ರತಿಯೊಂದು ರಾಜ್ಯದಲ್ಲೂ ಮಹಿಳಾ ಆಯೋಗಗಳಿವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಹಿಳಾ ಸಾಂತ್ವನ ಕೇಂದ್ರಗಳಿವೆ. ಉಚಿತ ಕಾನೂನು ನೆರವಿನ ಸೌಲಭ್ಯವಿದೆ. ಹಾಗೆಯೇ ಶೋಷಿತ ಮಹಿಳೆಯರಿಗೆ ಅನೇಕ ಸ್ವಯಂಸೇವಾ ಸಂಸ್ಥೆಗಳು ನೆರವು ಕಲ್ಪಿಸುತ್ತಿವೆ. ಮಹಿಳೆಯರು ಸಂಕಷ್ಟದ ಪರಿಸ್ಥಿತಿಯಲ್ಲಿ ಯಾವುದೇ ಕಾರಣಕ್ಕೂ ಆತ್ಮಹತ್ಯೆಗೆ ಮುಂದಾಗದೆ, ಶೋಷಣೆ ಮಾಡುವವರ ವಿರುದ್ಧ ಕಾನೂನಿನ ಮೊರೆ ಹೋಗುವುದು ಒಳ್ಳೆಯದು.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸುರಕ್ಷಿತ ಕಾರುಗಳಿಗಾಗಿ ಭಾರತ್–ಎನ್‌ಸಿಎಪಿ ‘ಕ್ರ್ಯಾಷ್ ಟೆಸ್ಟ್’



ಪ್ರಜಾವಾಣಿ ವಾರ್ತೆ

ಭಾರತದಲ್ಲಿ ಮಾರಾಟವಾಗುವ ಕಾರುಗಳನ್ನು ಕಡ್ಡಾಯವಾಗಿ ಕ್ರ್ಯಾಷ್ ಟೆಸ್ಟ್‌ಗೆ ಒಳಪಡಿಸುವ ಸಂಬಂಧ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು, ‘ಭಾರತ್–ನ್ಯೂ ಕಾರ್ ಅಸೆಸ್‌ಮೆಂಟ್ ಪ್ರೋಗ್ರಾಂ–ಬಿಎನ್‌ಸಿಎಪಿ ಕರಡು ಅಧಿಸೂಚನೆಯನ್ನು ಹೊರಡಿಸಿದೆ’. ಈ ಅಧಿಸೂಚನೆಗೆ ಸಾರ್ವಜನಿಕರ ಆಕ್ಷೇಪಗಳನ್ನು ಆಹ್ವಾನಿಸಲಾಗಿದೆ.

ಬಿ–ಎನ್‌ಸಿಎಪಿ ಜಾರಿಗೆ ಬಂದರೆ, ದೇಶದಲ್ಲಿ ಮಾರಾಟವಾಗುವ ಕಾರುಗಳನ್ನು ಕ್ರ್ಯಾಷ್ ಟೆಸ್ಟ್‌ಗೆ ಒಳಪಡಿಸಬೇಕಾಗುತ್ತದೆ. ಕ್ರ್ಯಾಷ್ ಟೆಸ್ಟ್‌ನಲ್ಲಿ ಅವುಗಳು ಪಡೆದ ರೇಟಿಂಗ್ ಅನ್ನು ಪ್ರದರ್ಶಿಸುವುದು ಕಡ್ಡಾಯವಾಗಲಿದೆ. ಜಗತ್ತಿನ ಹಲವೆಡೆ ಈಗಾಗಲೇ ಜಾರಿಯಲ್ಲಿರುವ ಗ್ಲೋಬಲ್ ಎನ್‌ಸಿಎಪಿ, ಯೂರೊ ಎನ್‌ಸಿಎಪಿ ಮತ್ತು ಆಸಿಯಾನ್ ಎನ್‌ಸಿಎಪಿಗಳಿಗಿಂತ ಭಾರತ್‌–ಎನ್‌ಸಿಎಪಿಯಲ್ಲಿ ಕೆಲವು ನಿಯಮಗಳನ್ನು ಕಠಿಣಗೊಳಿಸಲಾಗಿದೆ. ಅದರೆ, ಕೆಲವು ಮಹತ್ವದ ನಿಯಮಗಳನ್ನು ಕೈಬಿಡಲಾಗಿದೆ. 2023ರ ಏಪ್ರಿಲ್ 1ರಿಂದ ಭಾರತ್ ಎನ್‌ಸಿಎಪಿಯನ್ನು ಜಾರಿಗೆ ತರಲು ಸಚಿವಾಲಯವು ಸಿದ್ಧತೆ ನಡೆಸಿದೆ.

ದೇಶದಲ್ಲಿ ಮಾರಾಟವಾಗುವ ಜನಪ್ರಿಯ ಕಾರುಗಳಿಗೆ ಕ್ರ್ಯಾಷ್ ಟೆಸ್ಟ್ ಅನ್ನು ಕಡ್ಡಾಯಗೊಳಿಸಲಾಗುತ್ತದೆ ಎಂದು ಕರಡು ಅಧಿಸೂಚನೆಯಲ್ಲಿ ಹೇಳಲಾಗಿದೆ. ಕ್ರ್ಯಾಷ್ ಟೆಸ್ಟ್‌ನಲ್ಲಿ ಕಾರುಗಳು ಪಡೆಯುವ ರೇಟಿಂಗ್ ಅನ್ನು ಪ್ರದರ್ಶಿಸುವುದನ್ನು ಕಡ್ಡಾಯಗೊಳಿಸಲು ಸಿದ್ಧತೆ ನಡೆದಿದೆ. ಆದರೆ ಯೂರೊ ಎನ್‌ಸಿಎಪಿ, ಆಸ್ಟ್ರೇಲಿಯಾ ಎನ್‌ಸಿಎಪಿಗಳಲ್ಲಿ ಇರುವಂತೆ ಕಾರುಗಳಿಗೆ ಕನಿಷ್ಠ ರೇಟಿಂಗ್ ಅನ್ನು ಕಡ್ಡಾಯಗೊಳಿಸುವ ಉಲ್ಲೇಖ ಭಾರತ್ –ಎನ್‌ಸಿಎಪಿ ಕರಡು ಅಧಿಸೂಚನೆಯಲ್ಲಿ ಇಲ್ಲ.

ಹೀಗಾಗಿ ಗ್ರಾಹಕರು ತಾವು ತೆಗೆದುಕೊಳ್ಳುವ ಕಾರುಗಳು ಎಷ್ಟು ಸುರಕ್ಷಿತ ಎಂದು ತಿಳಿದುಕೊಳ್ಳಬಹುದೇ ಹೊರತು, ಸುರಕ್ಷಿತವಲ್ಲದ ಕಾರುಗಳ ಮಾರಾಟವನ್ನು ಸರ್ಕಾರವು ನಿಷೇಧಿಸುತ್ತಿಲ್ಲ. ಸುರಕ್ಷಿತ ಕಾರುಗಳನ್ನು ಕೊಳ್ಳಬೇಕೇ ಅಥವಾ ಕಡಿಮೆ ರೇಟಿಂಗ್ ಇರುವ ಕಾರನ್ನು ಖರೀದಿಸಬೇಕೇ ಎಂಬುದು ಗ್ರಾಹಕರಿಗೆ ಬಿಟ್ಟ ಆಯ್ಕೆಯಾಗುತ್ತದೆ.

ಯಾವುದಕ್ಕೆಲ್ಲಾ ಅನ್ವಯ

- ಭಾರತದಲ್ಲಿ ಮಾರಾಟವಾಗುವ ಎಲ್ಲಾ ಪ್ರಯಾಣಿಕರ ಕಾರುಗಳಿಗೆ ಭಾರತ್–ಎನ್‌ಸಿಎಪಿ ಕ್ರ್ಯಾಷ್ ಟೆಸ್ಟ್ ಅನ್ವಯವಾಗುತ್ತದೆ. ಆದರೆ, ಇದಕ್ಕಾಗಿ ಕೆಲವು ಷರತ್ತುಗಳನ್ನು ಕರಡು ಅಧಿಸೂಚನೆಯಲ್ಲಿ ನಿಗದಿ ಮಾಡಲಾಗಿದೆ
- ಗರಿಷ್ಠ ಎಂಟು ಸೀಟುಗಳು ಮತ್ತು ಅದಕ್ಕಿಂತ ಕಡಿಮೆ ಸೀಟಿನ ಸಾಮರ್ಥ್ಯದ ಕಾರುಗಳಿಗೆ ಮಾತ್ರ ಕಡ್ಡಾಯ ಕ್ರ್ಯಾಷ್ ಟೆಸ್ಟ್ ಅನ್ವಯವಾಗುತ್ತದೆ
- ಒಟ್ಟು ತೂಕ 3.5 ಟನ್‌ಗಿಂತ ಕಡಿಮೆ ಇರುವ ಕಾರುಗಳನ್ನು ಮಾತ್ರ ಬಿ–ಎನ್‌ಸಿಎಪಿ ಅಡಿ ಕ್ರ್ಯಾಷ್ ಟೆಸ್ಟ್‌ಗೆ ಒಳಪಡಿಸಲಾಗುತ್ತದೆ
- ಕ್ಯಾಲೆಂಡರ್ ವರ್ಷವೊಂದರಲ್ಲಿ 30,000ಕ್ಕಿಂತಲೂ ಹೆಚ್ಚು ಘಟಕಗಳು ಮಾರಾಟವಾಗುವ ಮಾದರಿಯ ಕಾರುಗಳು ಕಡ್ಡಾಯವಾಗಿ ಕ್ರ್ಯಾಷ್ ಟೆಸ್ಟ್‌ಗೆ ಹೋಗಬೇಕಾಗುತ್ತದೆ. ಕನಿಷ್ಠ ಇಷ್ಟು ಸಂಖ್ಯೆಯಲ್ಲಿ ಮಾರಾಟವಾಗುವ ಕಾರುಗಳನ್ನು ‘ಜನಪ್ರಿಯ ಮಾಡೆಲ್’ ಎಂದು ಪರಿಗಣಿಸಲಾಗುತ್ತದೆ
- ಈ ಯಾವ ಷರತ್ತಿನ ಅಡಿ ಬರದೇ ಇರುವ ಕಾರುಗಳನ್ನು ತಯಾರಕ ಕಂಪನಿಯು ಸ್ವಯಂ ಪ್ರೇರಿತವಾಗಿ ಕ್ರ್ಯಾಷ್ ಟೆಸ್ಟ್‌ಗೆ ನೀಡಬಹುದು
- ಈ ಷರತ್ತುಗಳು ಅನ್ವಯವಾಗದೇ ಇರುವ ಕಾರುಗಳನ್ನೂ ಕ್ರ್ಯಾಷ್ ಟೆಸ್ಟ್‌ಗೆ ಒಳಪಡಿಸುವಂತೆ, ಸಾರ್ವಜನಿಕ ಹಿತಾಸಕ್ತಿಯ ಅಡಿಯಲ್ಲಿ ಸರ್ಕಾರವೇ ಸೂಚನೆ ನೀಡಬಹುದು



ಪರೀಕ್ಷೆಗೆ ಕಾರುಗಳ ಆಯ್ಕೆ ಹೇಗೆ?

ಭಾರತದಲ್ಲಿ ಮಾರಾಟವಾಗುವ, ಬಿ–ಎನ್‌ಸಿಎಪಿ ಷರತ್ತುಗಳಿಗೆ ಒಳಪಡುವ ಜನಪ್ರಿಯ ಮಾದರಿಯ ಕಾರುಗಳನ್ನು ಕ್ರ್ಯಾಷ್ ಟೆಸ್ಟ್‌ಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಹೀಗೆ ಕ್ರ್ಯಾಷ್ ಟೆಸ್ಟ್‌ಗೆ ಆಯ್ಕೆ ಮಾಡಿಕೊಳ್ಳುವ ಕಾರುಗಳನ್ನು ಹೇಗೆ ಆಯ್ಕೆ ಮಾಡಿಕೊಳ್ಳಬೇಕು ಎಂಬುದಕ್ಕೂ ಪ್ರತ್ಯೇಕ ನಿಯಮಗಳನ್ನು ರೂಪಿಸಲಾಗಿದೆ. ಕರಡು ಅಧಿಸೂಚನೆಯಲ್ಲಿ ಈ ನಿಯಮಗಳನ್ನು ವಿವರಿಸಲಾಗಿದೆ.

- ‘ಜನಪ್ರಿಯ ಮಾದರಿ’ಯ ಬೇಸ್ ಅವತರಣಿಕೆಯ ಕಾರುಗಳನ್ನಷ್ಟೇ ಕ್ರ್ಯಾಷ್ ಟೆಸ್ಟ್‌ಗೆ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಬೇಸ್ ಅವತರಣಿಕೆಯಲ್ಲಿ ಕಡ್ಡಾಯ ಸುರಕ್ಷತಾ ಸವಲತ್ತುಗಳಾದ ಚಾಲಕ ಮತ್ತು ಪ್ರಯಾಣಿಕರ ಏರ್‌ಬ್ಯಾಗ್, ಆ್ಯಂಟಿ ಲಾಕಿಂಗ್ ಬ್ರೇಕಿಂಗ್ ಸಿಸ್ಟಂ (ಎಬಿಎಸ್), ಎಲೆಕ್ಟ್ರಿಕಲ್ ಬ್ರೇಕ್ ಡಿಸ್ಟ್ರಿಬ್ಯೂಷನ್ (ಇಬಿಡಿ), ಮೂರು ಪಾಯಿಂಟ್‌ಗಳ ಸೀಟ್‌ಬೆಲ್ಟ್... ಇಂತಹ ಸವಲತ್ತುಗಳು ಇರಬೇಕು
- ಮಾದರಿ ಮತ್ತು ಅವತರಣಿಕೆಯನ್ನು ಗುರುತಿಸಿದ ನಂತರ ಕಂಪನಿಯ ತಯಾರಿಕಾ/ಜೋಡಣಾ ಘಟಕದಿಂದ ನೇರವಾಗಿ ಕಾರನ್ನು ಕ್ರಾಶ್ ಟೆಸ್ಟ್‌ಗೆ ತೆಗೆದುಕೊಂಡು ಹೋಗಲಾಗುತ್ತದೆ. ಇದಕ್ಕಾಗಿ ತಯಾರಿಕಾ ಕಂಪನಿಯು 50 ಕಾರುಗಳನ್ನು ಒದಗಿಸಬೇಕು. ಅದರಲ್ಲಿ ಒಂದು ಕಾರನ್ನು ಪರೀಕ್ಷಾ ಸಂಸ್ಥೆಯು ಆಯ್ಕೆ ಮಾಡಿ ತೆಗೆದುಕೊಂಡು ಹೋಗುತ್ತದೆ
- ಗ್ರಾಹಕರಿಗೆ ಮಾರಾಟ ಮಾಡುವ ಅವತರಣಿಕೆ ಮತ್ತು ಕ್ರ್ಯಾಷ್ ಟೆಸ್ಟ್‌ಗೆ ಒಳಪಡಿಸುವ ಅವತರಣಿಕೆಯ ಮಧ್ಯೆ ಯಾವುದೇ ವ್ಯತ್ಯಾಸ ಇರುವಂತಿಲ್ಲ. ಕ್ರ್ಯಾಷ್ ಟೆಸ್ಟ್‌ಗೆಂದು ಮಾತ್ರ ಕಂಪನಿಗಳು ತಮ್ಮ ಕಾರುಗಳನ್ನು ಹೆಚ್ಚು ಸದೃಢಪಡಿಸುವುದು ನಿಯಮದ ಉಲ್ಲಂಘನೆಯಾಗುತ್ತದೆ
- ಬೇಸ್ ಅವತರಣಿಕೆಗಳನ್ನು ಹೊರತುಪಡಿಸಿ, ಬೇರೆ ಅವತರಣಿಕೆಗಳನ್ನೂ ಕಂಪನಿಗಳು ಸ್ವಯಂ ಪ್ರೇರಿತವಾಗಿ ಕ್ರ್ಯಾಷ್ ಟೆಸ್ಟ್‌ಗೆ ನೀಡಬಹುದು
- ಒಂದೇ ಪ್ಲಾಟ್‌ಫಾರಂ, ಎಂಜಿನ್–ಗಿಯರ್‌ಬಾಕ್ಸ್ ಮತ್ತು ಸುರಕ್ಷತಾ ಸವಲತ್ತುಗಳು ಇರುವ ಆದರೆ ಬೇರೆ ಬ್ರ್ಯಾಂಡ್/ಬ್ಯಾಡ್ಜ್‌ನಲ್ಲಿ ಮಾರಾಟವಾಗುವ ಕಾರುಗಳನ್ನು ‘ಕಾರ್ಪೊರೇಟ್ ಟ್ವಿನ್ಸ್’ ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ಒಂದು ಬ್ರ್ಯಾಂಡ್‌ನ ಕಾರು ಕ್ರ್ಯಾಷ್ ಟೆಸ್ಟ್‌ಗೆ ಒಳಪಟ್ಟರೆ ಸಾಕು, ಅದರ ರೇಟಿಂಗ್, ಆ ಕಾರಿನ ಅವಳಿ ಬ್ರ್ಯಾಂಡ್‌ಗೂ ಅನ್ವಯವಾಗುತ್ತದೆ. (ಉದಾಹರಣೆಗೆ ಮಾರುತಿ ಸುಜುಕಿಯ ಬಲೆನೊ ಮತ್ತು ಟೊಯೋಟಾ ಗ್ಲಾನ್ಝಾ)

ಪಾದಚಾರಿ ಸುರಕ್ಷತೆಗೆ ಕೊಕ್



ಯೂರೊ ಎನ್‌ಸಿಎಪಿಯಲ್ಲಿ ಕಾರುಗಳ ಕ್ರ್ಯಾಷ್ ಟೆಸ್ಟ್ ನಡೆಸುವ ವೇಳೆ, ಪಾದಚಾರಿಗಳ ಸುರಕ್ಷತೆಯನ್ನೂ ಒಂದು ಪ್ರಮುಖ ಮಾನದಂಡವಾಗಿ ಬಳಸಲಾಗುತ್ತದೆ. ಆದರೆ, ಕೇಂದ್ರ ಸಾರಿಗೆ ಸಚಿವಾಲಯವು ರೂಪಿಸಿರುವ ಭಾರತ್–ಎನ್‌ಸಿಎಪಿ ಕರಡು ಅಧಿಸೂಚನೆಯಲ್ಲಿ ಪಾದಚಾರಿ ಸುರಕ್ಷತೆ (ಪೆಡಸ್ಟ್ರಿಯನ್ ಸೇಫ್ಟಿ ಟೆಸ್ಟ್) ಪರೀಕ್ಷೆಯನ್ನು ಕೈಬಿಡಲಾಗಿದೆ.

ದೇಶದಲ್ಲಿ ಪ್ರತಿ ವರ್ಷ ಅಪಘಾತಗಳಿಂದ ಸಂಭವಿಸುವ ಸಾವುಗಳಲ್ಲಿ ಪಾದಚಾರಿಗಳದ್ದು ದೊಡ್ಡ ಸಂಖ್ಯೆ. 2020ರಲ್ಲಿ ದೇಶದಲ್ಲಿ ಸಂಭವಿಸಿದ ಅಪಘಾತಗಳಲ್ಲಿ ಒಟ್ಟು 1.32 ಲಕ್ಷ ಜನರು ಮೃತಪಟ್ಟಿದ್ದಾರೆ. ಇದರಲ್ಲಿ 23,483 ಜನರು ಪಾದಚಾರಿಗಳು. ಇದು ಒಟ್ಟು ಅಪಘಾತದ ಸಾವುಗಳ ಶೇ 17ರಷ್ಟಾಗುತ್ತದೆ. ಆದರೆ, ಪಾದಚಾರಿಗಳ ಸುರಕ್ಷತೆಗೆ ಆದ್ಯತೆ ನೀಡುವ ನಿಯಮಗಳನ್ನೇ ಭಾರತ್–ಎನ್‌ಸಿಎಪಿಯಲ್ಲಿ ಕೈಬಿಡಲಾಗಿದೆ.

ಪಾದಚಾರಿಗೆ ಕಾರು ಡಿಕ್ಕಿಯಾದರೆ, ಅವರ ಕಾಲಿಗೆ ಹೆಚ್ಚು ಹಾನಿಯಾಗುವುದನ್ನು ತಡೆಯವಂತೆ ಬಂಪರ್ ವಿನ್ಯಾಸ ಮಾಡಿದ್ದರೆ ಕ್ರ್ಯಾಷ್ ಟೆಸ್ಟ್‌ನಲ್ಲಿ ಕಾರುಗಳಿಗೆ ಹೆಚ್ಚು ರೇಟಿಂಗ್ ದೊರೆಯುತ್ತದೆ. ಜತೆಗೆ, ಪಾದಚಾರಿಗೆ ಜೋರಾಗಿ ಅಪ್ಪಳಿಸಿದಾಗ ಅವರು ಕಾರಿನ ಬಾನೆಟ್ ಮೇಲೆ ಬೀಳುವಂತೆ ಬಂಪರ್ ಮತ್ತು ಬಾನೆಟ್ ವಿನ್ಯಾಸ ಮಾಡಿರಬೇಕು. ಆಗ ಹೆಚ್ಚು ಅಂಕಗಳು ದೊರೆಯುತ್ತವೆ. ಇಂತಹ ಅಪಘಾತದ ಸಂದರ್ಭದಲ್ಲಿ ಪಾದಚಾರಿ ಕಾರಿನ ಕೆಳಭಾಗಕ್ಕೆ ಸಿಲುಕಿದರೆ, ಕಾರಿಗೆ ದೊರೆಯುವ ಕ್ರ್ಯಾಷ್ ರೇಟಿಂಗ್ ಕಡಿಮೆಯಾಗುತ್ತದೆ. ಈ ನಿಯಮಗಳನ್ನು ಭಾರತ್–ಎನ್‌ಸಿಎಪಿಯಲ್ಲಿ ಕೈಬಿಡುವ ಮೂಲಕ ಪಾದಚಾರಿಗಳ ಸುರಕ್ಷತೆಯನ್ನು ಕಡೆಗಣಿಸಲಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಎನ್‌ಸಿಎಪಿ ಪರಿಕಲ್ಪನೆ

ಕಾರುಗಳ ಸುರಕ್ಷತೆ ವಿಚಾರವು ಆದ್ಯತೆ ಪಡೆದ ಮೇಲೆ ಎನ್‌ಸಿಎಪಿ (ನ್ಯೂ ಕಾರ್ ಅಸೆಸ್‌ಮೆಂಟ್ ಪ್ರೋಗ್ರಾಂ) ಪರಿಕಲ್ಪನೆ ಮಹತ್ವ ಪಡೆದುಕೊಂಡಿತು. ಕಾರುಗಳ ಸುರಕ್ಷತೆಯನ್ನು ಪರೀಕ್ಷಿಸುವ ಮತ್ತು ಸುರಕ್ಷತೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಯತ್ನ 1980ರಲ್ಲಿ ಯೂರೋಪ್‌ನಲ್ಲಿ ಆಯಿತು. ನಂತರದ ದಿನಗಳಲ್ಲಿ ಕಾರುಗಳ ಸುರಕ್ಷತೆ ತಿಳಿಸಲು ಕ್ರ್ಯಾಷ್ ಟೆಸ್ಟ್ ಮಾರ್ಗವನ್ನು ಕಂಡುಕೊಳ್ಳಲಾಯಿತು. 80ರ ದಶಕದಲ್ಲಿ ಆರಂಭವಾದ ಈ ಯತ್ನಕ್ಕೆ ಯೂರೋ–ಎನ್‌ಸಿಎಪಿಯ ರೂಪ ದೊರೆತಿದ್ದು 1998ರಲ್ಲಿ. ವಿವಿಧ ದೇಶಗಳಲ್ಲೂ ಇಂತಹ ಯತ್ನಗಳು ಆರಂಭವಾದವು. ಆಸ್ಟ್ರೇಲಿಯನ್ ಎನ್‌ಸಿಎಪಿ, ಯೂರೊ ಎನ್‌ಸಿಎಪಿ, ಜಪಾನ್ ಎನ್‌ಸಿಎಪಿ, ಆಸಿಯಾನ್ ಎನ್‌ಸಿಎಪಿ, ಚೀನಾ ಎನ್‌ಸಿಎಪಿ, ಕೊರಿಯನ್ ಎನ್‌ಸಿಎಪಿ ಮತ್ತು ಲ್ಯಾಟಿನ್ ಎನ್‌ಸಿಎಪಿ ಈಗ ಅಸ್ತಿತ್ವದಲ್ಲಿವೆ. ಭಾರತದಲ್ಲಿ ಇದೀಗ ಪ್ರತ್ಯೇಕ ಎನ್‌ಸಿಎಪಿ ಅಸ್ತಿತ್ವಕ್ಕೆ ಬರಲು ಸಜ್ಜಾಗಿದೆ.


ಗ್ಲೋಬಲ್ ಎನ್‌ಸಿಎಪಿ: ಬ್ರಿಟನ್‌ನಲ್ಲಿ ‘ಗ್ಲೋಬಲ್ ಎನ್‌ಸಿಎಪಿ’ ಎಂಬ ಸ್ವತಂತ್ರ ಸಂಸ್ಥೆ 2011ರಲ್ಲಿ ಅಸ್ತಿತ್ವಕ್ಕೆ ಬಂದಿತು. ವಿವಿಧ ದೇಶಗಳ ಎನ್‌ಸಿಎಪಿಗಳ ಜೊತೆ ಸಹಕಾರ ಹಾಗೂ ಸಮನ್ವಯ ಸಾಧಿಸುವ ಉದ್ದೇಶದೊಂದಿಗೆ ಗ್ಲೋಬಲ್ ಎನ್‌ಸಿಎಪಿ ಜನ್ಮತಳೆಯಿತು. ವಾಹನಗಳ ಕ್ರ್ಯಾಷ್ ಟೆಸ್ಟ್ ಹಾಗೂ ಅದರ ಫಲಿತಾಂಶವನ್ನು ಕಾರು ಮಾರುಕಟ್ಟೆಗೆ ಒದಗಿಸುವುದು ಇದರ ಪ್ರಾಥಮಿಕ ಉದ್ದೇಶ. ‘ಸೇಫರ್ ಕಾರ್ಸ್ ಫಾರ್ ಇಂಡಿಯಾ’, ಹಾಗೂ ‘ಸೇಫರ್ ಕಾರ್ಸ್ ಫಾರ್ ಆಫ್ರಿಕಾ’ ಎಂಬ ಪ್ರಮುಖ ಅಭಿಯಾನಗಳನ್ನು ಗ್ಲೋಬಲ್ ಎನ್‌ಸಿಎಪಿ ಹಮ್ಮಿಕೊಂಡಿದೆ.

ಪ್ರತ್ಯೇಕ ಎನ್‌ಸಿಎಪಿ ಹೊಂದಿಲ್ಲದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಾದ ಭಾರತ, ಆಫ್ರಿಕಾದಂತಹ ದೇಶಗಳಲ್ಲಿ ಗ್ಲೋಬಲ್ ಎನ್‌ಸಿಎಪಿ ಅಡಿ ಕ್ರ್ಯಾಷ್ ಟೆಸ್ಟ್ ನಡೆಸಲಾಗುತ್ತದೆ. ಗೊತ್ತುಪಡಿಸಿದ ಪ್ರತೀ ಮಾನದಂಡಗಳಿಗೂ ಅಂಕಗಳನ್ನು ನಿಗದಿಪಡಿಸಲಾಗುತ್ತದೆ. ಗ್ರಾಹಕರನ್ನು ಸೆಳೆಯಲು ಭಾರತದ ಕಾರು ತಯಾರಿಕಾ ಕಂಪನಿಗಳು ಕಡಿಮೆ ಬೆಲೆಗೆ ಕಾರುಗಳನ್ನು ಮಾರಾಟ ಮಾಡುತ್ತಿದ್ದವು. ಆದರೆ, ಕಾರು ಬಳಕೆದಾರರ ಸುರಕ್ಷತೆಗೆ ಒತ್ತು ನೀಡಲಾಗಿದ್ದು, ಏರ್‌ಬ್ಯಾಗ್, ಎಬಿಸಿ ಮೊದಲಾದ ಸುರಕ್ಷತಾ ಸವಲತ್ತುಗಳನ್ನು ಕಡ್ಡಾಯ ಮಾಡಲಾಗಿದೆ.

ಯೂರೊ ಎನ್‌ಸಿಎಪಿ: ಗ್ಲೋಬಲ್ ಎನ್‌ಸಿಎಪಿಗೆ ಹೋಲಿಸಿದರೆ, ಯೂರೊ ಎನ್‌ಸಿಎಪಿ ಉತ್ಕೃಷ್ಟ ದರ್ಜೆಯ ಕ್ರ್ಯಾಷ್ ಟೆಸ್ಟ್‌ಗೆ ಹೆಸರಾಗಿದೆ. ಇಲ್ಲಿ ನಾಲ್ಕು ರೀತಿಯ ಕ್ರ್ಯಾಷ್ ಟೆಸ್ಟ್‌ಗಳನ್ನು ನಡೆಸಲಾಗುತ್ತದೆ. ಪಾದಚಾರಿಗಳ ಸುರಕ್ಷತಾ ಪರೀಕ್ಷೆಗಳನ್ನು ನಡೆಸುವುದು ಇಲ್ಲಿಯ ವಿಶೇಷತೆ. ಗ್ಲೋಬಲ್ ಎನ್‌ಸಿಎಪಿಯಲ್ಲಿ ಗರಿಷ್ಠ ರೇಟಿಂಗ್ ಪಡೆಯುವ ಕಾರೊಂದು ಯೂರೊ ಎನ್‌ಸಿಪಿಯಲ್ಲಿ ಅಷ್ಟೇ ರೇಟಿಂಗ್ ಪಡೆಯದಿರಬಹುದು. ಅಂದರೆ, ಎರಡೂ ಎನ್‌ಸಿಪಿಗಳ ಮಾನದಂಡಗಳಲ್ಲಿ ವ್ಯತ್ಯಾಸವಿರುತ್ತದೆ.

ಆಸಿಯಾನ್ ಎನ್‌ಸಿಎಪಿ: ಮಲೇಷ್ಯಾದ ರಸ್ತೆ ಸುರಕ್ಷತೆ ಸಂಶೋಧನಾ ಸಂಸ್ಥೆ ಮತ್ತು ಗ್ಲೋಬಲ್ ಎನ್‌ಸಿಎಪಿ ಸಹಯೋಗದಲ್ಲಿ 2011ರಲ್ಲಿ ಆಸಿಯಾನ್ ಎನ್‌ಸಿಎಪಿ ಅಸ್ತಿತ್ವಕ್ಕೆ ಬಂದಿತು. ಮಲೇಷ್ಯಾ, ಸಿಂಗಪುರ, ಥಾಯ್ಲೆಂಡ್ ಹಾಗೂ ಫಿಲಿಪ್ಪೀನ್ಸ್‌ನ ಆಟೊಮೊಬೈಲ್ ಸಂಘಟನೆಗಳು ಬೆಂಬಲಿಸಿವೆ. ಈಗ ಎರಡು ರೀತಿಯ ಕ್ರ್ಯಾಷ್ ಟೆಸ್ಟ್‌ಗಳನ್ನು ನಡೆಸಲಾಗುತ್ತಿದೆ.

ಆಧಾರ: ‘ಭಾರತ್–ನ್ಯೂ ಕಾರ್ ಅಸೆಸ್‌ಮೆಂಟ್ ಪ್ರೋಗ್ರಾಂ’ ಕರಡು ಅಧಿಸೂಚನೆ, ಪಿಟಿಐ, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಟ್ವೀಟ್‌ಗಳು, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊನ ‘ಭಾರತದಲ್ಲಿ ಅಪಘಾತ–2020’ ವರದಿ, ಚಿತ್ರಕೃಪೆ: ಗ್ಲೋಬಲ್ ಮತ್ತು ಯೂರೊ ಎನ್‌ಸಿಎಪಿ




ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 160

ಶಿವ ಸತೀದೇವಿ ದಾಂಪತ್ಯಜೀವನ

ಶಿವ-ಸತೀದೇವಿಯ ವಿವಾಹವೃತ್ತಾಂತ ಕೇಳಿದ ನಾರದ, ‘ನನಗೆ ಇನ್ನೂ ಆ ಶಿವಪಾರ್ವತಿಯರ ಶುಭವಾದ ಚರಿತ್ರೆಯನ್ನು ಕೇಳಬೇಕೆಂಬ ಇಚ್ಛೆ ಇದೆ’ ಎಂದ.

ಆಗ ಬ್ರಹ್ಮ ‘ಸೌಮ್ಯನಾದ ನಾರದಮುನಿ, ನೀನು ಶಿವನಲ್ಲಿ ತುಂಬಾ ಭಕ್ತಿಯುಳ್ಳವನು. ಆದಕಾರಣ ನೀನು ಶಿವಲೀಲೆಗಳನ್ನು ಹೇಳುವಂತೆ ನನ್ನನ್ನು ಪ್ರೇರಿಸುತ್ತಲಿರುವೆ. ಮೂರು ಲೋಕಗಳಿಗೆ ಮಾತೆಯಾದ ಸತೀದೇವಿಯನ್ನು ಮದುವೆಯಾಗಿ ಶಂಕರ ತನ್ನ ಸ್ಥಾನಕ್ಕೆ ತೆರಳಿದ ಮೇಲೆ ಮುಂದೆ ಏನಾಯಿತೆಂಬುದನ್ನು ಹೇಳುವೆ, ಭಕ್ತಿಯಿಂದ ಕೇಳು’ ಎಂದು ಶಿವಕಥೆಯನ್ನು ಮುಂದುವರೆಸುತ್ತಾನೆ.

ಶಿವನು ಸತೀದೇವಿಯೊಂದಿಗೆ ಕೈಲಾಸಪರ್ವತಕ್ಕೆ ಬಂದ ನಂತರ ಗಣಗಳಾದ ನಂದಿಕೇಶ್ವರ ಮುಂತಾದವರನ್ನು ಬೇರೆ ಬೇರೆ ಗಿರಿಗುಹೆಗಳಿಗೆ ಕಳುಹಿಸಿದ. ನಾನು ಯಾವಾಗ ನಿಮ್ಮನ್ನು ಸ್ಮರಿಸುವೆನೋ, ಆಗ ನನ್ನ ಬಳಿಗೆ ಬನ್ನಿ ಎಂದ. ಶಿವಗಣಗಳೆಲ್ಲವೂ ಹೋದ ನಂತರ ಈಶ್ವರನು ಸತೀದೇವಿಯೊಡನೆ ಏಕಾಂತದಲ್ಲಿ ಸುಖಾಸಕ್ತನಾದ. ಪರಮೇಶ್ವರನು ಹಿಮಗಿರಿಯಲ್ಲಿರುವ ರಮ್ಯವಾದ ಲತಾಗೃಹಗಳಲ್ಲಿ ಸತೀದೇವಿಯೊಡನೆ ವಿಹರಿಸುತ್ತಲಿರುವಾಗ ತನ್ನಿಚ್ಛೆಯಂತೆ ಮನ್ಮಥನನ್ನು ಸ್ಮರಿಸಿದ.

ಆಗ ಮನ್ಮಥನು ಶಂಕರನ ಮನೋಭಿಲಾಷೆಯಂತೆ ಹಿಮಪರ್ವತವನ್ನು ಶೃಂಗಾರಮಯಗೊಳಿಸಿದ. ವಸಂತನೂ ಅಲ್ಲಿಗೆ ಬಂದು ತನ್ನ ಸಮೃದ್ಧಿಯನ್ನು ಆ ಪರ್ವತ ಪ್ರದೇಶಗಳಲ್ಲೆಲ್ಲ ಹರಡಿದ. ಆಗ ಮರಗಳಲ್ಲಿ, ಲತೆಗಳಲ್ಲಿ ಹೂವರಳಿದವು. ಸರೋವರಗಳಲ್ಲಿ ತಾವರೆಗಳು ನಳನಳಿಸಿದವು. ತಾವರೆಗಳಲ್ಲಿ ದುಂಬಿಗಳು ಮುತ್ತಿ ಮಧುವನ್ನು ಹೀರತೊಡಗಿದುವು. ವಸಂತಋತುವು ಅಲ್ಲೆಲ್ಲಾ ಹರಡಿದ್ದರಿಂದ ಮಲಯಪರ್ವತದ ಸುಗಂಧವಾಯುವು ಮೆಲ್ಲನೆ ಬೀಸತೊಡಗಿತು. ಸಂಧ್ಯಾಕಾಲದ ಅರ್ಧೋದಿತ ಚಂದ್ರನಂತೆ ಕೆಂಪಾದ ಮುತ್ತುಗದ ಹೂಗಳು ಮನ್ಮಥನ ಬಾಣಗಳಂತೆ ರಾರಾಜಿಸಿದವು. ಲತೆಗಳು ಮರವನ್ನಾಶ್ರಯಿಸಿ ಪುರುಷರೊಡನೆ ಸೇರಿರುವ ಸುಂದರಿಯರಂತೆ ಶೋಭಿಸಿದವು.

ಸರಸ್ಸುಗಳಲ್ಲಿ ಸುಂದರ ತಾವರೆಗಳು ಜಲದೇವತೆಯ ಸುಂದರಮುಖದಂತೆ ಶೋಭಿಸುತ್ತಿದ್ದವು. ನಾಗಕೇಸರವೃಕ್ಷಗಳು ಚಿನ್ನದ ವರ್ಣವುಳ್ಳ ಹೂಗಳಿಂದ ಸುಂದರವಾಗಿದ್ದವು. ಲವಂಗಲತೆಯು ತನ್ನ ಸುವಾಸನೆಯಿಂದ ಮೋಹಗೊಳಿಸುತ್ತಿತ್ತು. ಬೆಂಕಿಯಂತೆ ನಸುಗೆಂಪಾದ ಮಾವಿನ ಚಿಗುರುಗಳು ಶೃಂಗಾರಪ್ರಿಯರಿಗೆ ಮನ್ಮಥನ ಪುಷ್ಪಬಾಣಗಳಂತೆ ತೋರುತ್ತಿದ್ದವು. ಅರಳಿದ ಕಮಲಗಳ ಮೇಲಿನ ನಿರ್ಮಲವಾದ ನೀರಿನ ಬಿಂದುಗಳು, ಆತ್ಮಜ್ಯೋತಿಯು ಪ್ರತಿಬಿಂಬಿಸಿದ ಮುನಿಗಳ ನಿರ್ಮಲಮನಸ್ಸುಗಳಂತೆ ರಾರಾಜಿಸುತ್ತಿದ್ದವು.

ರಾತ್ರಿಗಳು ಹಿಮದ ಮುತ್ತಿಗೆ ಇಲ್ಲದೆ ನಿರ್ಮಲವಾಗಿದ್ದವು. ಶುಭ್ರ ಆಕಾಶದಲ್ಲಿ ಚಂದ್ರಮ ಮಂದಹಾಸ ಬೀರಿದಂತೆ ಸುತ್ತಲ ವಾತಾವರಣ ತಂಪಾಗಿ ಪ್ರಕಾಶಿಸುತ್ತಿದ್ದವು. ಇಂಥ ಮನೋಹರವಾದ ವಸಂತಕಾಲದಲ್ಲಿ ಮಹಾದೇವನು ಸತೀದೇವಿಯೊಡನೆ ಬಹಳ ಕಾಲ ವಿಹರಿಸಿದ. ಶಿವನಂತೆ ಆ ಸತೀದೇವಿಯೂ ಶಿವನೊಡನೆ ಸಂತೋಷದಿಂದ ವಿಹರಿಸಿದಳು. ಸತಿಯಿಲ್ಲದೆ ಶಂಕರನಿಗೆ, ಶಂಕರನಿಲ್ಲದೆ ಸತೀದೇವಿಗೆ ಒಂದು ಕ್ಷಣಕಾಲವೂ ಬಿಟ್ಟು ಇರಲಾರದಂತೆ ಮನಸ್ಸು ಪರಸ್ಪರ ಬೆರೆತುಹೋಗಿದ್ದವು. ಶಿವ ಮತ್ತು ಸತೀದೇವಿ ಸುಖ ದಾಂಪತ್ಯಜೀವನ ನಡೆಸುತ್ತಿದ್ದರು.

ಶೃಂಗಾರದ ಸಮಯದಲ್ಲಿ ಶಿವಪ್ರಿಯೆಯಾದ ಸತಿಯು ಶಿವನಿಗೆ ಶೃಂಗಾರದ ರಸಪಾನ ಮಾಡಿಸುತ್ತಾ ವಿಹರಿಸುತ್ತಿದ್ದಳು. ಶಿವನು ಸಹ ಸುಂದರ ಪುಷ್ಪಾಹಾರಗಳನ್ನು ತನ್ನ ಕೈಯಿಂದಲೇ ಮಾಡಿ ಸತೀದೇವಿಯ ಮುಡಿಗೆ ಮುಡಿಸುತ್ತಿದ್ದ. ಅವಳ ಕಿವಿಗಳಿಗೆ ತಾನೇ ಕರ್ಣಕುಂಡಲಗಳನ್ನು ತೊಡಿಸಿ ಸಂಭ್ರಮಿಸುತ್ತಿದ್ದ. ವಸಂತನಿಂದ ಕೈಲಾಸದಲ್ಲಿ ಅರಳಿದ ಎಲ್ಲಾ ಪುಷ್ಪಗಳನ್ನು ತಂದು ಸತೀದೇವಿಯನ್ನು ಅಲಂಕರಿಸುತ್ತಿದ್ದ. ಹೀಗೆ ಅನೇಕ ಹೊಸ ಹೊಸ ಶೃಂಗಾರಚೇಷ್ಟೆಗಳನ್ನು ಮಾಡುತ್ತಾ, ಜ್ಞಾನಿಯು ಜ್ಞಾನಸ್ವರೂಪನಾದ ಆತ್ಮನಲ್ಲಿ ಸೇರಿಹೋಗುವಂತೆ ಅಥವಾ ಸಮಾಧಿಯಲ್ಲಿರುವ ಯೋಗಿಯು ಧ್ಯೇಯವಸ್ತುವಿನೊಡನೆ ಸೇರಿ ಹೋಗುವಂತೆ ಸತಿಯಲ್ಲಿ ಶಿವನು ಸೇರಿಹೋದ.

ಸತೀದೇವಿಯ ಮುಖಕಮಲದ ಸೌಂದರ್ಯದಿಂದ ಆಕರ್ಷಿಸಲ್ಪಟ್ಟ ಶಿವನು ಸರಪಣಿಗಳಿಂದ ಬಂಧಿಸಲ್ಪಟ್ಟ ಆನೆಯಂತೆ ಮಿಕ್ಕ ಯಾವ ಕಾರ್ಯಗಳನ್ನೂ ಮಾಡಲಾರದವನಾದ. ಈ ರೀತಿಯಾಗಿ ಹಿಮವತ್ಪರ್ವತದಲ್ಲಿ ಈಶ್ವರನು ಸತಿಯೊಡನೆ ವಿಹರಿಸುತ್ತಿರುವಾಗ ಇಪ್ಪತ್ತೈದು ವರ್ಷಗಳು ಇಪ್ಪತ್ತೈದು ಕ್ಷಣಗಳಂತೆ ಕಳೆದುಹೋದವು ಎಂಬಲ್ಲಿಗೆ ಶ್ರೀಶಿವಮಹಾಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದ ಇಪ್ಪತ್ತೊಂದನೆ ಅಧ್ಯಾಯ ಮುಗಿಯಿತು.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪೊಲೀಸರು ಮತ್ತು ಸಶಸ್ತ್ರ ಪಡೆ ಸಿಬ್ಬಂದಿ ಗಸ್ತು ತಿರುಗುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಪೊಲೀಸರು ಮತ್ತು ಪೊಲೀಸ್ ಠಾಣೆಯ ಮೇಲೆ ಒಂದು ಕಲ್ಲು ಬಿದ್ದರೂ, ಕಲ್ಲು ಎಸೆಯುವವರನ್ನು ಹಿಡಿದು ಅವರ ಕೈ, ಕಾಲನ್ನು ಮುರಿಯುವಂತೆ ಉತ್ತರ ಪ್ರದೇಶದ ಪೊಲೀಸರಿಗೆ ಆದೇಶ ನೀಡಲಾಗಿದೆ. ಗಲಭೆಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳದ ಪೊಲೀಸ್ ಅಧಿಕಾರಿಗಳನ್ನು ಕರ್ತವ್ಯದಿಂದ ಅಮಾನತಿನಲ್ಲಿ ಇರಿಸಲಾಗುವುದು ಎಂಬ ಮಾಹಿತಿಯನ್ನು ಈ ವಿಡಿಯೊ ಜೊತೆ ನೀಡಲಾಗಿದೆ.

‘ಈ ವಿಡಿಯೊ ಜೊತೆ ನೀಡಲಾಗಿರುವ ಮಾಹಿತಿ ಸತ್ಯಕ್ಕೆ ದೂರವಾಗಿದೆ. ಈ ಮಾಹಿತಿಯನ್ನು ಸಮರ್ಥಿಸುವಂಥ ಅಧಿಕೃತ ಪ್ರಕಟಣೆಗಾಗಿ ಹುಡುಕಿದೆವು. ಆದರೆ ಈ ಕುರಿತು ಸರ್ಕಾರ ಹೊರಡಿಸಿರುವ ಅಧಿಕೃತ ಆದೇಶದ ಪ್ರಕಟಣೆ ನಮಗೆ ದೊರಕಲಿಲ್ಲ. ಈ ತಿಂಗಳ ಆರಂಭದಲ್ಲಿ ಕೆಲವು ನಗರಗಳಲ್ಲಿ ಐಪಿಸಿ ಸೆಕ್ಷನ್ 144 ಅಡಿ ನಿರ್ಬಂಧಕಾಜ್ಞೆ ವಿಧಿಸಲಾಗಿತ್ತು. ಇನ್ನೂ ಕೆಲವು ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಪಡೆ ಮತ್ತು ಸಶಸ್ತ್ರ ಪಡೆಗಳ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸಲಾಗಿತ್ತು. ಆದರೆ, ವಿಡಿಯೊದಲ್ಲಿ ಹೇಳಿರುವಂತಹ ಯಾವುದೇ ಪ್ರಕಟಣೆ ಹೊರಡಿಸಿಲ್ಲ’ ಎಂದು ‘ದಿ ಲಾಜಿಕಲ್ ಇಂಡಿಯನ್’ ವೇದಿಕೆ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಸದ್ದಿಲ್ಲದ ಸಾಧನೆಗಳು

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ |
ಫಲ ಮಾಗುವಂದು ತುತ್ತೂರಿ ದನಿಯಿಲ್ಲ ||
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ |
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ || 661 ||

ಪದ-ಅರ್ಥ: ಇಳೆ = ಭೂಮಿ, ಮೊಳಕೆಯೊಗೆವಂದು = ಮೊಳಕೆ + ಒಗೆವಂದು (ಬರುವಾಗ), ಮಾಗುವಂದು = ಮಾಗುವ (ಹಣ್ಣಾಗುವ) + ಅಂದು, ಬೆಳಕೀವ = ಬೆಳಕ + ಈವ(ಕೊಡುವ).

ವಾಚ್ಯಾರ್ಥ: ಭೂಮಿಯಿಂದ ಮೊಳಕೆ ಬರುವಾಗ ತಮಟೆಯ ಸದ್ದಿಲ್ಲ, ಹಣ್ಣು ಪಕ್ವವಾಗುವಾಗ ಯಾರೂ ತುತ್ತೂರಿಯನ್ನು ಊದಲಿಲ್ಲ, ಬೆಳಕನ್ನು ನೀಡುವ ಸೂರ್ಯಚಂದ್ರರದು ಯಾವ ಸದ್ದೂ ಇಲ್ಲ. ಆದ್ದರಿಂದ ನಿನ್ನ ತುಟಿಗಳನ್ನು ಹೊಲಿದುಕೊಂಡು ಮೌನವಾಗಿರು.

ವಿವರಣೆ: ಒಂದಿಷ್ಟು ಕೆಲಸವಾದರೆ ಅಷ್ಟಾಯಿತು ಎಂದು ಬಡಾಯಿ ಕೊಚ್ಚಿಕೊಳ್ಳುತ್ತೇವೆ, ಎಲ್ಲರ ಮುಂದೆ ಸದಾಕಾಲ ಹೇಳಿಕೊಳ್ಳುತ್ತೇವೆ. ಈ ಬಂಡ್ವಾಳಿಲ್ಲದ ಬಡಾಯಿಗೆ ಯಾವ ಅರ್ಥವೂ ಇಲ್ಲ. ಪ್ರಪಂಚದಲ್ಲಿ ಎಂತೆಂತಹ ಪವಾಡಸದೃಶ ಕೆಲಸಗಳಾಗುತ್ತವೆ. ಅವುಗಳಿಂದ ಜಗತ್ತು ನಡೆಯುತ್ತಿದೆ. ಆದರೆ ಅವುಗಳ ಬಗ್ಗೆ ಒಂದು ಮಾತೂ ಇಲ್ಲ, ಈಗ ನಾಲ್ಕು ವರ್ಷಗಳ ಹಿಂದೆ ನನಗೊಂದು ಅನುಭವವಾಗಿತ್ತು. ಅಮೇರಿಕೆಯ ಅತ್ಯಂತ ಪ್ರಸಿದ್ಧವಾದ ವಿಶ್ವವಿದ್ಯಾಲಯದಲ್ಲಿ ನನ್ನದೊಂದು ಉಪನ್ಯಾಸ. ಎರಡು ತಾಸಿನ ಉಪನ್ಯಾಸ ಮುಗಿಯಿತು. ಹಿಂದಿನ ಸಾಲಿನಲ್ಲಿ ಕುಳಿತಿದ್ದ ಹಿರಿಯರೊಬ್ಬರು ಎದ್ದು ಮುಂದೆ ಬಂದರು. ಉದ್ದ ಬಿಳೀ ಕೂದಲು ಹಿಂದೆ ಹಾರಾಡುತ್ತಿದ್ದವು. ಬಂದವರೇ ಕೈಚಾಚಿ, ‘ಓಹ್, ನಿಮ್ಮ ಉಪನ್ಯಾಸ ತುಂಬ ಚೆನ್ನಾಗಿತ್ತು. ನನ್ನನ್ನು ಬಾಲ್ಯಕ್ಕೆ ಕರೆದುಕೊಂಡು ಹೋದಿರಿ’ ಎಂದರು. ನಾನೂ ಕೈಚಾಚಿ ಅವರ ಕೈ ಕುಲುಕಿದೆ. ನನ್ನ ಜೊತೆಗಿದ್ದವರು ಅವರ ಹೆಸರನ್ನು ಹೇಳಿದರು. ನಾನು ‘ಬಹಳ ಸಂತೋಷ’ ಎಂದೆ. ನಂತರ ಅವರು, ‘ಇವರು ಅರ್ಥಶಾಸ್ತ್ರದಲ್ಲಿ ನೋಬೆಲ್ ಪಾರಿತೋಷಕ ಪಡೆದವರು’ ಎಂದು ಸೇರಿಸಿದಾಗ, ನನಗೆ ಒಂದು ಕ್ಷಣ ಏನು ಹೇಳಬೇಕೆಂದು ತೋಚಲಿಲ್ಲ. ಅಷ್ಟು ದೊಡ್ಡ ಸಾಧನೆಯನ್ನು ಮಾಡಿದ ವ್ಯಕ್ತಿ, ಎರಡು ತಾಸು ತರಗತಿಯಲ್ಲಿ ಕುಳಿತು, ಈಗ ಮೆಚ್ಚಿಗೆಯ ಮಾತುಗಳನ್ನು ಹೇಳುತ್ತಾರಲ್ಲ ಎಂದು ಆಶ್ಚರ್ಯವಾಯಿತು. ನಾನು ‘ಸರ್, ತಾವು ನೋಬೆಲ್ ಪುರಸ್ಕೃತರು ಎಂಬುದು ನನಗೆ ಗೊತ್ತಿರಲಿಲ್ಲ’ ಎಂದೆ. ಅದಕ್ಕೆ ಅವರು ಹೇಳಿದ ಮಾತು, ನನಗೊಂದು ಬದುಕಿನ ಪಾಠವಾಯಿತು. ಅವರು ನನ್ನ ಕೈಯನ್ನು ಮತ್ತಷ್ಟು ಬಲವಾಗಿ ಒತ್ತಿ, ‘oh, forget it, ಓಹ್, ಅದನ್ನು ಮರೆತುಬಿಡಿ. ನೋಬೆಲ್ ಬಂದದ್ದು ಅರ್ಥಶಾಸ್ತ್ರಕ್ಕೆ, ನನಗಲ್ಲ’ ಎಂದು ಜೋರಾಗಿ ನಕ್ಕರು. ನಾನು ಬೆರಗಾದೆ. ಅಂಥ ಶ್ರೇಷ್ಠ ಪುರಸ್ಕಾರ ಬಂದದ್ದು ತನಗಲ್ಲ, ಅದು ಶಾಸ್ತ್ರಕ್ಕೆ ಎಂದ ಮನುಷ್ಯನ ಬಗ್ಗೆ ನನ್ನ ಗೌರವ ಆಕಾಶಕ್ಕೇರಿತು. ನಮ್ಮಲ್ಲಿ ಬಹಳ ಜನ ತಮ್ಮ ಪದವಿ ಸರ್ಟಿಫಿಕೇಟನ್ನೇ ಗೋಡೆಗೆ ಅಲಂಕಾರವಾಗಿ ಹಾಕಿ, ಪಾಸಾದದ್ದು ನಾನೇ ಎಂದು ದಿನವೂ ಖಚಿತಪಡಿಸಿಕೊಳ್ಳಲು ಒದ್ದಾಡುವಾಗ ಇಂಥ ಸಾಧಕರ ಸರಳತೆ ಅಚ್ಚರಿ ತಂದಿತ್ತು.

ಆಗ ಈ ಕಗ್ಗದ ಮಾತು ತುಂಬ ಸತ್ಯ ಎನ್ನಿಸಿತು. ನಮಗೆ ಆಹಾರ ಕೊಡುವ ಕಾಳು ಮೊಳಕೆಯಾಗುವಾಗ ಯಾವ ಅಬ್ಬರವಿಲ್ಲ. ಬದುಕಿಗೆ ಪೋಷಕವಾಗುವ ಹಣ್ಣು ಮಾಗುವಾಗ ಯಾವ ಘೋಷಣೆಗಳಿಲ್ಲ, ಪ್ರಪಂಚದ ಎಲ್ಲ ಚಟುವಟಿಕೆಗಳಿಗೆ ಮೂಲಕಾರಣವಾದ ಸೂರ್ಯೋದಯ-ಚಂದ್ರೋದಯಗಳಾಗುವಾಗ ಯಾವ ವಿಶೇಷ ಪ್ರಕಟಣೆಗಳಿಲ್ಲ, ಆದರೆ ನಮ್ಮ ಸಣ್ಣ ಸಣ್ಣ ಸಾಧನೆಗಳ ಬಗ್ಗೆ ಇಷ್ಟೊಂದು ಹೇಳಿಕೊಳ್ಳುತ್ತೇವಲ್ಲ? ಇದು ನಾಚಿಕೆಗೇಡಲ್ಲವೇ? ಅದಕ್ಕೇ ಕಗ್ಗ ನಮ್ಮ ಬಾಯಿಬಡುಕ ತುಟಿಗಳನ್ನು ‘ಹೊಲಿದುಕೋ’ ಎಂದು ಎಚ್ಚರಿಕೆ ಕೊಡುತ್ತದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 30, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಪ್ರತಿಪದ್ ಗಂ.10-50 ನಕ್ಷತ್ರ: ಪುನರ್ವಸು ಗಂ.25-07 ಯೋಗ: ಧ್ರುವ ಗಂ.09-51, ಕರಣ: ಬವ ಗಂ. 10-50, ಮಿಥುನ ಮಾಸದ 15 ನೇ ದಿನ.

ರಾಹುಕಾಲ: ಮಧ್ಯಾಹ್ನ 01:30–03:00

ಸೂರ್ಯೋದಯ: 06-11 **ಸೂರ್ಯಾಸ್ತ:** 06-57

ಮುಸ್ಲಿಂ ದಿನಾಂಕ: 30 ಜುಲ್ಕಾಯದ್

ದಿನ ವಿಶೇಷ: ಮನೋರಥ ದ್ವಿತೀಯ ವ್ರತ (ಬಂಗಾಳ)

ಅದೃಷ್ಟ ಸಂಖ್ಯೆ: 5, 8

ಮೇಷ: ನಿಮ್ಮ ಕೆಲಸದ ಜತಗೆ ಕೆಲ ಸಮಯ ಇತರೆ ಸಂಗತಿಗಳ ಬಗ್ಗೆ ಗಮನ ಕೊಡಿ ಮಾನಸಿಕ ಒತ್ತಡ ಕಡಿಮೆ ಆಗುವುದು. ಕೌಟುಂಬಿಕ ಜೀವನ ನೆಮ್ಮದಿಯುಕ್ತವಾಗಿರುತ್ತದೆ.

ವೃಷಭ: ಸಹೋದರ ಸಹೋದರಿಯರ ಬಾಂಧವ್ಯ ಗಟ್ಟಿಯಾಗುವ ಘಟನೆ ನಡೆಯುವುದು. ದಿನಸಿ ವರ್ತಕರು ಆರ್ಥಿಕತೆಯಲ್ಲಿ ದುರ್ಬಲವಾಗಬಹುದು, ಎಚ್ಚರವಹಿಸಿ.

ಮಿಥುನ: ಹಣ ಕೊಡುವ ಬಗ್ಗೆ, ತೆಗೆದುಕೊಳ್ಳುವ ಹಣದ ಬಗ್ಗೆ ಲೆಕ್ಕಾಚಾರ ಸರಿಯಾಗಿ ಇಟ್ಟುಕೊಳ್ಳಿ. ನಿರುದ್ಯೋಗಿಗಳು ಸ್ಥಿರವಾದ ಉದ್ಯೋಗ ಪಡೆಯುವ ಸಾಧ್ಯತೆ ಇದೆ. ಬೂದು ಬಣ್ಣ ಶುಭತರಲಿದೆ.

ಕರ್ಕಾಟಕ: ನಿಮ್ಮ ಹಠದ ಸ್ವಭಾವ ಸವಾಲುಗಳನ್ನು ಎದುರಿಸುವ ಪರಿಸ್ಥಿತಿ ಬರಬಹುದು. ಜೇನು ಹುಳಗಳಂತಹ ಕೀಟಗಳಿಂದ ಅಥವಾ ಇತರೆ ಜಂತುಗಳಿಂದ ಜಾಗ್ರತರಾಗಿರಿ.

ಸಿಂಹ: ಸತತ ಪರಿಶ್ರಮದ ಫಲವಾಗಿ ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವ ಕಾಲವನ್ನು ಇಂದು ನಿರೀಕ್ಷಿಸಬಹುದು. ತಾಂತ್ರಿಕ ವರ್ಗದಲ್ಲಿ ಕೆಲಸ ಮಾಡುವವರಿಗೆ ಅಧಿಕ ಒತ್ತಡದೊಂದಿಗೆ ಅಧಿಕ ಲಾಭ.

ಕನ್ಯಾ: ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಉದಾಸೀನತೆ. ಹಾಲಿನ ಡೈರಿ ಪದಾರ್ಥಗಳ ವ್ಯಾಪಾರಸ್ಥರಿಗೆ ಹೆಚ್ಚಿನ ಉತ್ಪಾದನೆ ಲಾಭ ತರುವುದು.

ತುಲಾ: ಸ್ವಯಂ ಸಾಮರ್ಥ್ಯದಿಂದ ಅವಕಾಶ ಪಡೆದುಕೊಳ್ಳುವಿರಿ. ಆರೋಗ್ಯದ ಬಗ್ಗೆ ಗಮನ ಕೊಡಿ. ಗೆಳೆಯರೊಂದಿಗೆ ಪ್ರವಾಸ ಹೋಗುವ ವಿಚಾರ ನಿಶ್ಚಿತವಾಗುವುದು.

ವೃಶ್ಚಿಕ: ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆ ಬಗೆಹರಿಸಿಕೊಂಡು, ಇರುವ ಅವಕಾಶಗಳನ್ನು ಮುಂದುವರಿಕೊಳ್ಳುವುದು ನಿಮ್ಮ ಬುದ್ಧಿವಂತಿಕೆ ಪ್ರದರ್ಶಿಸುತ್ತದೆ. ರಾಜಕೀಯ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟ ಇರುವುದು.

ಧನು: ಸಮೀಪವರ್ತಿಗಳ ಸಲಹೆ ಸಹಕಾರದಿಂದ ವ್ಯಾಪಾರ ವಹಿವಾಟುಗಳಲ್ಲಿ ಆದಾಯದಲ್ಲಿ ಗಣನೀಯ ಏರಿಕೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅತೀವ ಆಸಕ್ತಿ. ಸಾಲದ ಹಣ ಅನಾಯಾಸವಾಗಿ ಹಿಂತಿರುಗುವುದು.

ಮಕರ: ಖಾಸಗಿ ಕಂಪೆನಿಯೊಂದರಲ್ಲಿ ನೌಕರಿ ಪ್ರಾಪ್ತಿಯಾಗಿ ಮನೆಯಲ್ಲಿ ಸಂತಸ. ಕೊಡು ಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿದೆ. ದುರಾಚಾರ ದುರ್ಬುದ್ಧಿ ಹೊಂದಿರುವ ಜನರ ಸಹವಾಸದಿಂದ ದೂರವಿರಿ.

ಕುಂಭ: ನಿಮಗಿರುವ ವ್ಯಾವಹಾರಿಕ ಸಂಬಂಧಗಳು ವಿಸ್ತಾರಗೊಳ್ಳುವ ಸಮಯ ಇದಾಗಿದೆ. ಆಶ್ಚರ್ಯ ಮೂಡುವ ಮತ್ತು ಸಂಭ್ರಮಿಸುವಂತಹ ಘಟನೆ ನಿಮ್ಮ ಬದುಕಲ್ಲಿ ಈ ದಿನ ನಡೆಯುವುದು. ಶೀತಬಾಧೆ ಎದುರಾಗಬಹುದು.

ಮೀನ: ಸಮಾಜದಲ್ಲಿ ಸ್ಥಾನಮಾನ ಹೊಂದಿರುವ ನಿಮಗೆ ಮಸಿ ಬಳಿಯುವ ಪ್ರಯತ್ನ ನಿಮ್ಮ ಸಂಬಂಧಿಕರಿಂದ ನಡೆಯಲಿದೆ. ಉನ್ನತ ಶಿಕ್ಷಣಕ್ಕಾಗಿ ವಿದೇಶ ಪ್ರಯಾಣದ ಕನಸು ಈಡೇರುವ ಬಗ್ಗೆ ಹಣ ವ್ಯಯಿಸಬೇಕಾಗುವುದು.

ಪದಬಂಧ 5004


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆ ಗ್ರಹಣವಿದ್ದಾಗ ಮೂಸಿ ನೋಡುವಿಕೆ! (3)
2.ರಥಿಕರಲ್ಲಿ ಅತ್ಯಂತ ಶ್ರೇಷ್ಠನಾದವನು (4)
4.ಸಾಕ್ಷರನ ಎದುರಿಗೆ ಮೂರ್ತೀಭವಿಸುವುದು (4)
6.ಸಂಗಡ ಪ್ರಯಾಣಿಸುವಾಗ ನಡೆದ ಘಟನೆ! (3)
7.ಫಕ್ಕನೆ ನೆನಪಾಗಿರುವ ಕಾರಣ! (2)
9.ಒರಟಾದುದು ಇದು (3)
11.ಸೂರ್ಯ ಇಲ್ಲಿ ಮೂಡಿದ್ದಾನೆ (2)
13.ಕಾವಲಿದ್ದರೂ ಎರಡಾಗಿ ಸೀಳಿದುದು! (3)
14.ಬೊಕ್ಕ ತಲೆಯವನು ಮಾಡಿರುವ ಮೋಸಗಾರಿಕೆ! (4)
16.ಮನದಲ್ಲಿರುವ ವಂಶ (4)
17.ಗಲಬರಿಸುತ್ತಿರುವಾಗ ನಡೆದ ಗಲಾಟೆ (3)

ಮೇಲಿಂದ ಕೆಳಕ್ಕೆ

1.ಆತ್ಮ ಸಾಕ್ಷಾತ್ಕಾರಕ್ಕಾಗಿ ಮಾಡುವ ಪ್ರಯತ್ನ (5)
2.ನಾನು ಎಂಬ ಭಾವ! (2)
3.ನೆತ್ತರು ಪ್ರವಹಿಸುವುದು (5)
5.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
8.ಈ ಪರಿ ಆಗಿರುವ ಬದಲಾವಣೆ! (5)
10.ಕಟ ಕಟ ಶಬ್ದ ಮಾಡುತ್ತಿರುವ ಬಂಡಿ (3)
12.ರಾಜ್ಯದ ಚುನಾಯಿತ ಶಾಸಕರ ಮಂಡಲಿ (5)
15.ಮಾವನ ಮರ್ಯಾದೆಯಿದು! (2)



5003ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಉಪಮಾತೀತ 4.ಉದರ
5.ತಿನಿಸು 9.ಧ್ಯಾನ
10.ಪಿತೂರಿ 11.ಹೊಗೆ
12.ನಿಗಮ 15.ನಗರ
16.ರಜತೋತ್ಸವ

ಮೇಲಿಂದ ಕೆಳಕ್ಕೆ:
1.ಗುಮಾನಿ 2.ಉರ
3.ತತಿ 4.ಉಪಾಧ್ಯಾಯಿನಿ
6.ಸುಲಿಗೆಗಾರ 7.ನಾಪಿತ
8.ಪರಿಷೆ 13.ಮರ
14.ಸಂತೋಷ
15.ನವ

ಸುಡೊಕು 5390

		1		7		6		2
		5	2		9			
2	8			1			9	
	5		7		4	8		
				8		5		9
8	3	6						4
6				5		9		7
	7	8	1					
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5389 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ತಮ್ಮನ ಕೋಪ ತಣಿಸಲು 5 ಕೆ.ಜಿ ತೂಕದ ಪತ್ರ ಬರೆದ ಅಕ್ಕ!

ಇಡುಕ್ಕಿ (ಕೇರಳ): ಸಹೋದರರ ದಿನ ಶುಭಕೋರಲಿಲ್ಲವೆಂದು ಕೋಪಿಸಿಕೊಂಡು ತನ್ನ ಜೊತೆ ಮಾತನಾಡುವುದನ್ನೇ ನಿಲ್ಲಿಸಿದ್ದ ತಮ್ಮನನ್ನು ಸಂತೈಸಲು ಅಕ್ಕ 5 ಕೆ.ಜಿ. ತೂಕ ಹಾಗೂ 434 ಮೀಟರ್ ಉದ್ದದ ಪತ್ರವೊಂದನ್ನು ಬರೆದಿದ್ದಾರೆ!

ಕೇರಳದ ಕೃಷ್ಣಪ್ರಿಯಾ ಪತ್ರ ಬರೆದವರು. 'ಸಹೋದರರ ದಿನ ತಮ್ಮನಿಗೆ ಶುಭಕೋರಲು ಮರೆತಿದ್ದೆ. ಇದರಿಂದ ಮುನಿಸಿಕೊಂಡಿದ್ದ ಆತ ಮೊಬೈಲ್ ಕರೆಗಳನ್ನು ಸ್ವೀಕರಿಸುತ್ತಿರಲಿಲ್ಲ. ವಾಟ್ಸ್‌ಆ್ಯಪ್‌ನಲ್ಲಿ ನನ್ನ ಮೊಬೈಲ್ ಸಂಖ್ಯೆ 'ಬ್ಲಾಕ್' ಮಾಡಿದ್ದ. ತಪ್ಪಿನ ಅರಿವಾದ ಬಳಿಕ ಪತ್ರ ಬರೆಯಲು ನಿರ್ಧರಿಸಿದ್ದೆ' ಎಂದು ಎಂಜಿನಿಯರಿಂಗ್ ವಿದ್ಯಾರ್ಥಿನಿಯಾಗಿರುವ ಕೃಷ್ಣಪ್ರಿಯಾ ಹೇಳಿದ್ದಾರೆ.

'ಪತ್ರ ಬರೆಯಲು ಮೊದಲು ಎ-4 ಗಾತ್ರದ ಹಾಳೆ ಆಯ್ಕೆಮಾಡಿಕೊಂಡಿದ್ದೆ. ನಾನು ಆತನ ಮೇಲೆ ಇಟ್ಟಿರುವ ಪ್ರೀತಿ, ಮಮತೆ, ಅಕ್ಕರೆ ಹಾಗೂ ನಮ್ಮಿಬ್ಬರ ಒಡನಾಟದ ಬಗ್ಗೆ ವಿವರಿಸಲು ಅದು ಸಾಕಾಗುವುದಿಲ್ಲ ಎಂಬುದು ಮನದಟ್ಟಾಯಿತು. ಹೀಗಾಗಿ ಬಿಲ್‌ಗೆ ಬಳಸುವ ಕಾಗದದ 14 ರೋಲ್‌ಗಳನ್ನು ಖರೀದಿಸಿದೆ. ಪತ್ರ ಬರೆಯಲು ಸುಮಾರು 12 ಗಂಟೆ ಸಮಯ ಬೇಕಾಯಿತು' ಎಂದಿದ್ದಾರೆ. 'ನಮ್ಮಿಬ್ಬರ ನಡುವಣ ವಯಸ್ಸಿನ ಅಂತರ 7 ವರ್ಷ. ಹೀಗಿದ್ದರೂ ಇಬ್ಬರು ಅವಳಿ ಮಕ್ಕಳಂತೆ ಇದ್ದೇವೆ.

'ಅಕ್ಕನ ಪತ್ರ ಕೈಸೇರಿದಾಗ ಅಚ್ಚರಿಯಾಯಿತು. ಅದನ್ನು ಓದಿದ ಬಳಿಕ ತುಂಬಾ ಖುಷಿಯಾಯಿತು' ಎಂದು ಕೃಷ್ಣಪ್ರಸಾದ್ ಸಂತಸ ವ್ಯಕ್ತಪಡಿಸಿದ್ದಾರೆ.

ಈ ಪತ್ರ ಗಿನ್ನೆಸ್ ದಾಖಲೆ ಪುಸ್ತಕ ಸೇರುವ ಸಾಧ್ಯತೆ ಇದ್ದು, ಕೃಷ್ಣಪ್ರಿಯಾ ಇದಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ.

'ಪ್ರಚೋದಿಸುವ ಸಂಘಟನೆಗಳನ್ನು ಪತ್ತೆ ಹಚ್ಚಬೇಕು'

ಬೆಂಗಳೂರು: ರಾಜಸ್ಥಾನದಲ್ಲಿ ಟೈಲರ್ ಕನ್ಹಯ್ಯ ಲಾಲ್ ಅವರನ್ನು ಕತ್ತು ಸೀಳಿ ಕೊಂದ ಪ್ರಕರಣದಲ್ಲಿ ಕೊಲೆ ಆರೋಪಿಗಳನ್ನಷ್ಟೇ ಬಂಧಿಸಿದರೆ ಸಾಲದು, ಅಂತಹ ಘಟನೆಗೆ ಪ್ರಚೋದನೆ ನೀಡಿದ ಸಂಘಟನೆಗಳನ್ನೂ ಬಂಧಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

'ಹತ್ಯೆ ಖಂಡನೀಯ. ಭವಿಷ್ಯದಲ್ಲಿ ಇಂತಹ ಅಮಾನುಷ ಕೃತ್ಯದಲ್ಲಿ ಭಾಗಿಯಾಗದಂತೆ ಹಿಂದೆ ಬಲವಾದ ಪ್ರಚೋದನೆ ಇದೆ' ಎಂದರು.

'ಚಕಾರ ಎತ್ತದ ಸಿದ್ದರಾಮಯ್ಯ'

ಹಾಸನ: 'ಟಿಪ್ಪು ಸುಲ್ತಾನ್, ಪಠ್ಯಪುಸ್ತಕ ಪರಿಷ್ಕರಣೆ ಕುರಿತು ಟೀಕೆ ಮಾಡುವ ಸಿದ್ದರಾಮಯ್ಯ ಅವರಿಗೆ ರಾಜಸ್ಥಾನದ ಕೊಲೆ ಪ್ರಕರಣದ ಭೀಕರತೆ ಕಾಣಿಸಲಿಲ್ಲವೇ' ಎಂದು ಕಂದಾಯ ಸಚಿವ ಆರ್. ಅಶೋಕ ಪ್ರಶ್ನಿಸಿದರು.

'ಕೊಲೆಗಾರರಿಗೆ ತಕ್ಷಣ ಗುಂಡಿಕ್ಕಿ'

ಶಿವಮೊಗ್ಗ: 'ರಾಜಸ್ಥಾನದಲ್ಲಿ ಟೈಲರ್ ಕನ್ಹಯ್ಯಲಾಲ್ ಅವರನ್ನು ತಾವೇ ಕೊಂದಿರುವುದಾಗಿ ಇಬ್ಬರು ಮುಸ್ಲಿಮರು ಹೇಳಿದ್ದಾರೆ. ಅವರು ಒಪ್ಪಿಕೊಂಡ ನಂತರವೂ ತನಿಖೆ ಅನಗತ್ಯವಾಗಿದ್ದು, ಕೂಡಲೇ ಅವರನ್ನು ಗುಂಡಿಟ್ಟು ಕೊಲ್ಲಲಿ; ಇಲ್ಲವೇ ನೇಣಿಗೆ ಹಾಕಲಿ' ಎಂದು ಶಾಸಕ ಕೆ.ಎಸ್. ಈಶ್ವರಪ್ಪ ಆಗ್ರಹಿಸಿದರು.

ಶವಯಾತ್ರೆಯಲ್ಲಿ ಸಾವಿರಾರು ಜನರು ಭಾಗಿ; ಹಲವೆಡೆ ಪ್ರತಿಭಟನೆ; ಪೊಲೀಸ್‌ಗೆ ಗಾಯ

ಬಿಗಿ ಭದ್ರತೆಯಲ್ಲಿ ಟೈಲರ್ ಅಂತ್ಯಕ್ರಿಯೆ

ಜೈಪುರ, ಉದಯಪುರ (ಪಿಟಿಐ): ಇಬ್ಬರು ದುಷ್ಕರ್ಮಿಗಳಿಂದ ಬರ್ಬರವಾಗಿ ಹತ್ಯೆಯಾದ ಟೈಲರ್ ಕನ್ಹಯ್ಯ ಲಾಲ್ ಅವರ ಅಂತ್ಯಕ್ರಿಯೆ ಬುಧವಾರ ಉದಯಪುರದ ಅಶೋಕ ನಗರದ ಸ್ಮಶಾನದಲ್ಲಿ ಭಾರಿ ಬಿಗಿಭದ್ರತೆಯಲ್ಲಿ ನಡೆಯಿತು.

ಅಂತ್ಯಕ್ರಿಯೆಗೂ ಮೊದಲು ನಗರದಲ್ಲಿ ನಡೆದ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನಸ್ತೋಮವೇ ಸೇರಿತ್ತು. ಮಾರ್ಗದುದ್ದಕ್ಕೂ ಕಾರು ಮತ್ತು ಬೈಕ್‌ಗಳಲ್ಲಿ ಬಂದ ಜನರು ಮೆರವಣಿಗೆಯಲ್ಲಿ ಕೂಡಿಕೊಂಡರು. ಕೆಲವು ಉದ್ರಿಕ್ತ ಜನರು, ಅಶೋಕ ನಗರದ ಸ್ಮಶಾನದ ಸಮೀಪದ ಇರುವ ಮುಖ್ಯಮಾರ್ಗ ಸ್ಮಶಾನದತ್ತ ಕಲ್ಲು ತೂರಿ, ಪ್ರವೇಶದ್ವಾರದ ಗೇಟ್ ಮುರಿಯಲು ಯತ್ನಿಸಿದ ಘಟನೆ ನಡೆಯಿತು.

ಇದಕ್ಕೂ ಮುನ್ನ ಮರಣೋತ್ತರ ಪರೀಕ್ಷೆಯ ನಂತರ ಲಾಲ್ ಅವರ ಶವವನ್ನು ಕುಟುಂಬದವರಿಗೆ ಒಪ್ಪಿಸಲಾಯಿತು. ನಗರದ ಸೆಕ್ಟರ್ 14ರಲ್ಲಿರುವ ಲಾಲ್ ಅವರ ಮನೆ ಬಳಿ ಪಾರ್ಥಿವ ಶರೀರವನ್ನು ಕೆಲ ಕಾಲ ಅಂತಿಮ ದರ್ಶನಕ್ಕೆ ಇಡಲಾಗಿತ್ತು.

ಲಾಲ್ ಮನೆ ಬಳಿ ಭಾರಿ ಸಂಖ್ಯೆಯಲ್ಲಿ ಸೇರಿದ ಜನರು ಕೈಯಲ್ಲಿ ಕೇಸರಿ ಬಾವುಟಗಳನ್ನು ಹಿಡಿದು 'ಭಾರತ್ ಮಾತಾಕಿ ಜೈ', 'ಕನ್ಹಯ್ಯ ಲಾಲ್ ಅಮರ್ ರಹೇ' ಮತ್ತು 'ಕನ್ಹಯ್ಯ ಹಮ್ ಶರ್ಮಿಂದಾ ಹೈ ತೇರೆ ಕಾತಿಲ್ ಜಿಂದಾ ಹೈ' (ಕನ್ಹಯ್ಯ ನಮಗೆ ನಾಚಿಕೆಯಾಗುತ್ತಿದೆ, ನಿನ್ನ ಹಂತಕರು ಬದುಕಿದ್ದಾರೆ) ಎಂಬ ಘೋಷಣೆಗಳನ್ನು ಕೂಗಿದರು. ಚಿತಾಗಾರದ ಆವರಣದಲ್ಲಿ ಜನರು 'ಮೋದಿ ಮೋದಿ' ಎಂಬ ಘೋಷಣೆಗಳನ್ನು ಕೂಗಿದರು.

ಕನ್ಹಯ್ಯ ಲಾಲ್ ಅವರ ಹತ್ಯೆಗೆ ತೀವ್ರ ದುಃಖ ಮತ್ತು ಆಘಾತ ವ್ಯಕ್ತಪಡಿಸಿದ ಸ್ಥಳೀಯರು ಮತ್ತು ಸಂಬಂಧಿಕರು, ಹಂತಕರನ್ನು ಗಲ್ಲಿಗೇರಿಸಬೇಕು ಎಂದು ಒತ್ತಾಯಿಸಿದರು.

'ಜೀವ ಬೆದರಿಕೆ ಇದ್ದಿದ್ದರಿಂದ ಪತಿ ಭಯಭೀತರಾಗಿದ್ದರು. ಕಳೆದ ಆರು ದಿನಗಳಿಂದ ಅಂಗಡಿ ಬಾಗಿಲು ಕೂಡ ತೆರೆದಿರಲಿಲ್ಲ. ಬಾಗಿಲು ತೆರೆದ ತಕ್ಷಣವೇ ಅವರನ್ನು ದುಷ್ಕರ್ಮಿಗಳು ಕೊಂದಿದ್ದಾರೆ' ಎಂದು ಕನ್ಹಯ್ಯ ಪತ್ನಿ ಜಸೋದಾ ಅವರು ವರದಿಗಾರರಿಗೆ ತಿಳಿಸಿದರು.

ವಿವಾದಾತ್ಮಕ ಪೋಸ್ಟ್ ಹಂಚಿಕೊಂಡ ಆರೋಪದ ದೂರಿನ ಸಂಬಂಧ ಕನ್ಹಯ್ಯ ಲಾಲ್ ಅವರನ್ನು ಜೂನ್ 11ರಂದು ಪೊಲೀಸರು ಬಂಧಿಸಿದ್ದರು. ಐದು ದಿನಗಳ ನಂತರ ಜಾಮೀನಿನ ಮೇಲೆ ಕನ್ಹಯ್ಯ ಬಿಡುಗಡೆಯಾಗಿದ್ದರು. ನಂತರ ಅವರು ನೆರೆಹೊರೆಯವರಿಂದ ಕಿರುಕುಳ ಮತ್ತು ಬೆದರಿಕೆಗೆ ಒಳಗಾಗಿದ್ದರು ಎನ್ನಲಾಗಿದೆ.

'ನನಗೆ ಜೀವ ಬೆದರಿಕೆ ಇದೆ. ನನ್ನನ್ನು ಕೊಲ್ಲಲು ಕೆಲವರು ನನ್ನ ಅಂಗಡಿ ಬಳಿ ತಾಲೀಮು ನಡೆಸುತ್ತಿದ್ದಾರೆ' ಎಂದು ಕನ್ಹಯ್ಯ ಲಾಲ್ ಅವರು ಪೊಲೀಸರಿಗೆ ಜೂನ್ 15ರಂದು ಲಿಖಿತ ದೂರು ನೀಡಿದ್ದರು ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಎಎಸ್‌ಐ ಅಮಾನತು: ಘಟನೆ ಸಂಬಂಧ ನಿರ್ಲಕ್ಷ್ಯ ತೋರಿದ ಆಪಾದನೆ ಮೇರೆಗೆ ಉದಯಪುರದ ಧನ್ ಮಂಡಿ ಪೊಲೀಸ್ ಠಾಣೆಯ ಎಎಸ್‌ಐ ಭನ್ವಾರ್ ಲಾಲ್ ಅವರನ್ನು ಬುಧವಾರ ಅಮಾನತುಗೊಳಿಸಿ ಐಜಿಪಿ ಹಿಂಗ್ಲಾಜ್ ದನ್ ಆದೇಶ ಹೊರಡಿಸಿದ್ದಾರೆ.

ನಾಯಕರ ಖಂಡನೆ: ಟೈಲರ್ ಹತ್ಯೆಯನ್ನು ಪ್ರಮುಖ ಮುಸ್ಲಿಂ ಸಂಘಟನೆ ಜಮಿಯತ್ ಉಲೆಮಾ–ಎ–ಹಿಂದ್ ತೀವ್ರವಾಗಿ ಖಂಡಿಸಿದೆ. 'ಪ್ರವಾದಿಯ ಅವಮಾನದ ನೆಪದಲ್ಲಿ ಇಂತಹ ಕ್ರೂರ ಹತ್ಯೆ ನಡೆಸುವುದು ಯಾವುದೇ ರೀತಿಯಲ್ಲೂ ಸಮರ್ಥನೀಯವಲ್ಲ. ಇದನ್ನು ಇಸ್ಲಾಂ ಧರ್ಮ ಕೂಡ ಒಪ್ಪುವುದಿಲ್ಲ' ಎಂದು ಸಂಘಟನೆ ಪ್ರಧಾನ ಕಾರ್ಯದರ್ಶಿ ಹಕೀಮುದ್ದೀನ್ ಖಾಸ್ಮಿ ಹೇಳಿದ್ದಾರೆ. ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ (ಎಐಎಂಪಿಎಲ್‌ಬಿ) ಕೂಡ ಘಟನೆಯನ್ನು ತೀವ್ರವಾಗಿ ಖಂಡಿಸಿದೆ.

'ಈ ಕೃತ್ಯ ಇಸ್ಲಾಮ್‌ಗೆ ವಿರುದ್ಧವಾದುದು. ಹೇಡಿತನದ ಕೃತ್ಯ' ಎಂದು ದೆಹಲಿ ಜಾಮಾ ಮಸೀದಿ ಶಾಹಿ ಇಮಾಮ್ ಸೈಯದ್ ಅಹ್ಮದ್ ಬುಖಾರಿ ಟೀಕಿಸಿದ್ದಾರೆ.

'ಕಾಂಗ್ರೆಸ್ ಆಡಳಿತದಲ್ಲಿ ರಾಜಸ್ಥಾನವು ತಾಲಿಬಾನ್ ರಾಜ್ಯವಾಗುವ ಹಾದಿಯಲ್ಲಿದೆ. ಕಾಂಗ್ರೆಸ್‌ನ ಮುಸ್ಲಿಂ ಓಲೈಕೆ ನೀತಿಯಿಂದ ಜಿಹಾದಿಗಳಿಗೆ ಧೈರ್ಯ ಬಂದಿದೆ. ಹಾಗಾಗಿ ಹಿಂದೂಗಳನ್ನು ಬಹಿರಂಗವಾಗಿ ಹತ್ಯೆ ಮಾಡುತ್ತಿದ್ದಾರೆ. ಪ್ರಧಾನ ಮಂತ್ರಿಗೂ ಜೀವ ಬೆದರಿಕೆ ಹಾಕುತ್ತಿದ್ದಾರೆ' ಎಂದು ಬಿಜೆಪಿ ಸಂಸದ ರಾಜ್ಯವರ್ಧನ್ ರಾಥೋಡ್ ಕಿಡಿಕಾರಿದ್ದಾರೆ.

'ಹಂತಕರು ಹೀನ ಕೃತ್ಯ ಎಸಗಿ, ಕ್ಯಾಮೆರಾ ಮುಂದೆ ಕತ್ತಿ ಝಳಪಿಸಿ ಪ್ರಧಾನಿಗೂ ಜೀವ ಬೆದರಿಕೆ ಹಾಕುವ ಧೈರ್ಯ ತೋರಿದ್ದಾರೆ' ವಿಶ್ವ ಹಿಂದೂ ಪರಿಷತ್ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ವಿಡಿಯೋ ಸಂದೇಶದಲ್ಲಿ ತಿಳಿಸಿದ್ದಾರೆ.



ಉದಯಪುರದಲ್ಲಿ ಬುಧವಾರ ಟೈಲರ್ ಕನ್ಹಯ್ಯ ಲಾಲ್ ಅವರ ಅಂತ್ಯಕ್ರಿಯೆ ವೇಳೆ ಅವರ ಕುಟುಂಬ ಸದಸ್ಯರು ಕಣ್ಣೀರಿಟ್ಟರು – ಪಿಟಿಐ ಚಿತ್ರ

ಪ್ರತಿಭಟನೆ–ಪೊಲೀಸ್ ಮೇಲೆ ದಾಳಿ

ಜೈಪುರದ ರಾಜಸಮಂದ್ ಜಿಲ್ಲೆಯ ಭೀಮ್ ಪಟ್ಟಣದಲ್ಲಿ ಕನ್ಹಯ್ಯ ಲಾಲ್ ಹತ್ಯೆ ಖಂಡಿಸಿ ಬುಧವಾರ [illegible] ಮೆರವಣಿಗೆ ಹೊರಟಿದ್ದ ಜನರ ಗುಂಪನ್ನು ತಡೆಯಲು ಅಶ್ರುವಾಯು ಸಿಡಿಸಿದ ಪೊಲೀಸರ ಮೇಲೆ ಉದ್ರಿಕ್ತ ಜನರು ಕಲ್ಲು ತೂರಿದ್ದಾರೆ. ಪೊಲೀಸ್ ಸಿಬ್ಬಂದಿಯೊಬ್ಬರ ಮೇಲೆ ಖಡ್ಗದಿಂದ ದಾಳಿ ನಡೆಸಿದ್ದಾರೆ.

ಗಾಯಗೊಂಡಿರುವ ಪೊಲೀಸ್ ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ರಾಜಸ್ಥಾನ ಡಿಜಿಪಿ ಎಂ.ಎಲ್. ಲಾಥರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಹತ್ಯೆ ಖಂಡಿಸಿ ನಗರದಲ್ಲಿ ಬುಧವಾರ ಪ್ರತಿಭಟನೆಗಳು ನಡೆದವು. ರಾಜ್ಯದ 33 ಜಿಲ್ಲೆಗಳಲ್ಲೂ ಮೊಬೈಲ್, ಇಂಟರ್‌ನೆಟ್ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ. ಉದಯಪುರದ ನಗರದಲ್ಲಿ ಉದ್ವಿಗ್ನ ಪರಿಸ್ಥಿತಿ ನೆಲೆಸಿದ್ದು, ಏಳು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ವಿಧಿಸಿರುವ ಕರ್ಫ್ಯೂ ಬುಧವಾರ ಕೂಡ ಮುಂದುವರಿಸಿದೆ.

ಸಂಪುಟ ಸಭೆಯಲ್ಲಿ ಠಾಕ್ರೆ ವಿದಾಯ ಭಾಷಣ

'ನಮ್ಮವರಿಂದಲೇ ದ್ರೋಹ'

ಮುಂಬೈ (ಪಿಟಿಐ): ಶಿವಸೇನಾ ಹಿರಿಯ ನಾಯಕ ಏಕನಾಥ ಶಿಂಧೆ ಬಂಡಾಯದ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಹುದ್ದೆಗೆ ಉದ್ಧವ್ ಠಾಕ್ರೆ ಅವರು ಬುಧವಾರ ರಾಜೀನಾಮೆ ನೀಡಿದ್ದಾರೆ. ರಾಜೀನಾಮೆಗೂ ಮುನ್ನ ಸಂಪುಟ ಸಭೆ ನಡೆಸಿದ ಠಾಕ್ರೆ ಅವರು, 'ನನ್ನ ಜನರೇ ನನಗೆ ದ್ರೋಹ ಬಗೆದರು' ಎಂದು ಸಂಪುಟ ಸಹೋದ್ಯೋಗಿಗಳ ಎದುರು ಹೇಳಿಕೊಂಡರು ಎಂದು ಮೂಲಗಳು ತಿಳಿಸಿವೆ.

ಸಂಪುಟ ಸಭೆಯಲ್ಲಿ ವಿದಾಯ ಭಾಷಣ ಮಾಡಿದ್ದ ಅವರು, 'ಉದ್ದೇಶವಿಲ್ಲದೇ ಯಾರಿಗಾದರೂ ನೋವುಂಟು ಮಾಡಿದ್ದರೆ ನನ್ನನ್ನು ಕ್ಷಮಿಸಿ' ಎಂದು ಸಹೋದ್ಯೋಗಿಗಳಲ್ಲಿ ಕೇಳಿಕೊಂಡರು ಎಂದು ಮೂಲಗಳು ತಿಳಿಸಿವೆ. ಎರಡೂವರೆ ವರ್ಷಗಳ ಕಾಲ ಸಹಕಾರ ನೀಡಿದ ಸಂಪುಟ ಸದಸ್ಯರಿಗೆ ಠಾಕ್ರೆ ಧನ್ಯವಾದ ಹೇಳಿದರು. ಉದ್ಧವ್ ಮಾತನಾಡಿದ ಬಳಿಕ ಸಚಿವರು ಚಪ್ಪಾಳೆ ತಟ್ಟಿದರು ಎಂದು ಮೂಲಗಳು ತಿಳಿಸಿವೆ.

ಗೋವಾಗೆ ಬಂದ ಬಂಡಾಯ ಶಾಸಕರು: ಬಂಡಾಯ ಶಾಸಕರು ಅಸ್ಸಾಂನಿಂದ ಗೋವಾಗೆ ಬಂದಿದ್ದಾರೆ. ವಿಮಾನ ನಿಲ್ದಾಣ ಹಾಗೂ ಅವರು ತಂಗಲಿರುವ ಪಣಜಿಯ ಪಂಚತಾರಾ ಹೋಟೆಲ್‌ಗೆ ಭದ್ರತೆ ಕಲ್ಪಿಸಲಾಗಿದೆ. ಶಾಸಕರಿಗಾಗಿ 70 ಕೊಠಡಿಗಳನ್ನು ಕಾಯ್ದಿರಿಸಲಾಗಿದೆ.

ಹೆಸರು ಬದಲಾವಣೆ

ಮಹಾರಾಷ್ಟ್ರದ ಔರಂಗಾಬಾದ್ ಅನ್ನು ಸಂಭಾಜಿನಗರ ಎಂದು, ಉಸ್ಮಾನಾಬಾದ್ ನಗರವನ್ನು ಧಾರಾಶಿವ ಎಂದು ಮರುನಾಮಕರಣ ಮಾಡಲು ಮಹಾರಾಷ್ಟ್ರ ಸಚಿವ ಸಂಪುಟ ಬುಧವಾರ ತೀರ್ಮಾನ ತೆಗೆದುಕೊಂಡಿದೆ. ನವಿ ಮುಂಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹಿರಿಯ ನಾಯಕ ಬಿ.ಡಿ. ಪಾಟೀಲ್ ಹೆಸರು ಇರಿಸಲು ನಿರ್ಧರಿಸಲಾಗಿದೆ. ಅಚ್ಚರಿಯೆಂದರೆ, ವಿಮಾನ ನಿಲ್ದಾಣಕ್ಕೆ ಶಿವಸೇನಾ ಸಂಸ್ಥಾಪಕ ಬಾಳಾ ಠಾಕ್ರೆ ಅವರ ಹೆಸರು ಇಡುವಂತೆ ರಾಜ್ಯ ಯೋಜನಾ ಆಯೋಗ ಶಿಫಾರಸು ಮಾಡಿತ್ತು.

ಸಂಕ್ಷಿಪ್ತ ಸುದ್ದಿ

ಆಗಸ್ಟ್ 6ಕ್ಕೆ ಉಪರಾಷ್ಟ್ರಪತಿ ಚುನಾವಣೆ ನಿಗದಿ

ನವದೆಹಲಿ (ಪಿಟಿಐ): ಉಪರಾಷ್ಟ್ರಪತಿ ಸ್ಥಾನಕ್ಕೆ ಆಗಸ್ಟ್ 6ರಂದು ಚುನಾವಣೆ ನಿಗದಿಯಾಗಿದ್ದು, ಜುಲೈ 5ರಂದು ಅಧಿಸೂಚನೆ ಹೊರಬೀಳಲಿದೆ ಎಂದು ಚುನಾವಣಾ ಆಯೋಗ ಬುಧವಾರ ತಿಳಿಸಿದೆ.

ನಾಮಪತ್ರ ಸಲ್ಲಿಸಲು ಜುಲೈ 19 ಕೊನೆಯ ದಿನ. ನಾಮಪತ್ರಗಳ ಪರಿಶೀಲನೆ ಜುಲೈ 20ರಂದು ನಡೆಯಲಿದ್ದು, ನಾಮಪತ್ರಗಳ ವಾಪಸಾತಿಗೆ ಜುಲೈ 22 ಕೊನೆಯ ದಿನವಾಗಿದೆ. ಮತದಾನ ಆಗಸ್ಟ್ 6ರಂದು ನಡೆಯಲಿದ್ದು, ಅಂದೇ ಮತ ಎಣಿಕೆಯೂ ನಡೆಯಲಿದೆ ಎಂದು ಆಯೋಗ ತಿಳಿಸಿದೆ.

ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಚುನಾವಣಾ ಆಯುಕ್ತ ಅನುಪ್ ಚಂದ್ರ ಪಾಂಡೆ ಅವರು ಚುನಾವಣೆಯ ವೇಳಾಪಟ್ಟಿ ಅಂತಿಮಗೊಳಿಸಿದ್ದಾರೆ.

ಜುಲೈ 15ರೊಳಗೆ ಸಿಬಿಎಸ್‌ಇ ಫಲಿತಾಂಶ?

ನವದೆಹಲಿ (ಪಿಟಿಐ): 'ಸಿಬಿಎಸ್‌ಇ ಮತ್ತು ಸಿಐಎಸ್‌ಸಿಇಯ 10ನೇ ಮತ್ತು 12ನೇ ತರಗತಿ ಬೋರ್ಡ್ ಪರೀಕ್ಷೆಗಳ ಫಲಿತಾಂಶವು ಜುಲೈ 15ರೊಳಗೆ ಪ್ರಕಟವಾಗುವ ಸಾಧ್ಯತೆಯಿದೆ' ಎಂದು ಬುಧವಾರ ಮೂಲಗಳು ತಿಳಿಸಿವೆ.

ಸಿಬಿಎಸ್‌ಇಯ 10ನೇ ತರಗತಿಯ ಪರೀಕ್ಷೆಗಳು ಮೇ 24ರಂದು ಹಾಗೂ 12ನೇ ತರಗತಿಯ ಪರೀಕ್ಷೆಗಳು ಜೂನ್ 15ರಂದು ಮುಕ್ತಾಯವಾಗಿದ್ದವು. ಸಿಐಎಸ್‌ಸಿಇಯ 10ನೇ ತರಗತಿ ಪರೀಕ್ಷೆಗಳು ಮೇ 20ರಂದು ಹಾಗೂ 12ನೇ ತರಗತಿಯ ಪರೀಕ್ಷೆಗಳು ಜೂನ್ 13ರಂದು ಮುಕ್ತಾಯವಾಗಿದ್ದವು.

ತಿದ್ದೋಲೆ ಬೇಡ: ಕುವೆಂಪು ಹೋರಾಟ ಸಮಿತಿ ಆಗ್ರಹ

'ಚಕ್ರತೀರ್ಥ ಬಂಧಿಸಿ, ನಾಗೇಶ್ ವಜಾಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ನಾಡು–ನುಡಿ, ಧ್ವಜ, ಕುವೆಂಪು ಅವರನ್ನು ಅವಮಾನಿಸಿದ ರೋಹಿತ್ ಚಕ್ರತೀರ್ಥನನ್ನು ಬಂಧಿಸಬೇಕು' ಎಂದು ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ಆಗ್ರಹಿಸಿದೆ.

ಅಲ್ಲದೆ, ಚಕ್ರತೀರ್ಥ ಸಮಿತಿ ಪರಿಷ್ಕರಿಸಿರುವ ಪಠ್ಯಪುಸ್ತಕಗಳನ್ನು ರದ್ದುಪಡಿಸಿ, ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಿತಿ ರೂಪಿಸಿದ್ದ ಪಠ್ಯಗಳನ್ನು ಮುಂದುವರೆಸಬೇಕು ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಆಡಿಟರ್ ನಾಗರಾಜ್ ಒತ್ತಾಯಿಸಿದ್ದಾರೆ.

ಪಠ್ಯಪುಸ್ತಕ ಪರಿಷ್ಕರಣೆಗೆ ಕಾರಣವಾಗಿ ಸರ್ಕಾರದ ಬೊಕ್ಕಸಕ್ಕೆ ಬಹು ಕೋಟಿ ಆರ್ಥಿಕ ನಷ್ಟ ಉಂಟು ಮಾಡಿ, ಚಕ್ರತೀರ್ಥ ಅವರನ್ನು ಪದೇ ಪದೇ ಸಮರ್ಥಿಸುವ ಮತ್ತು ಸಂವಿಧಾನಕ್ಕೆ ವಿರುದ್ಧವಾಗಿ ಸ್ವಜಾತಿ ಪ್ರೇಮ ತೋರುತ್ತಿರುವ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರನ್ನು ಸಂಪುಟದಿಂದ ವಜಾ ಮಾಡಬೇಕು ಎಂದೂ ಹೇಳಿದ್ದಾರೆ.

ಸರ್ಕಾರ ಪ್ರಕಟಿಸಿರುವ ತಿದ್ದೋಲೆ ಪಠ್ಯಕ್ರಮದ ಶೈಕ್ಷಣಿಕ ಪಾವಿತ್ರ್ಯತೆಗೆ ಅನುಗುಣವಾಗಿಲ್ಲ. ಅದು ಸೂಚಿಸಿರುವ ತಿದ್ದುಪಡಿಗಳಲ್ಲಿ ಕೆಲವು ಸಮುದಾಯಗಳನ್ನು ಸಮಾಧಾನಪಡಿಸುವ ಉದ್ದೇಶವಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಇದು ಕೇವಲ ಕಣ್ಣೊರೆಸುವ ತಂತ್ರ. ಈ ತಿದ್ದುಪಡಿಗಳನ್ನು ರಾಜ್ಯದ ಎಲ್ಲಾ ಶಾಲೆಗಳಿಗೆ ಕೇವಲ ಒಂದು ಪ್ರತಿ ನೀಡುವಂತೆ ಆದೇಶಿಸಿರುವುದು ಮಹಾ ತಪ್ಪು ಎಂದಿದ್ದಾರೆ.

ರಾಜ್ಯದಲ್ಲಿ 50 ಸಾವಿರಕ್ಕೂ ಹೆಚ್ಚು ಶಾಲೆಗಳಿವೆ. ಶಾಲೆಯ ಒಬ್ಬ ಅಧ್ಯಾಪಕನಿಗೆ ತಿದ್ದೋಲೆ ತಲುಪಿದರೆ ಮಕ್ಕಳಿಗೆ ಪ್ರಯೋಜನವಾಗುವುದಿಲ್ಲ. ಶಾಲೆಯ ಎಲ್ಲ ವಿದ್ಯಾರ್ಥಿಗಳ ಅಧ್ಯಯನಕ್ಕೆ ಈ ತಿದ್ದೋಲೆ ಗೊಂದಲ ಹಾಗೂ ತೊಂದರೆಯನ್ನು ಉಂಟು ಮಾಡಬಹುದೇ ವಿನಾ ಮೂಲ ಸಮಸ್ಯೆಗೆ ಪರಿಹಾರ ಒದಗಿಸುವುದಿಲ್ಲ. ಮಕ್ಕಳು ತಮ್ಮ ಕೈಯಲ್ಲಿರುವ ಪಠ್ಯಪುಸ್ತಕಗಳನ್ನು ಮಾತ್ರ ಅಧ್ಯಯನ ನಡೆಸುತ್ತಾರೆಯೇ ಹೊರತು ಈ ತಿದ್ದೋಲೆಯ ಯಾವ ಅಂಶಗಳೂ ಅವರಿಗೆ ತಲುಪದೇ ಹೋಗುವ ಸಾಧ್ಯತೆಗಳೇ ಹೆಚ್ಚು. ಆದ್ದರಿಂದ ಅಸಂಬದ್ಧವಾದ ತಿದ್ದೋಲೆ ರೂಪದ ಆದೇಶವನ್ನು ಸರ್ಕಾರ ತಡೆ ಹಿಡಿಯಬೇಕು ಎಂದು ಹೇಳಿದ್ದಾರೆ.

10ನೇ ತರಗತಿಯಲ್ಲಿ ಕೇವಲ ಬ್ರಾಹ್ಮಣ ವರ್ಗಕ್ಕೆ ಸೇರಿದ ಹೆಡಗೇವಾರ್, ಬನ್ನಂಜೆ ಗೋವಿಂದಾಚಾರ್ಯ, ಶತಾವಧಾನಿ ಆರ್.ಗಣೇಶ್, ಸುಶ್ರುತ ದೊಡ್ಡೇರಿ ಮುಂತಾದವರ ಬರಹ– ಭಾಷಣಗಳು ಮತ್ತು ವಸ್ತು ವಿಷಯಗಳು ಬ್ರಾಹ್ಮಣ್ಯಕ್ಕೆ ಸಂಬಂಧಪಟ್ಟಿವೆ. ಇವುಗಳನ್ನು ಕೈಬಿಡಬೇಕು. ಇವರು ಕನ್ನಡ ನಾಡು–ನುಡಿಗೆ ಸಂಬಂಧಪಟ್ಟವರಲ್ಲ. ಅವರಲ್ಲಿ ವಿದ್ವತ್ತು, ಸಾಹಿತ್ಯ, ಸಾಮಾಜಿಕ ಪ್ರಜ್ಞೆ ಮತ್ತು ಇತಿಹಾಸದ ಅರಿವಿಲ್ಲ. ಇವರ ಪಾಠಗಳನ್ನು ಓದಿದರೆ ಒಂದು ಪೀಳಿಗೆ ಭವಿಷ್ಯವೇ ನಾಶವಾಗುವುದರಲ್ಲಿ ಸಂದೇಹವಿಲ್ಲ ಎಂದು ಕಿಡಿಕಾರಿದ್ದಾರೆ.

ನಾರಾಯಣ ಗುರುಗಳ ಪಾಠ ಮರು ಸೇರ್ಪಡೆಗೆ ಆಗ್ರಹ

ಬೆಂಗಳೂರು: 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ನಾರಾಯಣ ಗುರುಗಳ ಅಧ್ಯಾಯವನ್ನು ಮರು ಸೇರ್ಪಡೆ ಮಾಡಬೇಕು ಎಂದು ನಾರಾಯಣ ಗುರು ವಿಚಾರ ವೇದಿಕೆ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ನಾಯ್ಕ ಸುಂಟ್ರಹಳ್ಳಿ, 'ಪಠ್ಯಪುಸ್ತಕ ಮರು ಪರಿಷ್ಕರಣೆಯಲ್ಲಿ ಬಸವಣ್ಣ, ಕುವೆಂಪು, ಅಂಬೇಡ್ಕರ್ ಅವರ ಪಠ್ಯಗಳಲ್ಲಿ ಆದ ಲೋಪ–ದೋಷಗಳನ್ನು ಲಿಂಗಾಯತರು ಮತ್ತು ಒಕ್ಕಲಿಗರು ಖಂಡಿಸಿದರು. ಆ ಸಮುದಾಯದ ಸ್ವಾಮೀಜಿಗಳು ಹೋರಾಟದ ಎಚ್ಚರಿಕೆ ನೀಡಿದ ತಕ್ಷಣ ಸರ್ಕಾರ ರೋಹಿತ್ ಚಕ್ರತೀರ್ಥ ಸಮಿತಿಯನ್ನು ವಿಸರ್ಜಿಸಿತು. ಕುವೆಂಪು ಮತ್ತು ಬಸವಣ್ಣನವರ ಪಠ್ಯಗಳನ್ನು ತಿದ್ದುಪಡಿ ಮಾಡುವ ಮೂಲಕ ಮೇಲ್ವರ್ಗಗಳ ಓಲೈಕೆಗೆ ಮುಂದಾಯಿತು' ಎಂದರು.

'ನಾರಾಯಣ ಗುರುಗಳ ಜೀವನ ಚರಿತ್ರೆಯ ಪಠ್ಯವನ್ನು ಸಮಾಜ ವಿಜ್ಞಾನದಲ್ಲಿ ಕೈಬಿಟ್ಟು ಕನ್ನಡ ವಿಷಯಕ್ಕೆ ಸೇರಿಸಲಾಗಿದೆ. ಇದು ಸಮುದಾಯದ ಕಣ್ಣಿಗೆ ಮಣ್ಣು ಎರಚುವ ತಂತ್ರ. ತಪ್ಪುಗಳಿಂದಲೇ ತುಂಬಿರುವ ಹೊಸ ಪಠ್ಯವನ್ನು ಮಕ್ಕಳಿಗೆ ವಿತರಿಸದೇ ಹಳೆಯ ಪಠ್ಯವನ್ನೇ ಮುಂದುವರಿಸಬೇಕು' ಎಂದು ಒತ್ತಾಯಿಸಿದರು.

'ಬಿಲ್ಲವ, ಈಡಿಗ, ನಾಮಧಾರಿ ಸೇರಿ 26 ಪಂಗಡಗಳ ಅಭಿವೃದ್ಧಿಗೆ ನಾರಾಯಣ ಗುರುಗಳ ಹೆಸರಿನಲ್ಲಿ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಿ, ಸಮುದಾಯದ ಅಭಿವೃದ್ಧಿಗೆ ₹500 ಕೋಟಿ ಮೀಸಲಿಡಬೇಕು' ಎಂದು ಆಗ್ರಹಿಸಿದರು.

ಕುದ್ಮುಲ್ ರಂಗರಾವ್ ಪಾಠ ಏಕಿಲ್ಲ?



ವಿ.ಶ್ರೀನಿವಾಸ ಪ್ರಸಾದ್

ಮೈಸೂರು: 'ಮಾನವೀಯತೆಯೇ ಇಲ್ಲದ ಸಮಾಜವನ್ನು ಸುಧಾರಿಸಲು ಕುದ್ಮುಲ್ ರಂಗರಾಯರು ಶ್ರಮಿಸಿದರು. ಪಠ್ಯಪುಸ್ತಕ ಪರಿಷ್ಕರಣೆ ಮಾಡಿರುವವರು ರಂಗರಾವ್ ಅವರ ಪಾಠವನ್ನು ಸೇರಿಸಿಲ್ಲವೇಕೆ' ಎಂದು ಸಂಸದ ವಿ. ಶ್ರೀನಿವಾಸ ಪ್ರಸಾದ್ ಪ್ರಶ್ನಿಸಿದರು.

ನಗರದ ವಿಜ್ಞಾನ ಭವನದಲ್ಲಿ ಸಾಮಾಜಿಕ ನ್ಯಾಯ ವೇದಿಕೆ ವತಿಯಿಂದ ಬುಧವಾರ ಏರ್ಪಡಿಸಿದ್ದ ಕುದ್ಮುಲ್ ರಂಗರಾವ್ ಅವರ 163ನೇ ಜನ್ಮದಿನಾಚರಣೆಯಲ್ಲಿ ಅವರು ಮಾತನಾಡಿ, 'ದಲಿತರು, ಅಸ್ಪೃಶ್ಯರನ್ನು ಸಮಾಜವು ರೌರವ ನರಕದಲ್ಲಿಟ್ಟಿದೆ. ದಲಿತರು ವರ್ಣಗಳಲ್ಲಿ ಶೂದ್ರರೂ ಅಲ್ಲ. ಪಂಚಮರೆಂದು ಆಚೆಯಿಟ್ಟಿದೆ. ಪಂಚಮರ ಕಲ್ಯಾಣಕ್ಕಾಗಿ ರಂಗರಾವ್ ಜೀವನವಿಡಿ ಹೋರಾಡಿದರು' ಎಂದರು.

'ಕಯ್ಯಾರರ ಹೆಸರು ಸೇರಿಸಲು ಹೋರಾಟ'

ಮಂಗಳೂರು: ಏಳನೇ ತರಗತಿಯ ಸಮಾಜವಿಜ್ಞಾನ ಪಠ್ಯಪುಸ್ತಕದಲ್ಲಿ ಕಯ್ಯಾರ ಕಿಞ್ಞಣ್ಣ ರೈ ಅವರ ಹೆಸರನ್ನು ಮರುಸೇರ್ಪಡೆಗೊಳಿಸಬೇಕು ಎಂದು ಒತ್ತಾಯಿಸಿ ಗ್ರಾಮ ಮಟ್ಟದಿಂದ ಅಂತರರಾಷ್ಟ್ರೀಯ ಮಟ್ಟದವರೆಗೆ ಆಂದೋಲನ ಹಮ್ಮಿಕೊಳ್ಳಲು ಬಂಟರ ಯಾನೆ ನಾಡವರ ಮಾತೃ ಸಂಘ ನಿರ್ಧರಿಸಿದೆ.

'ಗುರುವಾರದಿಂದ ಮಂಗಳೂರಿನಲ್ಲಿ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಕಾರ್ಯಕಾರಿ ಸಮಿತಿ ಸಭೆ ನಡೆಯಲಿದೆ. ಇದರಲ್ಲಿ, ಹೋರಾಟದ ರೂಪುರೇಷೆ ನಿರ್ಧರಿಸಲಾಗುವುದು' ಎಂದು ಸಂಘದ ಅಧ್ಯಕ್ಷ ಮಾಲಾಡಿ ಅಜಿತ್ ಕುಮಾರ್ ರೈ ಬುಧವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ನಿಜಲಿಂಗಪ್ಪ ಮನೆ ನೋಂದಣಿಗೆ ತೊಡಕು

ಚಿತ್ರದುರ್ಗ: ಮಾಜಿ ಮುಖ್ಯಮಂತ್ರಿ, ದಿವಂಗತ ಎಸ್. ನಿಜಲಿಂಗಪ್ಪ ಅವರ ಇಲ್ಲಿನ ಮನೆಯನ್ನು ಸ್ಮಾರಕ ಮಾಡುವ ನಿಟ್ಟಿನಲ್ಲಿ ಸರ್ಕಾರಕ್ಕೆ ನೋಂದಣಿ ಮಾಡಿಕೊಡುವುದಕ್ಕೆ ತಾಂತ್ರಿಕ ತೊಡಕು ಎದುರಾಗಿದೆ. ನೋಂದಣಿಗಾಗಿಯೇ ಅಮೆರಿಕದಿಂದ ಬಂದಿದ್ದ ಅವರ ಮೊಮ್ಮಗ ಬುಧವಾರ ನಿರಾಸೆಯಿಂದ ಹಿಂದಿರುಗಿದ್ದಾರೆ.

ಸ್ಮಾರಕವಾಗಿ ಪರಿವರ್ತಿಸುವ ಉದ್ದೇಶದಿಂದ ಮನೆಯ ನೋಂದಣಿ ಪ್ರಕ್ರಿಯೆಗೆ ಜಿಲ್ಲಾಡಳಿತ ಬುಧವಾರ ಸಿದ್ಧತೆ ಮಾಡಿಕೊಂಡಿತ್ತು. ನಿಜಲಿಂಗಪ್ಪನವರ ಪುತ್ರ ಎಸ್.ಎನ್. ಕಿರಣ್‌ಶಂಕರ್ ಹಾಗೂ ಮೊಮ್ಮಗ ಅಮೆರಿಕದಲ್ಲಿರುವ ಎಸ್.ಕೆ. ವಿನಯ್ ಕೂಡ ಜಿಲ್ಲಾಧಿಕಾರಿ ಕಚೇರಿಗೆ ಬಂದಿದ್ದರು.


ನಿಜಲಿಂಗಪ್ಪ ಅವರ ನಿವಾಸವು ಪುತ್ರ ಕಿರಣ್‌ಕುಮಾರ್ ಅವರ ಹೆಸರಲ್ಲಿದೆ. ನಿಜಲಿಂಗಪ್ಪ ಅವರೇ ಬರೆದಿಟ್ಟ ವಿಲ್‌ನಲ್ಲಿ ಕಿರಣ್‌ಕುಮಾರ್ ಅವರ ಪುತ್ರ ವಿನಯ್ ಅವರಿಗೆ ಮನೆ ಸೇರಬೇಕೆಂದು ಉಲ್ಲೇಖಿಸಲಾಗಿದೆ. ವಿಲ್‌ನಲ್ಲಿ ತಾಂತ್ರಿಕ ಸಮಸ್ಯೆಗಳಿವೆ ಎಂಬುದಾಗಿ ಉಪನೋಂದಣಾಧಿಕಾರಿ ನೋಂದಣಿಗೆ ಹಿಂದೇಟು ಹಾಕಿದ್ದಾರೆ. ಇದರಿಂದ ಇಡೀ ಪ್ರಕ್ರಿಯೆ ನನೆಗುದಿಗೆ ಬಿದ್ದಂತಾಗಿದೆ.

ಈ ನಿವಾಸವನ್ನು ಸ್ಮಾರಕವನ್ನಾಗಿ ಅಭಿವೃದ್ಧಿಪಡಿಸುವುದಾಗಿ ಸರ್ಕಾರ 2020–21ರ ಬಜೆಟ್‌ನಲ್ಲಿ ಘೋಷಿಸಿತ್ತು. ವಾರಸುದಾರರಿಂದ ಮನೆ ಖರೀದಿಸಿ ಅಭಿವೃದ್ಧಿಪಡಿಸಲು ₹ 5 ಕೋಟಿ ಅನುದಾನವನ್ನು ಮೀಸಲಿಟ್ಟಿತ್ತು. ವಿ.ಪಿ. ಬಡಾವಣೆಯಲ್ಲಿರುವ ಮನೆಗೆ ಲೋಕೋಪಯೋಗಿ ಇಲಾಖೆ ₹ 4.18 ಕೋಟಿ ಮೌಲ್ಯ ನಿಗದಿಪಡಿಸಿತ್ತು.

ನಿಜಲಿಂಗಪ್ಪ ಅವರ ಮಗನ ಹೆಸರಿನಲ್ಲಿ ಮನೆ ಖಾತೆಯಿದೆ. ಮೊಮ್ಮಗನ ಹೆಸರಿನಲ್ಲಿ ವಿಲ್ ಇದೆ. ತಾಂತ್ರಿಕ ತೊಡಕು ಎದುರಾಗಿರುವುದರಿಂದ ತಡೆಹಿಡಿಯಲಾಗಿದೆ.
ಕವಿತಾ ಎಸ್. ಮನ್ನಿಕೇರಿ, ಜಿಲ್ಲಾಧಿಕಾರಿ

ನಿಜಲಿಂಗಪ್ಪ ಅವರ ನಿವಾಸವನ್ನು ಸ್ಮಾರಕವಾಗಿಸುವ ನಾಲ್ಕು ವರ್ಷಗಳ ಪ್ರಯತ್ನ ಫಲಿಸುತ್ತಿಲ್ಲ. ಸರ್ಕಾರ ಸರಿಯಾದ ರೀತಿಯಲ್ಲಿ ಸ್ಪಂದಿಸುತ್ತಿಲ್ಲ.
ಮೋಹನ್ ಕೊಂಡಜ್ಜಿ
ವಿಧಾನಪರಿಷತ್ ಮಾಜಿ ಸದಸ್ಯ

ಷೇರುಪೇಟೆ ವಹಿವಾಟು 150



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	15,850
ಇಂದಿನ ಅಂತ್ಯ	15,799
▼	51
ದಿನದ ಕನಿಷ್ಠ	15,687

ವಿನಿಮಯ ದರ

$ ಡಾಲರ್	79.03
£ ಪೌಂಡ್	95.96
€ ಯುರೊ	830
¥ ಯೆನ್ (100ಕ್ಕೆ)	58

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹560
12 ಮೊಟ್ಟೆಗೆ ₹72
ಮೈಸೂರು
100 ಮೊಟ್ಟೆಗೆ ₹560

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1350 (1355)
ಸೂರ್ಯಕಾಂತಿ (ರಿಫೈನ್ಡ್)	₹1640 (1650)
ಪಾಮೋಲಿನ್	₹1275 (1277)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹400-580
ದ್ವಿತಳಿ (ಬಿ.ವಿ) ₹295-770

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)


ಆರ್ಎಸ್ಎಸ್-4 ₹175
ಆರ್ಎಸ್ಎಸ್-5 ₹166
ಗುಡ್ ಲಾಟ್ ₹157.50

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ನಾಲ್ಕು ದಿನಗಳ ಓಟಕ್ಕೆ ತಡೆ

ಲಾಭಗಳಿಕೆಗೆ ವಹಿವಾಟಿಗೆ ಐ.ಟಿ., ಎಫ್‌ಎಂಸಿಜಿ ಷೇರುಗಳು



ಮುಂಬೈ (ಪಿಟಿಐ): ಐ.ಟಿ., ಎಫ್‌ಎಂಸಿಜಿ ಮತ್ತು ಬ್ಯಾಂಕಿಂಗ್ ಷೇರುಗಳು ಲಾಭಗಳಿಕೆಯ ಒತ್ತಡಕ್ಕೆ ಒಳಗಾದ ಕಾರಣದಿಂದಾಗಿ ಷೇರುಪೇಟೆಯಲ್ಲಿ ನಾಲ್ಕು ದಿನಗಳಿಂದ ನಡೆದಿದ್ದ ಸೂಚ್ಯಂಕಗಳ ಓಟಕ್ಕೆ ಬುಧವಾರ ತಡೆಬಿದ್ದಿತು.

ವಿದೇಶಿ ಬಂಡವಾಳ ಹೊರಹರಿವು ಮುಂದುವರಿದಿರುವುದು ಹಾಗೂ ಜಾಗತಿಕ ವಿದ್ಯಮಾನಗಳ ಪರಿಣಾಮಕ್ಕೆ ಒಳಗಾಗಿಯೂ ನಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 150 ಅಂಶ ಇಳಿಕೆ ಕಂಡು 53,027ಕ್ಕೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 51 ಅಂಶ ಇಳಿಕೆಯಾಗಿ 15,799ರಲ್ಲಿ ವಹಿವಾಟು ಅಂತ್ಯವಾಯಿತು.

'ಹಣದುಬ್ಬರವು ಅನಿಯಂತ್ರಿತವಾಗಿದ್ದು, ನಿರಂತರವಾಗಿ ಏರಿಕೆ ಕಾಣುತ್ತಿರುವುದರಿಂದ ಗ್ರಾಹಕರ ವಿಶ್ವಾಸವು ತೀವ್ರವಾಗಿ ಕುಸಿಯುತ್ತಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

'ಸೌದಿ ಅರೇಬಿಯಾದಂತಹ ಪ್ರಮುಖ ತೈಲ ಉತ್ಪಾದಕ ದೇಶಗಳಿಂದ ಅಲ್ಪಾವಧಿಯಲ್ಲಿ ಕಚ್ಚಾ ತೈಲೋತ್ಪಾದನೆ ಹೆಚ್ಚಳ ಮಾಡಲು ಸಾಧ್ಯವಾಗದೇ ಇರುವುದರಿಂದ ಕಚ್ಚಾ ತೈಲ ದರ ಏರಿಕೆ ಆಗುತ್ತಿದೆ. ಇದರ ಜೊತೆಗೆ ಜಾಗತಿಕ ಷೇರುಪೇಟೆಗಳಲ್ಲಿ ಇಳಿಕೆಯ ಪರಿಣಾಮಗಳನ್ನೂ ಭಾರತವು ಸಹಿಸಿಕೊಳ್ಳಬೇಕಾಗಿದೆ. ಹೀಗಿದ್ದರೂ ಪಿಎಸ್‌ಯು, ಲೋಹ ಹಾಗೂ ತೈಲ ಮತ್ತು ಅನಿಲ ಕಂಪನಿಗಳ ಷೇರುಗಳ ಗಳಿಕೆಯಿಂದಾಗಿ ದೇಶಿ ಮಾರುಕಟ್ಟೆಯು ಇನ್ನಷ್ಟು ನಷ್ಟ ಕಾಣುವುದು ತಪ್ಪಿತು' ಎಂದು ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.31ರಷ್ಟು ಏರಿಕೆ ಕಂಡು ಒಂದು ಬ್ಯಾರಲ್‌ಗೆ 118.3 ಡಾಲರ್‌ಗಳಂತೆ ಮಾರಾಟವಾಯಿತು.

₹ 79.03ಕ್ಕೆ ಕುಸಿದ ರೂಪಾಯಿ



ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಬುಧವಾರ 18 ಪೈಸೆ ಇಳಿಕೆ ಆಗಿ ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹ 79.03ಕ್ಕೆ ಕುಸಿಯಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆ, ಡಾಲರ್ ಮೌಲ್ಯ ವೃದ್ಧಿ ಹಾಗೂ ವಿದೇಶಿ ಬಂಡವಾಳ ಹೊರಹರಿವು ರೂಪಾಯಿ ಮೌಲ್ಯ ಕುಸಿತಕ್ಕೆ ಪ್ರಮುಖ ಕಾರಣಗಳಾಗಿವೆ.

ದಿನದ ವಹಿವಾಟಿನ ಒಂದು ಹಂತದಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ₹ 79.05ಕ್ಕೆ ಇಳಿಕೆ ಆಗಿತ್ತು.

ಈ ತಿಂಗಳಿನಲ್ಲಿ ಇದುವರೆಗೆ ರೂಪಾಯಿ ಮೌಲ್ಯವು ಡಾಲರ್ ಎದುರು ಶೇಕಡ 1.97ರಷ್ಟು ಕುಸಿತ ಕಂಡಿದೆ. ಈ ವರ್ಷದಲ್ಲಿ ಈವರೆಗೆ ರೂಪಾಯಿ ಮೌಲ್ಯವು ಶೇ 6.39ರಷ್ಟು ಇಳಿಕೆ ಆಗಿದೆ.

'ವಿದೇಶಿ ಬಂಡವಾಳ ಹೊರಹರಿವು, ಅಮೆರಿಕದ ಡಾಲರ್ ಮೌಲ್ಯ ವೃದ್ಧಿ ಹಾಗೂ ಕಚ್ಚಾ ತೈಲ ದರ ಏರಿಕೆ ಆಗುತ್ತಿರುವುದರಿಂದ ಭಾರತದ ರೂಪಾಯಿ ಈ ವರ್ಷದ ಆರಂಭದಿಂದಲೂ ಇಳಿಮುಖವಾಗಿದೆ' ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಉಪಾಧ್ಯಕ್ಷ ಸುಗಂಧ ಸಚ್‌ದೇವ್ ಹೇಳಿದ್ದಾರೆ.

ಕರ್ಣಾಟಕ ಬ್ಯಾಂಕ್: ಠೇವಣಿ ಬಡ್ಡಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮಂಗಳೂರು: ₹2 ಕೋಟಿಗೂ ಕಡಿಮೆ ಮೊತ್ತದ, ಆಂತರಿಕ ಮತ್ತು ಎನ್‌ಆರ್‌ಐ ಠೇವಣಿ ಮೇಲಿನ ಬಡ್ಡಿ ದರವನ್ನು ಹೆಚ್ಚಿಸಿರುವುದಾಗಿ ಕರ್ಣಾಟಕ ಬ್ಯಾಂಕ್ ತಿಳಿಸಿದೆ.

₹2 ಕೋಟಿಗಿಂತ ಕಡಿಮೆ ಮೊತ್ತದ, ಒಂದರಿಂದ ಎರಡು ವರ್ಷ ಅವಧಿಯ ಠೇವಣಿಗೆ ಶೇ 5.35 ಹಾಗೂ ಎರಡು ವರ್ಷ ಮೇಲ್ಪಟ್ಟು, ಐದು ವರ್ಷಗಳವರೆಗಿನ ಅವಧಿಯ ಠೇವಣಿಗೆ ಶೇ 5.50 ಬಡ್ಡಿ ನಿಗದಿಗೊಳಿಸಲಾಗಿದೆ. ಹೊಸ ಬಡ್ಡಿ ದರವು ಜುಲೈ 1ರಿಂದ ಅನ್ವಯವಾಗಲಿದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

29-6-2022

ಜಾವಾ 70/80(ಹೊಸ)	10800-10850
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10850-10950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1300 (1300)
ಪಾಮ್ ವಾರದ ಡೆಲಿವರಿ	1573 (1275)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1630)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,850 (50,750)
ಬೆಳ್ಳಿ ಕೆ.ಜಿ 59,800 (60,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	475

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-45000
ಹಳತು	46000-54500

ಕುಮಟ

ಚಿಪ್ಪು	26569-31119
ಕೋಕ	18089-30119
ಹಳೆಚಾಲಿ	46089-47219
ಹೊಸಚಾಲಿ	35599-39509

ಪುತ್ತೂರು

ಕೋಕ	11000-26000
ಹೊಸತು	30500-43000

ಶಿವಮೊಗ್ಗ

ಬೆಟ್ಟೆ	49509-54222
ಗೊರಬಲು	17019-37710
ರಾಶಿ	46399-49549

ಸಿದ್ದಾಪುರ

ಬಿಳಿಗೋಟು	24911-31508
ಚಾಲಿ	34069-38599
ಕೋಕ	22699-31799
ಕೆಂಪುಗೋಟು	30899-31680
ರಾಶಿ	42509-48699
ತಟ್ಟಿಬೆಟ್ಟೆ	39019-45899

ಶಿರಸಿ

ಬೆಟ್ಟೆ	36321-43611
ಬಿಳಿಗೋಟು	21099-32869
ಚಾಲಿ	35618-39372
ರಾಶಿ	46089-48909

ತಿಪಟೂರು ಕೊಬ್ಬರಿ

ಕನಿಷ್ಠ	13000
ಗರಿಷ್ಠ	14531
ಮಾದರಿ	14500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15750	15700	217.75 ಸೆಂಟ್ಸ್
ಎಸಿ	---	8400	8650	
ಆರ್‌ಪಿ	---	9500	9900	ಲಂಡನ್
ಆರ್‌ಸಿ	---	4400	4575	2017 ಡಾಲರ್ಸ್

ಕ್ಯಾಸಿನೊ, ಕುದುರೆ ರೇಸ್, ಆನ್‌ಲೈನ್ ಆಟಗಳಿಗೆ ತೆರಿಗೆ: ತೀರ್ಮಾನಕ್ಕೆ ಬಾರದ ಮಂಡಳಿ

ಜಿಎಸ್‌ಟಿ ಪರಿಹಾರ: ನಿರ್ಧಾರ ಮುಂದಕ್ಕೆ

ಚಂಡೀಗಢ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಜಾರಿಗೆ ತಂದಿದ್ದರಿಂದಾಗಿ ರಾಜ್ಯಗಳಿಗೆ ಆಗುವ ವರಮಾನ ನಷ್ಟಕ್ಕೆ ಪರಿಹಾರ ಕೊಡುವುದನ್ನು ಇನ್ನೂ ಕೆಲವು ವರ್ಷ ಮುಂದುವರಿಸಬೇಕು ಎಂದು 12 ರಾಜ್ಯಗಳು ಒತ್ತಾಯಿಸಿವೆ.

ಆದರೆ, ಜಿಎಸ್‌ಟಿ ಮಂಡಳಿಯು ಈ ವಿಚಾರವಾಗಿ ಸದ್ಯಕ್ಕೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ರಾಜ್ಯಗಳಿಗೆ ಪರಿಹಾರ ನೀಡುವ ಸೌಲಭ್ಯವು ಗುರುವಾರಕ್ಕೆ (ಜೂನ್ 30) ಕೊನೆಗೊಳ್ಳಲಿದೆ.

ಪರಿಹಾರದ ವಿಚಾರವಾಗಿ ಅಂತಿಮ ತೀರ್ಮಾನವನ್ನು ಆಗಸ್ಟ್ ಮೊದಲ ವಾರದಲ್ಲಿ ನಡೆಯುವ ಸಭೆಯಲ್ಲಿ ಕೈಗೊಳ್ಳುವ ನಿರೀಕ್ಷೆ ಇದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

'ಜಿಎಸ್‌ಟಿ ಪರಿಹಾರ ಕುರಿತು 16 ರಾಜ್ಯಗಳು ಅಭಿಪ್ರಾಯ ಮಂಡಿಸಿವೆ. ಈ ಪೈಕಿ ಮೂರರಿಂದ ನಾಲ್ಕು ರಾಜ್ಯಗಳು, ಪರಿಹಾರವನ್ನು ನೆಚ್ಚಿಕೊಳ್ಳಬಾರದು, ತಾವು ಸ್ವಂತ ಕಾಲಮೇಲೆ ನಿಂತುಕೊಳ್ಳಬೇಕು ಎಂದು ಹೇಳಿವೆ' ಎಂದು ನಿರ್ಮಲಾ ತಿಳಿಸಿದ್ದಾರೆ.

ರಾಜ್ಯಗಳಿಗೆ ಪರಿಹಾರದ ರೂಪದಲ್ಲಿ ನೀಡಲು ಅಗತ್ಯವಿರುವ ಹಣವನ್ನು ಕೆಲವು ಉತ್ಪನ್ನಗಳ ಮೇಲೆ ಸೆಸ್ ವಿಧಿಸುವ ಮೂಲಕ ಸಂಗ್ರಹಿಸಲಾಗುತ್ತಿದೆ.

ಬಿಜೆಪಿಯೇತರ ಪಕ್ಷಗಳ ಆಡಳಿತ ಇರುವ ಛತ್ತೀಸಗಢ, ಕೇರಳ ಮತ್ತು ರಾಜಸ್ಥಾನ ರಾಜ್ಯಗಳು ಪರಿಹಾರವನ್ನು 'ಇನ್ನೂ ಐದು ವರ್ಷಗಳಿಗೆ ನೀಡಬೇಕು' ಎಂದು ಆಗ್ರಹಿಸಿವೆ. ಇದಾಗಿದ್ದರೂ, ಜಿಎಸ್‌ಟಿ ವರಮಾನದಲ್ಲಿ ಶೇ 70ರಿಂದ ಶೇ 80ರಷ್ಟು ರಾಜ್ಯಗಳ ಪಾಲಿಗೆ ಬಿಟ್ಟುಕೊಡಬೇಕು ಎಂದು ಅವು ಆಗ್ರಹಿಸಿವೆ. ಬಿಜೆಪಿ ಆಡಳಿತ ಇರುವ ಕೇಂದ್ರಾಡಳಿತ ಪ್ರದೇಶ ಪುದುಚೇರಿ ಕೂಡ ಪರಿಹಾರ ನೀಡುವುದನ್ನು ಮುಂದುವರಿಸಬೇಕು ಎಂದು ಕೇಳಿದೆ.

ಕ್ಯಾಸಿನೊಗೆ ತೆರಿಗೆ ಸದ್ಯಕ್ಕಿಲ್ಲ: ಕ್ಯಾಸಿನೊ, ಕುದುರೆ ರೇಸ್ ಹಾಗೂ ಆನ್‌ಲೈನ್ ಆಟಗಳಿಗೆ ಶೇಕಡ 28ರಷ್ಟು ತೆರಿಗೆ ವಿಧಿಸುವ ಪ್ರಸ್ತಾವ ಕುರಿತು ಮಂಡಳಿಯು ತೀರ್ಮಾನ ಕೈಗೊಂಡಿಲ್ಲ.

ಕೆಲವು ಉತ್ಪನ್ನಗಳ ಮೇಲಿನ ತೆರಿಗೆ ಪ್ರಮಾಣ ಜಾಸ್ತಿ ಮಾಡಿರುವುದು ಹಣದುಬ್ಬರ ಹೆಚ್ಚಳಕ್ಕೆ ಕಾರಣವಾಗಬಹುದು ಎಂಬ ಅರಿವು ಜಿಎಸ್‌ಟಿ ಮಂಡಳಿಯ ಸದಸ್ಯರಿಗೆ ಇದೆ ಎಂದು ನಿರ್ಮಲಾ ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದ್ದಾರೆ.

'ಇದು ಎಲ್ಲ ಸಚಿವರಿಗೂ ಗೊತ್ತಿದೆ. ಅದನ್ನು ಮನಸ್ಸಿನಲ್ಲಿ ಇರಿಸಿಕೊಂಡೇ ಅವರೆಲ್ಲ ವ್ಯವಸ್ಥೆಯನ್ನು ನೋಡುತ್ತಿದ್ದಾರೆ. ತೆರಿಗೆ ಪ್ರಮಾಣ ಜಾಸ್ತಿ ಮಾಡುವುದಕ್ಕೆ ಯಾವ ರಾಜ್ಯದಿಂದಲೂ ವಿರೋಧ ವ್ಯಕ್ತವಾಗಿಲ್ಲ' ಎಂದು ಹೇಳಿದ್ದಾರೆ.

ಜಿಎಸ್‌ಟಿ ಮಂಡಳಿಯು ಕೆಲವು ಸರಕುಗಳಲ್ಲಿನ ತೆರಿಗೆ ಪ್ರಮಾಣದಲ್ಲಿ ಬದಲಾವಣೆಗಳನ್ನು ತರಲು ಶಿಫಾರಸು ಮಾಡಿದೆ. ಅವುಗಳ ವಿವರ ಇಲ್ಲಿದೆ

ಸರಕು/ಸೇವೆ	ಈಗಿನ ತೆರಿಗೆ (%)	ಹೊಸ ತೆರಿಗೆ (%)
ಮುದ್ರಣ, ಬರವಣಿಗೆಯಲ್ಲಿ ಬಳಸುವ ಶಾಯಿ	12	18
ಕೆಲವು ಬಗೆಯ ಚಾಕು, ಪೆನ್ಸಿಲ್ ಶಾರ್ಪನರ್, ಚಮಚ, ಫೋರ್ಕ್, ಸೌಟು, ಸ್ಕಿಮ್ಮರ್	12	18
ನೀರೆತ್ತುವ ಪಂಪ್, ಆಳ ಕೊಳವೆ ಬಾವಿ ಟರ್ಬೈನ್ ಪಂಪ್, ಸಬ್‌ಮರ್ಸಿಬಲ್ ಪಂಪ್, ಬೈಸಿಕಲ್ ಪಂಪ್	12	18
ಬೀಜ, ಧಾನ್ಯಗಳನ್ನು ಸ್ವಚ್ಛಗೊಳಿಸಲು ಹಾಗೂ ಪ್ರತ್ಯೇಕಿಸಲು ಬಳಸುವ ಯಂತ್ರ, ವೆಟ್‌ಗ್ರೈಂಡರ್	5	18
ಹಾಲು ಕರೆಯುವ ಯಂತ್ರ, ಹೈನುಗಾರಿಕೆಯಲ್ಲಿ ಬಳಸುವ ಯಂತ್ರ	12	18
ಎಲ್‌ಇಡಿ ದೀಪ	12	18
ಸೌರ ವಿದ್ಯುತ್ ಚಾಲಿತ ವಾಟರ್ ಹೀಟರ್	5	12
ಸರಕು ಮತ್ತು ಪ್ರಯಾಣಿಕರನ್ನು ರೋಪ್‌ವೇ ಮೂಲಕ ಕರೆದೊಯ್ಯುವುದು	18	5 (ಐಟಿಸಿ ಸೌಲಭ್ಯ ಇರಲಿದೆ)

ಅಡುಗೆ ಮನೆ ಉಪಕರಣ ತೆರಿಗೆ ಏರಿಕೆ

ನವದೆಹಲಿ/ಚಂಡೀಗಢ (ರಾಯಿಟರ್ಸ್/ಪಿಟಿಐ): ಅಡುಗೆ ಮನೆಯಲ್ಲಿ ಪ್ರತಿನಿತ್ಯ ಬಳಕೆಯಾಗುವ ಕೆಲವು ಉಪಕರಣಗಳು, ಕೃಷಿ ಚಟುವಟಿಕೆಗಳಲ್ಲಿ ಬಳಕೆಯಾಗುವ ಯಂತ್ರಗಳ ಮೇಲಿನ ತೆರಿಗೆ ಪ್ರಮಾಣವನ್ನು ಹೆಚ್ಚಿಸಲು ಜಿಎಸ್‌ಟಿ ಮಂಡಳಿ ಶಿಫಾರಸು ಮಾಡಿದೆ.

ಪ್ಯಾಕ್ ಮಾಡಿದ, ಲೇಬಲ್ ಇರುವ ಮಜ್ಜಿಗೆ, ಹಪ್ಪಳಕ್ಕೆ ಶೇ 5ರಷ್ಟು ತೆರಿಗೆ ವಿಧಿಸಲಾಗುತ್ತದೆ. ದಿನಕ್ಕೆ ₹ 5,000ಕ್ಕಿಂತ ಹೆಚ್ಚಿನ ಶುಲ್ಕದ ಆಸ್ಪತ್ರೆ ಕೊಠಡಿಗೆ (ಐಸಿಯು ಹೊರತುಪಡಿಸಿ) ಶೇ 5ರಷ್ಟು ತೆರಿಗೆ ವಿಧಿಸಲಾಗುತ್ತದೆ. ಇದು ಜುಲೈ 18ರಿಂದ ಜಾರಿಗೆ ಬರಲಿದೆ.

ರಸ್ತೆ, ಸೇತುವೆ, ರೈಲ್ವೆ, ಮೆಟ್ರೊ, ಕೊಳಚೆ ನೀರುವ ಶುದ್ಧೀಕರಣ ಘಟಕಗಳ ಕಾಮಗಾರಿ ಗುತ್ತಿಗೆ ತೆರಿಗೆ ಶೇ 12 ಇದ್ದಿದ್ದು, ಶೇ 18ಕ್ಕೆ ಹೆಚ್ಚಳವಾಗಲಿದೆ. ಆರ್‌ಬಿಐ, ಐಆರ್‌ಡಿಎ, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನೀಡುವ ಸೇವೆಗಳಿಗೆ ತೆರಿಗೆ ಜಾರಿಯಾಗಲಿದೆ.

ಪ್ಯಾಕ್ ಮಾಡಿರುವ, ಲೇಬಲ್ ಇರುವ ಧಾನ್ಯಗಳಿಗೆ ತೆರಿಗೆ ವಿಧಿಸುವುದರಿಂದ ಅವುಗಳ ಬೆಲೆಯು ಶೇ 5ರಷ್ಟು ಹೆಚ್ಚಳ ಆಗಬಹುದು ಎಂದು ಟ್ಯಾಕ್ಸ್ ಕನೆಕ್ಟ್ ಅಡ್ವೈಸರಿ ಸಂಸ್ಥೆಯ ಪಾಲುದಾರ ವಿವೇಕ್ ಜಲನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಅಡುಗೆ ಎಣ್ಣೆ ಹಾಗೂ ಹಾಲಿನ ಉತ್ಪನ್ನಗಳ ಬೆಲೆಯೂ ಜಾಸ್ತಿ ಆಗಬಹುದು' ಎಂದು ಅವರು ಹೇಳಿದ್ದಾರೆ.

ನಾಲ್ಕು ವರ್ಷಗಳಲ್ಲಿ 122 ಹೊಸ ಯೂನಿಕಾರ್ನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಎರಡರಿಂದ ನಾಲ್ಕು ವರ್ಷಗಳಲ್ಲಿ ದೇಶದಲ್ಲಿ ಹೊಸದಾಗಿ 122 ಯೂನಿಕಾರ್ನ್‌ಗಳು ಸೃಷ್ಟಿಯಾಗಲಿವೆ ಎಂದು ಹುರೂನ್ ಇಂಡಿಯಾ ವರದಿಯೊಂದು ಹೇಳಿದೆ.

1 ಬಿಲಿಯನ್ ಅಮೆರಿಕನ್ ಡಾಲರ್‌ಗಿಂತ (ಅಂದಾಜು ₹ 7,895 ಕೋಟಿ) ಹೆಚ್ಚಿನ ಮಾರುಕಟ್ಟೆ ಬಂಡವಾಳ ಹೊಂದಿರುವ ನವೋದ್ಯಮ ಕಂಪನಿಯನ್ನು 'ಯೂನಿಕಾರ್ನ್' ಎಂದು ಗುರುತಿಸಲಾಗುತ್ತದೆ.

ಮುಂದಿನ ಎರಡು ವರ್ಷಗಳಲ್ಲಿ ಯೂನಿಕಾರ್ನ್ ಆಗುವ ಸಾಧ್ಯತೆ ಇರುವ, ಸರಕು ಸಾಗಣೆ ವಲಯದ ನವೋದ್ಯಮ ಕಂಪನಿ 'ಶಿಪ್‌ರಾಕೆಟ್' ಅತ್ಯಂತ ಹೆಚ್ಚಿನ ಮಾರುಕಟ್ಟೆ ಮೌಲ್ಯ ಹೊಂದಿದೆ ಎಂದು 'ಆಸ್ಕ್ ಪ್ರೈವೇಟ್ ವೆಲ್ತ್ ಹುರೂನ್ ಇಂಡಿಯಾ ಫ್ಯೂಚರ್ ಯೂನಿಕಾರ್ನ್ ಇಂಡೆಕ್ಸ್' ಹೆಸರಿನ ಈ ವರದಿ ಹೇಳಿದೆ.

ದೇಶದ ನವೋದ್ಯಮಗಳ ರಾಜಧಾನಿ ಎಂಬ ಹೆಗ್ಗಳಿಕೆಯು ಈಗಲೂ ಬೆಂಗಳೂರಿಗೇ ಇದೆ. ಯೂನಿಕಾರ್ನ್ ಆಗಬಹುದಾದ 46 ನವೋದ್ಯಮಗಳು ಬೆಂಗಳೂರಿನಲ್ಲಿವೆ. ದೆಹಲಿ ಹಾಗೂ ಮುಂಬೈನಲ್ಲಿ ಇರುವ ಇಂತಹ ನವೋದ್ಯಮಗಳ ಸಂಖ್ಯೆ ಕ್ರಮವಾಗಿ 25 ಹಾಗೂ 16 ಎಂದು ವರದಿ ಹೇಳಿದೆ.

ಈ ವರದಿಯಲ್ಲಿ ಸ್ಥಾನ ಪಡೆದಿರುವ ನವೋದ್ಯಮಗಳು ಒಟ್ಟು 82 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಿವೆ.

'ದೇಶದ ನವೋದ್ಯಮ ವ್ಯವಸ್ಥೆಯು ಹಿಂದೆಂದೂ ಕಾಣದ ರೀತಿಯಲ್ಲಿ ವಿಸ್ತರಣೆ ಕಾಣುತ್ತಿವೆ. ಸಾಂಪ್ರದಾಯಿಕ ಉದ್ಯಮಗಳಲ್ಲಿ ಬದಲಾವಣೆಗೆ ಸಾಂಕ್ರಾಮಿಕವು ಕಾರಣವಾಗಿದೆ. ಇದು ನವೋದ್ಯಮಗಳು ಪ್ರವರ್ಧಮಾನಕ್ಕೆ ಬರಲು ಕೂಡ ಕಾರಣವಾಗುತ್ತಿದೆ' ಎಂದು ಹುರೂನ್ ಇಂಡಿಯಾ ಸಂಸ್ಥೆಯ ಮುಖ್ಯ ಸಂಶೋಧಕ ಅನಸ್ ರೆಹ್ಮಾನ್ ಜುನೈದ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ತಂತ್ರಜ್ಞಾನ ಆಧಾರಿತ ಉದ್ದಿಮೆಗಳನ್ನು ಪೋಷಿಸುವ ಸಂಸ್ಕೃತಿಯು ಬೆಂಗಳೂರಿನಲ್ಲಿ ಇದೆ. ಇನ್ಫೊಸಿಸ್ ಸ್ಥಾಪನೆ ಆದ ಕಾಲದಿಂದಲೂ ಈ ವ್ಯವಸ್ಥೆ ಇದೆ. ನವೋದ್ಯಮಗಳನ್ನು ಪೋಷಿಸಲು ಬೇಕಿರುವ ಸಮುದಾಯ, ಹೂಡಿಕೆದಾರರು ಮತ್ತು ಸರ್ಕಾರದ ನೀತಿಗಳು ಕೂಡ ಇಲ್ಲಿವೆ ಎಂದು ಜುನೈದ್ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಆಫೀಸರ್ಸ್ ಚಾಯ್ಸ್ ವಿಸ್ಕಿ ತಯಾರಕ ಕಂಪನಿಯಿಂದ ಐಪಿಒ

ನವದೆಹಲಿ (ಪಿಟಿಐ): ಆಫೀಸರ್ಸ್ ಚಾಯ್ಸ್ ವಿಸ್ಕಿ ತಯಾರಕ ಕಂಪನಿ ಅಲೈಡ್ ಬ್ಲೆಂಡರ್ಸ್ ಆ್ಯಂಡ್ ಡಿಸ್ಟಿಲರ್ಸ್ ಲಿಮಿಟೆಡ್, ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ₹ 2 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಪ್ರಾಥಮಿಕ ದಾಖಲೆ ಸಲ್ಲಿಸಿದೆ.

'ಜುಲೈ 1ರಿಂದ ಉಕ್ಕಿನ ಬೆಲೆ ಏರಿಕೆ ನಿರೀಕ್ಷೆ'

ನವದೆಹಲಿ (ಪಿಟಿಐ): ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವುದರಿಂದ ಉಕ್ಕಿನ ಬೆಲೆಯು ಜುಲೈ 1ರಿಂದ ಏರಿಕೆ ಆಗುವ ನಿರೀಕ್ಷೆ ಇದೆ ಎಂದು ಜಿಂದಾಲ್ ಸ್ಟೀಲ್ ಆ್ಯಂಡ್ ಪವರ್ ಲಿಮಿಟೆಡ್‌ನ (ಜೆಎಸ್‌ಪಿಎಲ್) ವ್ಯವಸ್ಥಾಪಕ ನಿರ್ದೇಶಕ ವಿ.ಆರ್. ಶರ್ಮ ಹೇಳಿದ್ದಾರೆ.

ಬೆಲೆಗಳು ಈಗಾಗಲೇ ಕೆಳಮಟ್ಟದಲ್ಲಿ ಇವೆ. ಹೀಗಾಗಿ ಇನ್ನಷ್ಟು ಇಳಿಕೆ ಮಾಡಲು ಸಾಧ್ಯವಿಲ್ಲ ಎಂದು ಕಾರ್ಯಕ್ರಮವೊಂದರ ಸಂದರ್ಭದಲ್ಲಿ ಹೇಳಿದ್ದಾರೆ.

ಕೃಷಿ ಪತ್ತಿನ ಸಹಕಾರ ಸಂಘಗಳ ಕಂಪ್ಯೂಟರೀಕರಣಕ್ಕೆ ನೆರವು

ನವದೆಹಲಿ (ಪಿಟಿಐ): ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ದೇಶದ ಒಟ್ಟು 63 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ಪಿಎಸಿಎಸ್) ಕಂಪ್ಯೂಟರೀಕರಣಕ್ಕೆ ಮುಂದಾಗಿರುವ ಕೇಂದ್ರ ಸರ್ಕಾರ, ಇದಕ್ಕಾಗಿ ಒಟ್ಟು ₹2,516 ಕೋಟಿ ಅನುದಾನ ಪ್ರಕಟಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ (ಸಿಸಿಇಎ) ಸಭೆಯಲ್ಲಿ ಇದಕ್ಕೆ ಅನುಮೋದನೆ ನೀಡಲಾಗಿದೆ. ಸಂಘಗಳ ಕಾರ್ಯದಕ್ಷತೆ ಹೆಚ್ಚಿಸುವ, ವ್ಯವಹಾರದಲ್ಲಿ ಪಾರದರ್ಶಕತೆ ಹಾಗೂ ನಿಖರತೆ ತರುವುದು ಯೋಜನೆಯ ಉದ್ದೇಶ.

'5 ವರ್ಷಗಳಲ್ಲಿ 63 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಕಂಪ್ಯೂಟರೀಕರಣಗೊಳಿಸಲು ನಿರ್ಧರಿಸಲಾಗಿದೆ. ಒಟ್ಟಾರೆ ಅನುದಾನದಲ್ಲಿ ಕೇಂದ್ರದ ಪಾಲು ₹1,528 ಕೋಟಿ ಇರಲಿದೆ. ಯೋಜನೆಯಿಂದ ಸುಮಾರು 13 ಕೋಟಿ ರೈತರಿಗೆ ನೆರವಾಗಲಿದೆ' ಎಂದು ಕೇಂದ್ರದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

'ಕ್ಲೌಡ್ ಆಧಾರಿತವಾಗಿರುವ ಏಕರೂಪದ ತಂತ್ರಾಂಶ ಅಭಿವೃದ್ಧಿಪಡಿಸುವುದು. ಸೈಬರ್ ಭದ್ರತೆಯ ಜೊತೆಗೆ ದತ್ತಾಂಶ ಸಂಗ್ರಹಣೆಗೆ ಸಹಕಾರ ನೀಡುವುದು. ಹಳೆಯ ದಾಖಲೆಗಳ ಡಿಜಿಟಲೀಕರಣಕ್ಕಾಗಿ ಸಂಘಗಳಿಗೆ ಅಗತ್ಯವಿರುವ ಹಾರ್ಡ್‌ವೇರ್ ಬೆಂಬಲ ಒದಗಿಸುವುದಕ್ಕೂ ಈ ಯೋಜನೆ ಸಹಕಾರಿಯಾಗಲಿದೆ. ಸಾಫ್ಟ್‌ವೇರ್‌ಗಳು ಸ್ಥಳೀಯ ಭಾಷೆ ಒಳಗೊಂಡಿರಲಿವೆ. ಇದರಿಂದ ಗ್ರಾಹಕರ ದಾಖಲೀಕರಣ ಸುಲಭವಾಗಲಿದೆ' ಎಂದು ಪ್ರಕಟಣೆ ತಿಳಿಸಿದೆ.

'ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬಹುತೇಕ ಸಂಘಗಳು ಬಳಸುತ್ತಿರುವ ತಂತ್ರಾಂಶಗಳಲ್ಲೂ ಏಕರೂಪತೆ ಇಲ್ಲ. ಅವು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಡಿಸಿಸಿಬಿ) ಹಾಗೂ ಎಸ್‌ಟಿಸಿಬಿಗಳೊಂದಿಗೂ ಪರಸ್ಪರ ಸಂಪರ್ಕ ಹೊಂದಿಲ್ಲ. 'ತ್ವರಿತಗತಿಯಲ್ಲಿ ಸಾಲ ಸೌಲಭ್ಯ ಒದಗಿಸುವುಕ್ಕೆ ಹಾಗೂ ಈ ಪ್ರಕ್ರಿಯೆಗೆ ತಗಲುವ ವೆಚ್ಚ ಕಡಿತಗೊಳಿಸುವುದಕ್ಕೂ ಯೋಜನೆ ನೆರವಾಗಲಿದೆ' ಎಂದೂ ಹೇಳಿದೆ.

ಬ್ರಿಟನ್‌ನಿಂದ 75 ಸ್ಕಾಲರ್‌ಷಿಪ್ ಘೋಷಣೆ

ಲಂಡನ್ (ಪಿಟಿಐ): ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ನಿಮಿತ್ತ ಸೆಪ್ಟೆಂಬರ್‌ನಿಂದ ಜಾರಿಗೆ ಬರುವಂತೆ ಬ್ರಿಟನ್‌ನಲ್ಲಿ ಶಿಕ್ಷಣ ಪಡೆಯಬಯಸುವ ಭಾರತೀಯ ವಿದ್ಯಾರ್ಥಿಗಳಿಗೆ 75 ಪೂರ್ಣಪ್ರಮಾಣದ ಸ್ಕಾಲರ್‌ಷಿಪ್ ಅನ್ನು ಬ್ರಿಟನ್ ಪ್ರಕಟಿಸಿದೆ. ಭಾರತದ ಪ್ರಮುಖ ಉದ್ಯಮ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಇದು ಜಾರಿಗೆ ಬರಲಿದೆ.

ಯು.ಕೆ. ವಿಶ್ವವಿದ್ಯಾಲಯದಲ್ಲಿ ಯಾವುದೇ ವಿಷಯದಲ್ಲಿ ಒಂದು ವರ್ಷದ ಸ್ನಾತಕೋತ್ತರ ಪದವಿಗೆ ದಾಖಲಾಗಬಹುದು. ಅಲ್ಲದೆ, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ ಸೇರಿದಂತೆ ಮಹಿಳೆಯರಿಗೆ ಬ್ರಿಟಿಷ್ ಕೌನ್ಸಿಲ್ ಆಫ್ ಇಂಡಿಯಾ 18 ವಿದ್ಯಾರ್ಥಿ ವೇತನ ಪ್ರಕಟಿಸಿದೆ. ಬ್ರಿಟನ್‌ನಲ್ಲಿನ ವಿವಿಧ 150 ವಿಶ್ವವಿದ್ಯಾಲಯಗಳಲ್ಲಿ 12 ಸಾವಿರಕ್ಕೂ ಅಧಿಕ ಕೋರ್ಸ್‌ಗಳಿಗೆ ಇದು ಅನ್ವಯವಾಗಲಿದೆ. ಇದರೊಂದಿಗೆ, ಬ್ರಿಟಿಷ್ ಕೌನ್ಸಿಲ್ ಕೂಡಾ ಆರು ಇಂಗ್ಲಿಷ್ ಸ್ಕಾಲರ್‌ಷಿಪ್ ಅನ್ನು ಪ್ರಕಟಿಸಿದೆ.

ವೃದ್ಧನನ್ನು ಕೊಠಡಿಯಲ್ಲಿ ಕೂಡಿ ಹಾಕಿ ಕಿರುಕುಳ
ಸಾಲ ಮರಳಿಸದ ಮಹಿಳೆಯರ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಆನೇಕಲ್ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಸರ್ಜಾಪುರ ಪೊಲೀಸ್ ಠಾಣೆ ವ್ಯಾಪ್ತಿಯ ನೆರಿಗಾ ಗ್ರಾಮದಲ್ಲಿ ಸಾಲ ಹಿಂದಿರುಗಿಸಲಿಲ್ಲ ಎಂಬ ಕಾರಣಕ್ಕೆ ಮಹಿಳೆಯರಿಬ್ಬರ ಮೇಲೆ ಭಾನುವಾರ ಹಲ್ಲೆ ನಡೆಸಿ, ಬಟ್ಟೆ ಹರಿದು ಹಾಕಲಾಗಿದೆ.

ನೆರಿಗಾ ಗ್ರಾಮದ ಸುಬ್ಬಾರೆಡ್ಡಿ ಅವರ ಪುತ್ರಿಯರಾದ ಶಾಂತಿಪ್ರಿಯ ಮತ್ತು ಭಾನುಪ್ರಿಯ ಅವರ ಮೇಲೆ ಆರೋಪಿಗಳಾದ ರಾಮಕೃಷ್ಣಾ ರೆಡ್ಡಿ, ಇಂದಿರಮ್ಮ ಮತ್ತು ಇವರ ಮಗ ಸುನೀಲ್ ಕುಮಾರ್ ಹಲ್ಲೆ ಮಾಡಿದ್ದಾರೆ ಎಂದು ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿದೆ.

ಶಾಂತಿಪ್ರಿಯ ಅವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಐದು ವರ್ಷಗಳ ಹಿಂದೆ ₹1 ಲಕ್ಷ ಸಾಲ ಪಡೆದಿದ್ದರು. ಇದಕ್ಕೆ ನಿಯಮಿತವಾಗಿ ಬಡ್ಡಿ ಪಾವತಿಸಿದ್ದರು. ಕೋವಿಡ್–19 ನಂತರ ಬಡ್ಡಿ ಪಾವತಿಸಿರಲಿಲ್ಲ ಎನ್ನಲಾಗಿದೆ. ಹಣ ವಸೂಲಿ ಮಾಡಲು ಬಂದ ರಾಮಕೃಷ್ಣಾರೆಡ್ಡಿ, ಇಂದಿರಮ್ಮ ಮತ್ತು ಸುನೀಲ್ ಅವರು ಶಾಂತಿಪ್ರಿಯ ಅವರ ತಂದೆ ಸುಬ್ಬಾರೆಡ್ಡಿ ಅವರನ್ನು ಕೊಠಡಿಯಲ್ಲಿ ಕೂಡಿಹಾಕಿದ್ದಾರೆ. ಬಳಿಕ ಶಾಂತಿಪ್ರಿಯ ಅವರ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ. ಈ ಸಂದರ್ಭದಲ್ಲಿ ಬಿಡಿಸಲು ಬಂದ ಭಾನುಪ್ರಿಯ ಅವರ ಬಟ್ಟೆ ಹರಿದು ಹಾಕಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.



ಹಲ್ಲೆಯಿಂದಾಗಿ ಮಹಿಳೆಯೊಬ್ಬರಿಗೆ ಗಾಯವಾಗಿರುವುದು

ವರ್ಷಕ್ಕೆ ₹1 ಲಕ್ಷಕ್ಕೆ ಶೇ 30ರಷ್ಟು ಬಡ್ಡಿ ಹಾಕಿ ಒಟ್ಟು ₹11 ಲಕ್ಷ ಪಾವತಿಸಬೇಕು ಎಂದು ಹೇಳುತ್ತಿದ್ದಾರೆ. ಸಾಲ ವಾಪಸ್ ನೀಡುವುದಾಗಿ ತಿಳಿಸಿದರೂ ಸಹ ಹಲ್ಲೆ ನಡೆಸಿದ್ದಾರೆ ಎಂದು ಶಾಂತಿಪ್ರಿಯ ಆರೋಪಿಸಿದ್ದಾರೆ.

'ಈ ಘಟನೆ ನಡೆದ ನಂತರ ಭಾನುವಾರ ಠಾಣೆಗೆ ಬಂದಿದ್ದರು. ಆದರೆ ಮಾತುಕತೆ ಮಾಡಿ ವಿವಾದ ಬಗೆಹರಿಸಿಕೊಳ್ಳುವುದಾಗಿ ಹೊರಟು ಹೋದರು. ನಂತರ ಸೋಮವಾರ ಬಂದು ದೂರು ನೀಡಿದ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಿಕೊಂಡು ರಾಮಕೃಷ್ಣಾ ರೆಡ್ಡಿ ಮತ್ತು ಸುನೀಲ್ ಅವರನ್ನು ಬಂಧಿಸಲಾಗಿದೆ' ಎಂದು ಸರ್ಜಾಪುರ ಪೊಲೀಸ್ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ರಾಘವೇಂದ್ರ ಇಮ್ರಾಪುರ ತಿಳಿಸಿದರು.

ಇಬ್ಬರು ಮಕ್ಕಳ ಕೊಂದ ತಂದೆ

ಕಲಬುರಗಿ: ಪತ್ನಿ ಬಿಟ್ಟು ಹೋದ ಕಾರಣ ಮನನೊಂದ ಆಟೊ ಚಾಲಕನೊಬ್ಬ ತನ್ನ ಇಬ್ಬರು ಪುತ್ರಿಯರನ್ನು ಆಟವಾಡಿಸಲು ಉದ್ಯಾನಕ್ಕೆ ಕರೆದೊಯ್ದು ವಾಪಸ್ ಆಟೊದಲ್ಲಿ ಕರೆತರುವಾಗ ಅವರ ಕತ್ತು ಹಿಸುಕಿ ಕೊಲೆ ಮಾಡಿದ ಘಟನೆ ವೀರೇಂದ್ರ ಪಾಟೀಲ ಬಡಾವಣೆಯಲ್ಲಿ ಮಂಗಳವಾರ ನಡೆದಿದೆ.

'ಬಂಬೂ ಬಜಾರ್ ಸಮೀಪದ ಭೋವಿಗಲ್ಲಿ ನಿವಾಸಿ ಲಕ್ಷ್ಮಿಕಾಂತ ಮಾರುತಿರಾವ್ (35) ಕೊಲೆ ಆರೋಪಿ. ಸೋನಿಯಾ (10) ಮತ್ತು ಮಯೂರಿ (8) ಮೃತ ಮಕ್ಕಳು.

'ಕೃತ್ಯ ಮಾಡಿರುವುದಾಗಿ ಆರೋಪಿ ಒಪ್ಪಿಕೊಂಡಿದ್ದು, ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಮಹಾತ್ಮ ಬಸವೇಶ್ವರನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಲಕ್ಷ್ಮಿಕಾಂತ ಪತ್ನಿ ಅಂಜಲಿ ಅವರು ನಾಲ್ಕು ಮಕ್ಕಳ ಪೈಕಿ ಇಬ್ಬರನ್ನು ಕರೆದುಕೊಂಡು ನಾಲ್ಕು ತಿಂಗಳ ಹಿಂದೆಯೇ ತವರುಮನೆಗೆ ಹೋಗಿದ್ದರು. ಆಗಿನಿಂದ ಇಬ್ಬರೂ ಪುತ್ರಿಯರ ಜವಾಬ್ದಾರಿ ಲಕ್ಷ್ಮಿಕಾಂತ ಮೇಲೆ ಇತ್ತು. ಇದರಿಂದ ಬೇಸರಗೊಂಡ ಆತ ಮಂಗಳವಾರ ಸಂಜೆ ನಗರದ ಸೇಡಂ ರಸ್ತೆಯಲ್ಲಿರುವ ವೀರೇಂದ್ರ ಪಾಟೀಲ ಬಡಾವಣೆಯ ಉದ್ಯಾನಕ್ಕೆ ಕರೆದೊಯ್ದು ಮಕ್ಕಳನ್ನು ಆಟವಾಡಿಸಿ, ನಂತರ ಆಟೊದಲ್ಲಿ ಮರಳುವಾಗ ಕೃತ್ಯವೆಸಗಿದ್ದಾನೆ' ಎಂದು ಅವರು ಹೇಳಿದ್ದಾರೆ.

ರಾತ್ರಿಯಿಡೀ ಆಟೊದಲ್ಲಿ ಮಕ್ಕಳ ಮೃತದೇಹದೊಂದಿಗೆ ಸುತ್ತಾಡಿದ ಆರೋಪಿ ಬುಧವಾರ ಬೆಳಿಗ್ಗೆ ಚೌಕ್ ಪೊಲೀಸ್ ಠಾಣೆಗೆ ಬಂದು ಶರಣಾದ. ಬಸವೇಶ್ವರ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೃತ್ಯ ನಡೆದಿದ್ದರಿಂದ ಆತನನ್ನು ಆ ಠಾಣೆಗೆ ಒಪ್ಪಿಸಲಾಯಿತು.

ಕಪಿಲ್ ದೇವ್ ನಂತರ ವೇಗಿಗೆ ಲಭಿಸಿದ ಗೌರವ
ಬೂಮ್ರಾಗೆ ನಾಯಕತ್ವ

ನವದೆಹಲಿ (ಪಿಟಿಐ): ಭಾರತ ಟೆಸ್ಟ್ ಕ್ರಿಕೆಟ್ ತಂಡಕ್ಕೆ 35 ವರ್ಷಗಳ ನಂತರ ವೇಗದ ಬೌಲರ್ ಒಬ್ಬರ ನಾಯಕತ್ವ ಲಭಿಸಿದೆ.

ಜುಲೈ 1ರಿಂದ ಆರಂಭವಾಗಲಿರುವ ಇಂಗ್ಲೆಂಡ್ ಎದುರಿನ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವನ್ನು ವೇಗಿ ಜಸ್‌ಪ್ರೀತ್ ಬೂಮ್ರಾ ಮುನ್ನಡೆಸುವರು.

ರೋಹಿತ್ ಶರ್ಮಾ ಅವರಿಗೆ ಕೋವಿಡ್ ದೃಢಪಟ್ಟಿದೆ. ಬುಧವಾರ ನಡೆದ ಎರಡನೇ ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿಯೂ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ. ಆದ್ದರಿಂದ ಅವರನ್ನು ಪ್ರತ್ಯೇಕವಾಸಕ್ಕೆ ಕಳಿಸಲಾಗಿದೆ.

1987ರಲ್ಲಿ ಕಪಿಲ್‌ದೇವ್ ಅವರನ್ನು ಭಾರತ ತಂಡದ ನಾಯಕತ್ವದಿಂದ ಕೆಳಗಿಳಿಸಲಾಗಿತ್ತು. ಅದರ ನಂತರ ಯಾವುದೇ ವೇಗದ ಬೌಲರ್ ನಾಯಕನಾಗಿ ನೇಮಕವಾಗಿರಲಿಲ್ಲ.

'ಈ ಟೆಸ್ಟ್ ಪಂದ್ಯದಲ್ಲಿ ರೋಹಿತ್ ಆಡುವುದಿಲ್ಲ. ಅವರಿಗೆ ಕೋವಿಡ್ ಇದೆ. ಕೆ.ಎಲ್. ರಾಹುಲ್ ಕೂಡ ಗಾಯಗೊಂಡಿದ್ದು ತಂಡದಲ್ಲಿ ಇಲ್ಲ. ಆದ್ದರಿಂದ ಉಪನಾಯಕರಾಗಿದ್ದ ಬೂಮ್ರಾ ಅವರಿಗೆ ನಾಯಕತ್ವ ಹೊಣೆ ವಹಿಸಲಾಗಿದೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೂಮ್ರಾ ಅವರು ಭಾರತ ಟೆಸ್ಟ್ ತಂಡದ 36ನೇ ನಾಯಕರಾಗಿದ್ದಾರೆ. ಗುಜರಾತ್ ವೇಗಿ ಇದುವರೆಗೆ 29 ಟೆಸ್ಟ್‌ಗಳಿಂದ 123 ವಿಕೆಟ್‌ಗಳನ್ನು ಗಳಿಸಿದ್ದಾರೆ. ವಿಶ್ವದ ಅಗ್ರಮಾನ್ಯ ವೇಗಿಗಳಲ್ಲಿ ಒಬ್ಬರಾಗಿದ್ದಾರೆ. ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ 'ಡೆತ್ ಓವರ್' ಪರಿಣತ ಕೂಡ ಹೌದು.



ಜಸ್‌ಪ್ರೀತ್ ಬೂಮ್ರಾ

ಭಾರತ ತಂಡದ ನಾಯಕರಾಗಿ ವೇಗದ ಬೌಲರ್‌ಗಳಿಗೆ ಅವಕಾಶ ಸಿಕ್ಕಿರುವುದು ಕಡಿಮೆ. ಪಾಕಿಸ್ತಾನ ತಂಡದಲ್ಲಿ ಹೆಚ್ಚು. ಇಮ್ರಾನ್ ಖಾನ್, ವಾಸೀಂ ಅಕ್ರಂ ಮತ್ತು ವಕಾರ್ ಯೂನಿಸ್ ಪ್ರಮುಖರಾಗಿದ್ದಾರೆ. ವೆಸ್ಟ್ ಇಂಡೀಸ್‌ನಲ್ಲಿ ಕರ್ಟ್ನಿ ವಾಲ್ಶ್, ಸದ್ಯ ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಬೌಲರ್‌ಗಳ ವಿಶ್ವ ರ‍್ಯಾಂಕಿಂಗ್‌ನಲ್ಲಿಯೂ ಅಗ್ರಸ್ಥಾನದಲ್ಲಿದ್ದಾರೆ.

ರೋಹಿತ್ ಗೈರುಹಾಜರಿಯಲ್ಲಿ ಶುಭಮನ್ ಗಿಲ್ ಅವರೊಂದಿಗೆ ಚೇತೇಶ್ವರ್ ಪೂಜಾರ ಅಥವಾ ಹನುಮವಿಹಾರಿ ಅವರಲ್ಲಿ ಒಬ್ಬರು ಇನಿಂಗ್ಸ್ ಆರಂಭಿಸುವ ಸಾಧ್ಯತೆ ಇದೆ. ರೋಹಿತ್ ಬದಲಿಗೆ ಮಯಂಕ್ ಅಗರವಾಲ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಲಾಗಿದೆ. 'ಮಯಂಕ್ ಹೆಚ್ಚುವರಿ ಆಟಗಾರನಾಗಿದ್ದಾರೆ. ಪೂಜಾರ ಮತ್ತು ಗಿಲ್ ಇನಿಂಗ್ಸ್ ಆರಂಭಿಸಲಿದ್ದಾರೆ. ಹನುಮ ವಿಹಾರಿಗೂ ಅವಕಾಶ ಸಿಗುವ ಸಾಧ್ಯತೆ ಇದೆ. 2018ರಲ್ಲಿ ಆಸ್ಟ್ರೇಲಿಯಾ ಪ್ರವಾಸದಲ್ಲಿ ವಿಹಾರಿ ಉತ್ತಮವಾಗಿ ಆಡಿದ್ದರು' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

'ಇಂಗ್ಲೆಂಡ್ ಬಲಿಷ್ಠ'

ಬೆಂಗಳೂರು: ನಮ್ಮ ಬ್ಯಾಟರ್‌ಗಳು ಭಾರತಕ್ಕೆ ಈ ಬಾರಿ ಸವಾಲಾಗಲಿದ್ದಾರೆ' ಎಂದು ಇಂಗ್ಲೆಂಡ್ ಕ್ರಿಕೆಟ್ ತಂಡದ ಆಟಗಾರ ಡೇವಿಡ್ ಮಲಾನ್ ಹೇಳಿದರು.

ಈ ಕುರಿತು ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಬುಧವಾರ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು. ಪಂದ್ಯವು ಸೋನಿ ನೆಟ್‌ವರ್ಕ್‌ನಲ್ಲಿ ನೇರ ಪ್ರಸಾರವಾಗಲಿದೆ.



ಪ್ರಶಸ್ತಿಯೊಂದಿಗೆ ಆಕಾಶ್ ಕೆ.ಜೆ. ಮತ್ತು ತೃಪ್ತಿ ಪುರೋಹಿತ್

ಟಿಟಿ: ಆಕಾಶ್, ತೃಪ್ತಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕಾಶ್ ಕೆ.ಜೆ. ಮತ್ತು ತೃಪ್ತಿ ಪುರೋಹಿತ್ ಅವರು ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 19 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಇಲ್ಲಿ ನಡೆದ ಟೂರ್ನಿಯ ಬಾಲಕರ ವಿಭಾಗದ ಫೈನಲ್‌ನಲ್ಲಿ ಆಕಾಶ್ 11-5, 11-8, 10-12, 11-7, 11-7ರಿಂದ ಪಿ.ವಿ. ಶ್ರೀಕಾಂತ್ ಕಶ್ಯಪ್ ಅವರನ್ನು ಮಣಿಸಿದರು.

ಸೆಮಿಫೈನಲ್‌ಗಳಲ್ಲಿ ಆಕಾಶ್ 11–13, 11–6, 11–9, 13–11, 9–11, 11–5ರಿಂದ ಸಮ್ಯಕ್ ಕಶ್ಯಪ್ ಸವಾಲು ಮೀರಿದರೆ, ಶ್ರೀಕಾಂತ್ ಕಶ್ಯಪ್ 11–7, 11–4, 9–11, 11–7, 11–8ರಿಂದ ವರುಣ್ ಕಶ್ಯಪ್ ಅವರನ್ನು ಸೋಲಿಸಿದ್ದರು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ತೃಪ್ತಿ ಪುರೋಹಿತ್ ಅವರು 3-11, 11-6, 11-8, 9-11, 11-7, 11-6ರಿಂದ ಸಹನಾ ಮೂರ್ತಿ ಅವರನ್ನು ಮಣಿಸಿದರು.

ನಾಲ್ಕರಘಟ್ಟದ ಪಂದ್ಯಗಳಲ್ಲಿ ಸಹನಾ ಮೂರ್ತಿ 12-10, 11-7, 11-9, 7-11, 11-7ರಿಂದ ಎ. ನಿಹಾರಿಕಾ ಎದುರು, ತೃಪ್ತಿ 6-11, 11-7, 11-5, 11- 6, 11-7ರಿಂದ ದೇಶ್ನಾ ಎಂ. ವಂಶಿಕಾ ವಿರುದ್ಧ ಗೆದ್ದಿದ್ದರು.

ಕೊಕ್ಕೊ: ಬಾದ್‌ಷಾ, ಬಾಲನ್ ಮಾಲೀಕತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವರ್ಷಾಂತ್ಯದಲ್ಲಿ ನಡೆಯಲಿರುವ ಅಲ್ಟಿಮೇಟ್ ಕೊಕ್ಕೊ ಲೀಗ್‌ಗೆ ಬಾಲಿವುಡ್ ಸ್ಪರ್ಷ ಸಿಕ್ಕಿದೆ. ಗಾಯಕ ಬಾದ್‌ಷಾ ಮತ್ತು ಸಿನಿಮಾ ನಿರ್ಮಾಪಕ ಪುನೀತ್ ಬಾಲನ್ ಜೊತೆಗೂಡಿ ಮುಂಬೈ ಫ್ರಾಂಚೈಸ್‌ನ ಮಾಲೀಕತ್ವ ತಮ್ಮದಾಗಿಸಿಕೊಂಡಿದ್ದಾರೆ.

ಡಾಬರ್ ಸಮೂಹದ ಮುಖ್ಯಸ್ಥ ಅಮಿತ್ ಬರ್ಮನ್ ಅವರು ಕೊಕ್ಕೊ ಫೆಡರೇಷನ್ ಆಫ್ ಇಂಡಿಯಾ (ಕೆಕೆಎಫ್‌ಐ) ಸಹಯೋಗದಲ್ಲಿ ಐಪಿಎಲ್ ಮಾದರಿಯಲ್ಲಿ ಫ್ರಾಂಚೈಸಿ ಆಧಾರಿತ ಕೊಕ್ಕೊ ಲೀಗ್ ಆರಂಭಿಸಲು ನಿರ್ಧರಿಸಿದ್ದಾರೆ.

ಅಲ್ಟಿಮೇಟ್ ಕೊಕ್ಕೊ ಲೀಗ್ ಸೋನಿ ನೆಟ್‌ವರ್ಕ್ ವಾಹಿನಿಯಲ್ಲಿ ನೇರಪ್ರಸಾರವಾಗಲಿದೆ.

ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ; ಹಾರ್ಮನಿ ಟಾನ್ ಜಯಭೇರಿ

ಸೆರೆನಾಗೆ ಆಘಾತ; ಜೊಕೊ ಮುನ್ನಡೆ

ವಿಂಬಲ್ಡನ್ (ಎಪಿ/ಎಎಫ್‌ಪಿ): ಅಮೆರಿಕದ ಸೆರೆನಾ ವಿಲಿಯಮ್ಸ್ 364 ದಿನಗಳ ನಂತರ ಕಣಕ್ಕಿಳಿದ ಮೊದಲ ಗ್ರ್ಯಾನ್‌ಸ್ಲಾಮ್ ಪಂದ್ಯದಲ್ಲಿಯೇ ಆಘಾತ ಅನುಭವಿಸಿದರು. ಇದರೊಂದಿಗೆ ಅವರಿಗೆ ಈ ಸಲದ ವಿಂಬಲ್ಡನ್ ಟೂರ್ನಿಯ ಪಯಣ ಅಂತ್ಯವಾಯಿತು.

ಪುರುಷರ ವಿಭಾಗದ ಸಿಂಗಲ್ಸ್‌ನಲ್ಲಿ ಹಾಲಿ ಚಾಂಪಿಯನ್ ನೊವಾಕ್ ಜೊಕೊವಿಚ್ ಮೂರನೇ ಸುತ್ತಿಗೆ ಪ್ರವೇಶಿಸಿದರು.

ಇದೇ ಮೊದಲ ಬಾರಿಗೆ ವಿಂಬಲ್ಡನ್ ಟೂರ್ನಿಯಲ್ಲಿ ಆಡುತ್ತಿರುವ ಫ್ರಾನ್ಸ್‌ನ ಹಾರ್ಮನಿ ಟ್ಯಾನ್ 7-5, 1-6, 7-6 (10-7) ಇಪ್ಪತ್ತೂರು ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳ ಒಡತಿ ಸೆರೆನಗೆ ಆಘಾತ ನೀಡಿದರು. 40 ವರ್ಷದ ಸೆರೆನಾ ವೇಗದ ಸರ್ವ್ ಮತ್ತು ಸ್ಟ್ರೋಕ್‌ಗಳನ್ನು ಪ್ರಯೋಗಿಸಿದರು. ಅವರ ಹಾವಭಾವ ಮತ್ತು ಚಲನೆಗಳಲ್ಲಿ ಆತ್ಮ ವಿಶ್ವಾಸ ತುಂಬಿತ್ತು. ಆದರೆ 115ನೇ ರ್‍ಯಾಂಕ್ ಆಟಗಾರ್ತಿ ಹಾರ್ಮನಿ ಅವರ ಸವಾಲು ಮೀರಿ ನಿಲ್ಲಲು ಸೆರೆನಾಗೆ ಸಾಧ್ಯವಾಗಲಿಲ್ಲ.

‘ಕಳೆದ ಬಾರಿಗಿಂತ ಇದು ಉತ್ತಮ ಆರಂಭ’ ಎಂದು ಸೆರೆನಾ ಪಂದ್ಯದ ನಂತರ ಹೇಳಿದರು.

ನಿವೃತ್ತಿಯ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಇದೊಂದು ಪ್ರಶ್ನೆಗೆ ಉತ್ತರಿಸಲು ಸಾಧ್ಯವಾಗುತ್ತಿಲ್ಲ. ನಂಗೊತ್ತಿಲ್ಲ. ಯಾರಿಗೆ ಗೊತ್ತು. ನಾನು ಯಾವ ಹಂತಕ್ಕೆ ಹೋಗಿ ನಿಲ್ಲುತ್ತೇನೆಂದು’ ಎಂದರು.


ಸೆರೆನಾ ಅವರು ಪಾಯಿಂಟ್ ಗಳಿಸಿದಾಗಲೆಲ್ಲ ಗಣ್ಯ ಅತಿಥಿಗಳ ಬಾಕ್ಸ್‌ನಲ್ಲಿದ್ದ ಅವರ ಅಕ್ಕ ವೀನಸ್ ಕುಣಿದು ಕುಪ್ಪಳಿಸಿ, ಸಂಭ್ರಮಿಸಿದರು.

ಜೊಕೊವಿಚ್ ಮುನ್ನಡೆ: ಸರ್ಬಿಯಾದ ನೊವಾಕ್ ಜೊಕೊವಿಚ್ ಪುರುಷರ ಸಿಂಗಲ್ಸ್‌ನಲ್ಲಿ ಮೂರನೇ ಸುತ್ತಿಗೆ ಪ್ರವೇಶಿಸಿದರು. ವಿಂಬಲ್ಡನ್ ಟೆನಿಸ್‌ನಲ್ಲಿ 16ನೇ ಬಾರಿ ಅವರು ಈ ಸಾಧನೆ ಮಾಡಿದರು.

ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಏಳು ಬಾರಿ ಪ್ರಶಸ್ತಿ ಗೆದ್ದಿರುವ ಪೀಟ್ ಸ್ಯಾಂಪ್ರಾಸ್ ದಾಖಲೆಯನ್ನು ಸರಿಗಟ್ಟುವ ಪ್ರಯತ್ನದಲ್ಲಿ ಜೊಕೊವಿಚ್ ಇದ್ದಾರೆ.

ಎರಡನೇ ಸುತ್ತಿನ ಪಂದ್ಯದಲ್ಲಿ ನೊವಾಕ್ 6-1, 6-4, 6-2ರಿಂದ ಆಸ್ಟ್ರೇಲಿಯಾದ ತನಾಸಿ ಕೊಕಿನಾಕಿಸ್ ವಿರುದ್ಧ ಗೆದ್ದರು.

ರೂಡ್, ಕೊಂಟಾವೇಟ್‌ಗೆ ಸೋಲು: ಫ್ರೆಂಚ್ ಓಪನ್ ರನ್ನರ್‌ಅಪ್ ಕಾಸ್ಪರ್ ರೂಡ್ ಅವರು ಎರಡನೇ ಸುತ್ತಿನ ಪಂದ್ಯದಲ್ಲಿ 3-6, 6-2, 7-5, 6-4ರಿಂದ ಫ್ರಾನ್ಸ್‌ನ ಯುಗೊ ಹಂಬರ್ಟ್ ಎದುರು ಎಡವಿದರು. ಮಹಿಳಾ ಸಿಂಗಲ್ಸ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಈಸ್ಟೋನಿಯಾ ಆಟಗಾರ್ತಿ ಅನೆಟ್ ಕೊಂಟಾವೇಟ್ 4-6, 0-ರಿಂದ ಅನೆಟ್ ಕೊಂಟಾವೇಟ್ ವಿರುದ್ಧ ಸೋಲು ಕಂಡರು.



ಸೋಲಿನ ಬೇಸರದಲ್ಲಿ ಸೆರೆನಾ ವಿಲಿಯಮ್ಸ್

ಮುಖ್ಯಾಂಶಗಳು

- 364 ದಿನಗಳ ನಂತರ ಗ್ರ್ಯಾನ್‌ಸ್ಲಾಂ ಕಣಕ್ಕಿಳಿದ ಸೆರೆನಾ
- ಇದೇ ಮೊದಲ ಸಲ ವಿಂಬಲ್ಡನ್‌ನಲ್ಲಿ ಆಡಿದ ಹಾರ್ಮನಿ ಟ್ಯಾನ್
- 16ನೇ ಬಾರಿ ವಿಂಬಲ್ಡನ್‌ನಲ್ಲಿ ಮೂರನೇ ಸುತ್ತಿಗೆ ಪ್ರವೇಶಿಸಿದ ನೊವಾಕ್



ಫ್ರಾನ್ಸ್‌ನ ಹಾರ್ಮನಿ ಟ್ಯಾನ್ ಸಂತಸ –ಎಎಫ್‌ಪಿ ಚಿತ್ರಗಳು

ಪ್ರೇಕ್ಷಕನೆಡೆಗೆ ಉಗುಳಿದ ನಿಕ್

ಮೊದಲ ಸುತ್ತಿನ ಪಂದ್ಯದಲ್ಲಿ ವಿಜಯ ಸಾಧಿಸಿದ ಬಳಿಕ ಆಸ್ಟ್ರೇಲಿಯಾದ ನಿಕ್ ಕಿರ್ಗಿಯೋಸ್ ಅನುಚಿತ ವರ್ತನೆ ತೋರಿದರು.

ಕಿರ್ಗಿಯೋಸ್ 3-6, 6-1, 7-5, 6-7 (3), 7-5ರಿಂದ ಬ್ರಿಟನ್‌ನ ಪಾಲ್ ಜುಬ್ ಎದುರು ಜಯಿಸಿದ ನಂತರ ಪ್ರೇಕ್ಷಕನೊಬ್ಬ ಕಡೆ ಮುಖಮಾಡಿ ಉಗುಳಿದರು.

ಈ ಕುರಿತು ಮಾತನಾಡಿರುವ ಕಿರ್ಗಿಯೋಸ್ ‘ಬಹಳ ದಿನಗಳಿಂದ ನಾನು ಕೆಲವು ಜನಗಳಿಂದ ದ್ವೇಷಿಸಲ್ಪಡುತ್ತಿದ್ದೇನೆ. ಆ ವ್ಯಕ್ತಿ ನಿಜವಾಗಿಯೂ ಯಾರನ್ನೂ ಬೆಂಬಲಿಸಲು ಬಂದಿರಲಿಲ್ಲ. ಅಗೌರವ ತೋರಲು ಬಂದಿದ್ದ’ ಎಂದರು.

ಮೂರು ವಾರಗಳ ಹಿಂದ ಜರ್ಮನಿಯ ಸ್ಟುಟ್‌ಗಾರ್ಟ್ ಟೂರ್ನಿಯಲ್ಲಿ ಪ್ರೇಕ್ಷಕರಿಂದ ತಾನು ಜನಾಂಗೀಯ ನಿಂದನೆಗೆ ಒಳಗಾಗಿದ್ದೇನೆ ಎಂದು ಕಿರ್ಗಿಯೋಸ್ ಹೇಳಿಕೊಂಡಿದ್ದರು.

‘ಚಿನ್ನದ ಹುಡುಗ’ನ ಮೇಲೆ ಕಣ್ಣು

ಡೈಮಂಡ್ ಲೀಗ್: ಪದಕದ ಭರವಸೆಯಲ್ಲಿ ನೀರಜ್

ಸ್ಟಾಕ್‌ಹೋಮ್ (ಪಿಟಿಐ): ಒಲಿಂಪಿಕ್ ಚಿನ್ನದ ಪದಕವಿಜೇತ ಜಾವೆಲಿನ್ ಅಥ್ಲೀಟ್ ನೀರಜ್ ಚೋಪ್ರಾ ಗುರುವಾರ ಆರಂಭವಾಗಲಿರುವ ಡೈಮಂಡ್ ಲೀಗ್‌ನಲ್ಲಿ ಭಾರತಕ್ಕೆ ಮೊಟ್ಟಮೊದಲ ಪದಕ ಗೆದ್ದುಕೊಡುವ ಭರವಸೆ ಮೂಡಿಸಿದ್ದಾರೆ.

ಈಚೆಗೆ ಪಾವೊ ನುರ್ಮಿ ಗೇಮ್ಸ್‌ನಲ್ಲಿ ಅವರು 89.30 ಮೀಟರ್ಸ್ ದೂರ ಜಾವೆಲಿನ್ ಎಸೆದು ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡಿದ್ದರು. ಇದಕ್ಕೂ ಮುನ್ನ 24 ವರ್ಷದ ನೀರಜ್ ಕಾರ್ಟೇನ್ ಗೇಮ್ಸ್‌ನಲ್ಲಿ 86.60 ಮೀಟರ್ಸ್ ದೂರ ಎಸೆದು ಜಯಿಸಿದ್ದರು.

ಈ ಎರಡೂ ಸ್ಪರ್ಧೆಗಳು ಫಿನ್ಲೆಂಡ್‌ನಲ್ಲಿ ನಡೆದಿದ್ದವು. ಕಠಿಣ ಪೈಪೋಟಿಯೂ ಇತ್ತು. ಟರ್ಕುನಲ್ಲಿ ನಡೆದಿದ್ದ ಪಾವೊ ನುರ್ಮಿ ಗೇಮ್ಸ್‌ನಲ್ಲಿ ಜಾವೆಲಿನ್ ಎಸೆತದ ನಂತರ ನೀರಜ್ ಜಾರಿ ಬಿದ್ದಿದ್ದರು. ಅದೃಷ್ಟವಶಾತ್ ಯಾವುದೇ ಗಂಭೀರ ಗಾಯಗಳಾಗಲಿಲ್ಲ. ಆದ್ದರಿಂದ ಅವರು ಪ್ರತಿಷ್ಠಿತ ಡೈಮಂಡ್ ಲೀಗ್‌ನಲ್ಲಿ ಪದಕ ಜಯಿಸುವ ನೆಚ್ಚಿನ ಅಥ್ಲೀಟ್ ಆಗಿದ್ದಾರೆ.

2018ರಲ್ಲಿ ಜೂರಿಚ್‌ನಲ್ಲಿ ನಡೆದಿದ್ದ ಡೈಮಂಡ್ ಲೀಗ್‌ನಲ್ಲಿ ಅವರು ನಾಲ್ಕನೇ ಸ್ಥಾನ ಪಡೆದಿದ್ದರು. ಒಟ್ಟು ಏಳು ಸಲ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ಆದರೆ ಪದಕ ಜಯಸಲು ಸಾಧ್ಯವಾಗಿಲ್ಲ.

ಸ್ವೀಡನ್ ರಾಜಧಾನಿಯಲ್ಲಿ ನಡೆಯಲಿರುವ ಈ ಕೂಟದಲ್ಲಿಯೂ ಚೋಪ್ರಾಗೆ ಕಠಿಣ ಸ್ಪರ್ಧೆ ಎದುರಾಗಲಿದೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರಿಗೆ ಸ್ಪರ್ಧೆಯೊಡ್ಡಿದವರು ಇಲ್ಲಿದ್ದಾರೆ. ಬೆಳ್ಳಿ ಪದಕ ವಿಜೇತ ಜೆಕ್ ಗಣರಾಜ್ಯದ ಜೇಕಬ್ ವಾಡ್ಲೆಚ್, ಕಂಚು ಪದಕ ವಿಜೇತ ವಿಟೆಸ್ಲಾವ್ ವೆಸ್ಲೆ ಕಣದಲ್ಲಿದ್ದಾರೆ. 90 ಮೀಟರ್‌ಗಿಂತ ಹೆಚ್ಚು ದೂರ ಎಸೆತದ ಸಾಮರ್ಥ್ಯವಿರುವ ಜರ್ಮನಿಯ ಜೊಹಾನಸ್ ವೆಟರ್ ಕೂಡ ಸ್ಪರ್ಧಿಸುವರು.

ಮುಂದಿನ ತಿಂಗಳು ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಕೂಟದ ಪೂರ್ವಭಾವಿ ಸಿದ್ಧತಾ ವೇದಿಕೆಯೂ ಆಗಿರುವ ಡೈಮಂಡ್ ಲೀಗ್‌ನಲ್ಲಿ ತುರುಸಿನ ಪೈಪೋಟಿ ನಡೆಯುವ ಸಾಧ್ಯತೆಗಳು ಹೆಚ್ಚಿವೆ.



ನೀರಜ್ ಚೋಪ್ರಾ

ಆಕ್ರಮಣಶೈಲಿ ಇಷ್ಟ: ಹೂಡಾ

ಡಬ್ಲಿನ್, ಐರ್ಲೆಂಡ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಆಡಿದ ರೀತಿಯಲ್ಲಿಯೇ ಇಲ್ಲಿಯೂ ಉತ್ತಮ ಸಾಮರ್ಥ್ಯ ತೋರಲು ಬಯಸಿದ್ದೆ. ಹೀಗಾಗಿ ಆಕ್ರಮಣಕಾರಿಯಾಗಿ ಬ್ಯಾಟ್ ಬೀಸಿದೆ ಎಂದು ಭಾರತ ಕ್ರಿಕೆಟ್ ತಂಡದ ಆಟಗಾರ ದೀಪಕ್ ಹೂಡಾ ಹೇಳಿದ್ದಾರೆ.

ಮಂಗಳವಾರ ಇಲ್ಲಿಯ ಮಾಲಹಿಡೆಯಲ್ಲಿ ನಡೆದ ಐರ್ಲೆಂಡ್ ವಿರುದ್ಧದ ಎರಡನೇ ಟಿ20 ಪಂದ್ಯದಲ್ಲಿ ಹೂಡಾ ಭರ್ಜರಿ ಶತಕ ಸಿಡಿಸಿದ್ದರು. 57 ಎಸೆತಗಳಲ್ಲಿ 104 ರನ್ ಗಳಿಸಿದ್ದ ಅವರ ಆಟದ ಬಲದಿಂದ ತಂಡವು ನಾಲ್ಕು ರನ್‌ಗಳ ರೋಚಕ ಜಯ ಸಾಧಿಸಿತ್ತು. ಎರಡು ಪಂದ್ಯಗಳ ಸರಣಿಯನ್ನು 2–0ಯಿಂದ ತನ್ನದಾಗಿಸಿಕೊಂಡಿತ್ತು.

ಆರಂಭಿಕ ಆಟಗಾರ ಇಶಾನ್ ಕಿಶನ್ ವಿಕೆಟ್ ಪತನದ ಬಳಿಕ ಮೂರನೇ ಕ್ರಮಾಂಕದಲ್ಲಿ ಆಡಿದ್ದ ಹೂಡಾ ಒಂಬತ್ತು ಬೌಂಡರಿ ಮತ್ತು ಆರು ಸಿಕ್ಸರ್ ಸಿಡಿಸಿದ್ದರು.

ಎರಡನೇ ವಿಕೆಟ್ ಜೊತೆಯಾಟದಲ್ಲಿ ಸಂಜು ಸ್ಯಾಮ್ಸನ್ (77) ಜೊತೆಗೂಡಿ ದಾಖಲೆಯ 176 ರನ್ ಗಳಿಸಿದ್ದರು. ಟಿ20 ಟೂರ್ನಿಯಲ್ಲಿ ಯಾವುದೇ ವಿಕೆಟ್‌ಗೆ ಭಾರತದ ಜೋಡಿಯಿಂದ ದಾಖಲಾದ ಗರಿಷ್ಠ ಜೊತೆಯಾಟವಿದು. 2017ರಲ್ಲಿ ರೋಹಿತ್ ಶರ್ಮಾ ಮತ್ತು ಕೆ.ಎಲ್.ರಾಹುಲ್ 165 ರನ್ ಗಳಿಸಿದ್ದು ಈ ಹಿಂದಿನ ದಾಖಲೆಯಾಗಿತ್ತು.

‘ನಾನು ಯಾವತ್ತೂ ಆರಂಭಿಕನಾಗಿ ಕಣಕ್ಕಿಳಿದಿಲ್ಲ. ಆದರೆ ಅಗ್ರಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದಾಗ ಸವಾಲುಗಳನ್ನು ಎದುರಿಸಲು ಯೋಧನಂತೆ ಸಿದ್ಧರಾಗಿರಬೇಕು. ಹೊಸ ಚೆಂಡಿನಲ್ಲಿ ಬೌಲರ್‌ಗಳು ಪರಿಣಾಮಕಾರಿಯಾಗಿರುವ ಸಂದರ್ಭದಲ್ಲಿ ಆಕ್ರಮಣಕಾರಿ ಆಗುವುದು ಅವಶ್ಯ’ ಎಂದು ಹೂಡಾ ಅಭಿಪ್ರಾಯಪಟ್ಟಿದ್ದಾರೆ.



ದೀಪಕ್ ಹೂಡಾ – ಎಎಫ್‌ಪಿ ಚಿತ್ರ

ವಿರಾಟ್ ದಾಖಲೆ ಮುರಿದ ಆಜಂ

ದುಬೈ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಟಿ20 ಕ್ರಿಕೆಟ್ ರ್‍ಯಾಂಕಿಂಗ್‌ನಲ್ಲಿ ಅತಿ ಹೆಚ್ಚು ಅವಧಿಯವರೆಗೆ ಅಗ್ರಸ್ಥಾನ ಕಾಪಾಡಿಕೊಂಡ ದಾಖಲೆಯನ್ನು ಪಾಕಿಸ್ತಾನದ ಬಾಬರ್ ಆಜಂ ಮಾಡಿದ್ದಾರೆ. ಇದರೊಂದಿಗೆ ಭಾರತದ ವಿರಾಟ್ ಕೊಹ್ಲಿ ದಾಖಲೆಯನ್ನು ಅವರು ಮೀರಿ ನಿಂತಿದ್ದಾರೆ.

ಕೊಹ್ಲಿ 1013 ದಿನಗಳವರೆಗೆ ಅಗ್ರಸ್ಥಾನ ಕಾಪಾಡಿಕೊಂಡಿದ್ದರು. ಇದೀಗ ಆಜಂ ಈ ದಾಖಲೆಯನ್ನು ಮುರಿದು ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಬುಧವಾರ ಪ್ರಕಟವಾದ ಪಟ್ಟಿಯಲ್ಲಿ ಭಾರತದ ಇಶಾನ್ ಕಿಶನ್ ಟಿ20 ರ್‍ಯಾಂಕಿಂಗ್‌ನಲ್ಲಿ ಎರಡು ಸ್ಥಾನಗಳ ಬಡ್ತಿ ಪಡೆದಿದ್ದಾರೆ. ಏಳನೇ ಸ್ಥಾನ ಪಡೆದಿದ್ದಾರೆ. ದೀಪಕ್ ಹೂಡಾ ಮತ್ತು ಸಂಜು ಸ್ಯಾಮ್ಸನ್ ಕ್ರಮವಾಗಿ 104ನೇ ಹಾಗೂ 144ನೇ ಸ್ಥಾನ ಗಳಿಸಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಹರ್ಷಲ್ ಪಟೇಲ್ 37 ರಿಂದ 33ನೇ ಸ್ಥಾನಕ್ಕೇರಿದ್ದಾರೆ.

ಸಿಂಧು, ಕಶ್ಯಪ್‌ಗೆ ಜಯ

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ: ಸೈನಾಗೆ ನಿರಾಸೆ

ಕ್ವಾಲಾಲಂಪುರ (ಪಿಟಿಐ): ಮಲೇಷ್ಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಭಾರತದ ಪಿ.ವಿ.ಸಿಂಧು ಗೆಲುವಿನ ಸಿಹಿ ಸವಿದರೆ, ಸೈನಾ ನೆಹ್ವಾಲ್ ನಿರಾಸೆ ಅನುಭವಿಸಿದರು. ಪುರುಷರ ವಿಭಾಗದಲ್ಲಿ ಪರುಪಳ್ಳಿ ಕಶ್ಯಪ್ ಶುಭಾರಂಭ ಮಾಡಿದರು.

ಮಾಜಿ ವಿಶ್ವ ಚಾಂಪಿಯನ್ ಸಿಂಧು, ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ 21-13, 21-17ರಿಂದ ಥಾಯ್ಲೆಂಡ್‌ನ ಪಾರ್ನ್‌ಪವೀ ಚೊಚುವಾಂಗ್ ಅವರನ್ನು ಸೋಲಿಸಿದರು.

ಭಾರತದ ಆಟಗಾರ್ತಿಗೆ ವಿಶ್ವ ಕ್ರಮಾಂಕದಲ್ಲಿ 10ನೇ ಸ್ಥಾನದಲ್ಲಿರುವ ಚೊಚುವಾಂಗ್ ತೀವ್ರ ಪೈಪೋಟಿಯನ್ನೇ ನೀಡಿದರು. ಅಂಗಣ ‘ಕವರ್’ ಮಾಡುವಲ್ಲಿ ಸಿಂಧು ಪಾರಮ್ಯ ಮೆರೆದರೆ, ರ್‍ಯಾಲಿಗಳಲ್ಲಿ ಉಭಯ ಆಟಗಾರ್ತಿಯರು ಸಮಬಲದ ಹೋರಾಟ ನಡೆಸಿದರು. ಫಿನಿಶಿಂಗ್ ಹೊಡೆತಗಳಲ್ಲಿ ಪರದಾಟ ಮತ್ತು ಹಲವು ಲೋಪಗಳು ಚೊಚುವಾಂಗ್ ಸೋಲಿಗೆ ಕಾರಣವಾದವು.

ಇಲ್ಲಿ ಏಳನೇ ಶ್ರೇಯಾಂಕ ಪಡೆದಿರುವ ಸಿಂಧು, ಮುಂದಿನ ಪಂದ್ಯದಲ್ಲಿ ಥಾಯ್ಲೆಂಡ್‌ನ 21 ವರ್ಷದ ಪಿಟ್ಟಾಯಪರ್ನ್ ಚೈವಾನ್ ಅವರನ್ನು ಎದುರಿಸಲಿದ್ದಾರೆ.

ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ 11-21, 17-21ರಿಂದ ಅಮೆರಿಕದ ಐರಿಸ್ ವಾಂಗ್ ಎದುರು ಮಣಿದರು.

ಕಾಮನ್‌ವೆಲ್ತ್ ಗೇಮ್ಸ್ ಮಾಜಿ ಚಾಂಪಿಯನ್ ಕಶ್ಯಪ್ ಮೊದಲ ಸುತ್ತಿನ ಪಂದ್ಯದಲ್ಲಿ 21-12, 21-17ರಿಂದ ಕೊರಿಯಾದ ಹೆವೊ ಕ್ವಾಂಗ್ ಹೀ ಅವರನ್ನು ಸೋಲಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಬಿ. ಸುಮಿತ್ ರೆಡ್ಡಿ– ಅಶ್ವಿನಿ ಪೊನ್ನಪ್ಪ 15-21, 21-19, 17-21ರಿಂದ ನೆದರ್ಲೆಂಡ್ಸ್‌ನ ರಾಬಿನ್ ಟೇಬಲಿಂಗ್ ಮತ್ತು ಸೆಲೆನಾ ಪಿಯಕ್ ವಿರುದ್ಧ ಸೋಲು ಕಂಡರು.



ಪಿ.ವಿ.ಸಿಂಧು– ಪಿಟಿಐ ಚಿತ್ರ

ಯುದ್ಧಬಾಧಿತ ಮಕ್ಕಳಿಗಾಗಿ ಚಾರಿಟಿ ಟೂರ್ನಿ: ಸ್ವಿಟೆಕ್



ವಿಂಬಲ್ಡನ್ (ಎಪಿ): ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಪೋಲೆಂಡ್ ಟೆನಿಸ್ ಆಟಗಾರ್ತಿ ಇಗಾ ಸ್ವಿಟೆಕ್ ಅವರು ಉಕ್ರೇನ್‌ನಲ್ಲಿ ಯದ್ಧದಿಂದ ಬಾಧಿತ ಮಕ್ಕಳಿಗಾಗಿ ನಿಧಿ ಸಂಗ್ರಹಿಸಲು ಚಾರಿಟಿ ಟೂರ್ನಿ ಆಯೋಜಿಸುವುದಾಗಿ ತಿಳಿಸಿದ್ದಾರೆ.

ಜುಲೈ 23ರಂದು ಪೋಲೆಂಡ್‌ನ ಕ್ರಾಕೊವ್‌ನಲ್ಲಿ ಮಿಶ್ರ ಡಬಲ್ಸ್ ವಿಭಾಗದಲ್ಲಿ ಟೂರ್ನಿ ನಡೆಯಲಿದೆ. ಉಕ್ರೇನ್‌ನ ಫುಟ್‌ಬಾಲ್ ದಿಗ್ಗಜ ಆ್ಯಂಡ್ರಿ ಸೆವಚೆಂಕೊ ವಿಶೇಷ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

‘ಉಕ್ರೇನ್ ಆಟಗಾರ್ತಿ ಎಲಿನಾ ಸ್ವಿಟೊಲಿನಾ ಈ ಟೂರ್ನಿಯ ಅಂಪೈರ್ ಆಗಿ ಕಾರ್ಯನಿರ್ವಹಿಸಲಿದ್ದಾರೆ. ಟೂರ್ನಿಯಿಂದ ಸಂಗ್ರಹವಾಗುವ ಹಣದಿಂದ ಯುದ್ಧದಿಂದ ಬಾಧಿತರಾಗಿರುವ ಮಕ್ಕಳು ಮತ್ತು ಯುವಕ/ಯುವತಿಯರಿಗೆ ನೆರವು ನೀಡಲಾಗುತ್ತದೆ’ ಎಂದು ಸ್ವಿಟೆಕ್ ತಮ್ಮ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಹೇಳಿಕೊಂಡಿದ್ದಾರೆ.

ವಯಸ್ಸಿನ ಕುರಿತು ತಪ್ಪು ಮಾಹಿತಿ ಆರೋಪ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವಾರ ಹೈದರಾಬಾದ್‌ನಲ್ಲಿ ನಡೆದ ಅಖಿಲ ಭಾರತ ಸಬ್ ಜೂನಿಯರ್ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ವಯಸ್ಸಿನ ಕುರಿತು ತಪ್ಪು ಮಾಹಿತಿ ನೀಡಿದ ಕುರಿತು ದೂರುಗಳು ಕೇಳಿಬಂದ ಬೆನ್ನಲ್ಲೇ ಮೊಹಾಲಿಯಲ್ಲಿ ನಡೆದ ಟೂರ್ನಿಯೊಂದರಲ್ಲಿ ಕ್ರೀಡಾಪಟುಗಳ ಪೋಷಕರು ಪ್ರತಿಭಟನೆ ನಡೆಸಿದ್ದಾರೆ.

ವಯಸ್ಸಿನ ತಪ್ಪು ಮಾಹಿತಿ ನೀಡಿದ ಶಂಕಿತ ಕ್ರೀಡಾಪಟುಗಳ ವಿರುದ್ಧ ಟೂರ್ನಿಯಲ್ಲಿ ಭಾಗವಹಿಸಿದ್ದ ಇನ್ನುಳಿದ ಕ್ರೀಡಾಪಟುಗಳ ಪೋಷಕರು ಈ ಕುರಿತು ಟೂರ್ನಿಯ ಆಯೋಜಕರಿಗೆ ಪತ್ರ ಬರೆದಿದ್ದಾರೆ.

54 ಮಂದಿ ಪೋಷಕರು ಈ ಪತ್ರಕ್ಕೆ ಸಹಿ ಹಾಕಿದ್ದು, 15 ಬಾಲಕಿಯರು ಮತ್ತು 21 ಬಾಲಕರು ವಯಸ್ಸಿನ ವಿಷಯದಲ್ಲಿ ವಂಚಿಸಿದ್ದಾರೆ ಎಂದು ಆರೋಪಿಸಿದ್ದಾರೆ.

ಭಾರತ ಬ್ಯಾಡ್ಮಿಂಟನ್ ಸಂಸ್ಥೆಯು ಈ ಕುರಿತು ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ತಿಳಿಸಿದೆ.

ಎಐಎಫ್‌ಎಫ್: ಕುಶಲ್ ರಾಜೀನಾಮೆ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ಪ್ರಧಾನ ಕಾರ್ಯದರ್ಶಿ ಕುಶಲ್ ದಾಸ್ ಬುಧವಾರ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

12 ವರ್ಷಗಳಿಂದ ಹುದ್ದೆಯಲ್ಲಿದ್ದ ಅವರು, ತಮ್ಮ ರಾಜೀನಾಮೆಗೆ ‘ಅನಾರೋಗ್ಯ’ದ ಕಾರಣ ನೀಡಿದ್ದಾರೆ.

ಆಗಸ್ಟ್‌ನಲ್ಲಿ ಟಿ20 ಕ್ರಿಕೆಟ್ ಟೂರ್ನಿ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಆಗಸ್ಟ್ 15 ರಿಂದ 31ರವರೆಗೆ ಟಿ20 ಕ್ರಿಕೆಟ್ ಟೂರ್ನಿ ಆಯೋಜಿಸಲಿದೆ.

ಟೂರ್ನಿಯಲ್ಲಿ ಒಟ್ಟು ಆರು ತಂಡಗಳು ಆಡಲಿವೆ. ಬೆಂಗಳೂರು ನಗರ, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ-ಧಾರವಾಡ, ರಾಯಚೂರು ಮತ್ತು ಮಂಗಳೂರನ್ನು ಈ ತಂಡಗಳು ಪ್ರತಿನಿಧಿಸಲಿವೆ. ಟೂರ್ನಿಯ ಪಂದ್ಯಗಳು ಬೆಂಗಳೂರು, ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ ನಡೆಯಲಿವೆ.

’ರಾಜ್ಯದ ವಿವಿಧ ಜಿಲ್ಲೆಗಳ ಕ್ರಿಕೆಟ್‌ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಲು ಈ ಟೂರ್ನಿ ನೆರವಾಗಲಿದೆ. ಪ್ರಾಯೋಜಕತ್ವಕ್ಕಾಗಿ ಅರ್ಹ ಕಂಪನಿಗಳಿಂದ ಅರ್ಜಿ ಕೂಡ ಆಹ್ವಾನಿಸಲಾಗಿದೆ’ ಎಂದು ಸಂಸ್ಥೆಯ ವಕ್ತಾರ ವಿನಯ್ ಮೃತ್ಯುಂಜಯ ತಿಳಿಸಿದ್ದಾರೆ.

ಬ್ಯಾಸ್ಕೆಟ್‌ಬಾಲ್ ತಂಡದಲ್ಲಿ ಕರ್ನಾಟಕದ ಪ್ರತ್ಯಾಂಶು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫಿಲಿಪಿನ್ಸ್‌ನ ಮನಿಲಾದಲ್ಲಿ ನಿಗದಿಯಾಗಿರುವ ಫಿಬಾ ವಿಶ್ವಕಪ್ ಏಷ್ಯನ್ ಅರ್ಹತಾ ಟೂರ್ನಿಗೆ (ವಿಂಡೊ 3) ಭಾರತ ಬ್ಯಾಸ್ಕೆಟ್‌ಬಾಲ್ ತಂಡವನ್ನು ಪ್ರಕಟಿಸಲಾಗಿದ್ದು, ಕರ್ನಾಟಕದ ಪ್ರತ್ಯಾಂಶು ತೋಮರ್ ಸ್ಥಾನ ಪಡೆದಿದ್ದಾರೆ.

ಜುಲೈ 3ರಿಂದ ನಡೆಯಲಿರುವ ಟೂರ್ನಿಯಲ್ಲಿ ಭಾರತ ತಂಡವು ‘ಡಿ’ ಗುಂಪಿನಲ್ಲಿ ಸ್ಥಾನ ಗಳಿಸಿದೆ.

ಜುಲೈ 6ರಿಂದ ಸಿಂಗಪುರದಲ್ಲಿ ನಿಗದಿಯಾಗಿರುವ ಫಿಬಾ 3x3 ಏಷ್ಯಾಕಪ್ ಟೂರ್ನಿಗೂ ಭಾರತ ತಂಡವನ್ನೂ ಇದೇ ವೇಳೆ ಪ್ರಕಟಿಸಲಾಗಿದೆ.

ವಿಶ್ವಕಪ್ ಅರ್ಹತಾ ಟೂರ್ನಿಗೆ ತಂಡ ಇಂತಿದೆ: ವಿಶೇಷ್ ಭೃಗುವಂಶಿ (ನಾಯಕ), ಪ್ರತ್ಯಾಂಶು ತೋಮರ್, ಮುಯಿನ್ ಬೆಕ್ ಹಫೀಜ್, ಎಂ. ಅರವಿಂದ್ ಕುಮಾರ್, ಸಹೈಜ್ ಪ್ರತಾಪ್ ಸಿಂಗ್ ಶೆಖೋನ್, ಅಮರೇಂದ್ರ ನಾಯಕ್, ವಿವೇಕ್ ವಿನುಭಾಯ್ ಗೋಟಿ, ಲಲಿತ್, ಪ್ರಣವ್ ಪ್ರಿನ್ಸ್, ಪ್ರಶಾಂತ್ ಸಿಂಗ್ ರಾವತ್, ಆರ್ಯನ್, ದೀಪಕ್ ಚೌಧರಿ.

3x3 ಏಷ್ಯಾಕಪ್‌ಗೆ ತಂಡ: ವಿಶೇಷ್ ಭೃಗುವಂಶಿ (ನಾಯಕ), ಪ್ರಶಾಂತ್ ಸಿಂಗ್ ರಾವತ್, ಸಹೈಜ್ ಪ್ರತಾಪ್ ಸಿಂಗ್ ಶೆಖೋನ್, ಮಾಣಿಕ್. ಬದಲಿ ಆಟಗಾರ: ಸೆಜಿನ್ ಮ್ಯಾಥ್ಯು

ಕೋಚ್: ವೆಸಲಿನ್ ಮ್ಯಾಟಿಚ್, ಸಹಾಯಕ ಕೋಚ್: ಥಾಂಕಚನ್ ಎಂ.ಸಿ. ವ್ಯವಸ್ಥಾಪಕ: ಆರ್. ರಾಜನ್. ಫಿಸಿಯೊ: ಶಿವ ಷಣ್ಮುಗ ಸಿಂಗ್.